ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com


ಸಂಪುಟ 5 ಸಂಚಿಕೆ 42-43

ಅಕ್ಟೋಬರ್ 23, 2011

ರೂ. 5/-

ಪುಟ 16





ಭ್ರಷ್ಟಾಚಾರದ ವಿರುದ್ಧ ಬೂಟಾಟಿಕೆ ಯಾತ್ರೆ

'ಕ್ಷೌರ ಮಾಡಿರೆಂದರೆ ಮೂಗನ್ನೇ ಕತ್ತರಿಸಿದರು'

ಮಳವಳ್ಳಿಯಲ್ಲಿ ದಲಿತರ ಮೇಲಿನ ದೌರ್ಜನ್ಯದ ಈ ಪರಿ







'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಆಂದೋಲನ

ದೇವದುರ್ಗ : ಸಾವಿನ ಕುಣಿಕೆಗೆ ಸರದಿಯಂತೆ....

ಚಿಂತನೆ: ಗಾಂಧಿ ಜಯಂತಿಗಿಂತ ಹುತಾತ್ಮ ದಿನಾಚರಣೆ ಮುಖ್ಯ

ಮಹಾತ್ಮ ಗಾಂಧಿಯವರನ್ನು ಕೋಮುವಾದಿಗಳು ನಿಂದಿಸುತ್ತಾರೆ. ನಿಂದಿಸುವುದರಲ್ಲೇ ಸಂತೋಷವನ್ನು ಹೊಂದುತ್ತಾರೆ. ಹಿಂದೂ ಕೋಮುವಾದಿಗಳು ಗಾಂಧಿಯನ್ನು ಕೊಂದೂ ಬಿಟ್ಟರು. ಮಾರ್ಕ್ಸ್‌ವಾದಿಗಳು ಗಾಂಧಿಯವರನ್ನು ನಿಂದಿಸುವುದಿಲ್ಲ. ಬದಲಿಗೆ ಭಾರತದ ಸ್ವಾತಂತ್ರ್ಯ ಚಳುವಳಿಗೆ, ಸಮಾಜಕ್ಕೆ ಅವರ ಎಲ್ಲ ಸಕಾರಾತ್ಮಕ ಕೊಡುಗೆಗಳನ್ನು ಗುರುತಿಸುತ್ತಲೇ ಗಾಂಧೀಜಿಯವರ ಬದುಕು, ಧೋರಣೆಗಳ ಕುರಿತು ಆರೋಗ್ಯಕರ ವಿಮರ್ಶೆ ಮಾಡುವಂಥದ್ದು ಕಮ್ಯುನಿಸ್ಟರ ಧೋರಣೆ. ಇದು ಸಿಪಿಐ(ಎಂ) ಮುಖಂಡ ಸೀತಾರಾಮ್ ಯೆಚೂರಿಯವರು ಮಹಾತ್ಮ ಗಾಂಧಿಯವರ ಬಗೆಗೆ ಗಾಂಧಿ ಜಯಂತಿಯ ಸಂದರ್ಭಕ್ಕೆ ಬರೆದ ಲೇಖನ. ಗಾಂಧೀಜಿಯವರ ಕುರಿತ ಮಹತ್ವದ ಒಳ ನೋಟಗಳಿಗಾಗಿ ಓದಿ ಒಂದು ವಿಶಿಷ್ಟ ಬರಹ.

ಗಾಂಧಿ ಜಯಂತಿಗಿಂತ ಹುತಾತ್ಮ ದಿನಾಚರಣೆ ಮುಖ್ಯ

ಸೀತಾರಾಂ ಯೆಚೂರಿ

ಗಾಂಧಿ ಜಯಂತಿ ಆಚರಣೆಗಿಂತ ಮಹಾತ್ಮನ ಹುತಾತ್ಮ ದಿನ ಆಚರಣೆ ಬಹಳ ಮುಖ್ಯ ಎಂದು ಪ್ರಸಿದ್ಧ ಇತಿಹಾಸಕಾರ ಹಾಗೂ ನನ್ನ ಹಿರಿಯ ಸಹಪಾಠಿ ಷಹೀದ್ ಅಮೀನ್ ಸದಾ ಹೇಳುತ್ತಿರುತ್ತಾರೆ. ಅವರು ಹೇಳುವುದರಲ್ಲಿ ಅರ್ಥ ಇದೆ. ನವದೆಹಲಿಯಲ್ಲಿ 'ತೀಸ್ ಜನವರಿ ಮಾರ್ಗ್' ಇದೆಯೇ ವಿನಃ 'ದೋ ಅಕ್ಟೋಬರ್ ಮಾರ್ಗ್' ಇಲ್ಲ. ಗಾಂಧಿಯವರ ಬದುಕು, ಕೆಲಸ ಹಾಗೂ ಭಾರತದ ಬಗೆಗಿನ ಅವರ ಕನಸುಗಳ ಕುರಿತು ನಾವು ಆಚರಣೆ ಮಾಡಬೇಕು ಮತ್ತು ಅವುಗಳನ್ನು ಬಲಪಡಿಸಬೇಕು. 'ರಾಜ್ಯ ಸಭಾ ಟಿ.ವಿ ಚಾನಲ್' ಪ್ರಾರಂಭ ಮಾಡುವಾಗ ಗಾಂಧಿಯವರ 142ನೇ ಜನ್ಮ ದಿನಾಚರಣೆಯ ಅಂಗವಾಗಿ ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಗಾಂಧಿಯವರ ಪ್ರಸ್ತುತತೆಯ ಬಗ್ಗೆ ಚರ್ಚೆ ಏರ್ಪಡಿಸಿದ್ದರು. ನನ್ನ ಸರದಿ ಬರುವಷ್ಟರಲ್ಲಿ, ಚರ್ಚೆಯಲ್ಲಿ ಭಾಗವಹಿಸಿದ್ದ ಉಳಿದವರು ಯೋಜನಾ ಆಯೋಗದ ಪ್ರಸ್ತುತ ಬಡತನ ಅಂದಾಜು, ಅಣ್ಣಾ ಹಜಾರೆ ಮತ್ತು ನರೇಂದ್ರ ಮೋದಿಯವರ ಉಪವಾಸ ಸತ್ಯಾಗ್ರಹ, ಬುದ್ಧ, ಅಂಬೇಡ್ಕರ್, ಜ್ಯೋತಿಬಾ ಫುಲೆ ಮುಂತಾದವರ ಪ್ರಸ್ತುತತೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಇತ್ಯಾದಿ ಹಲವಾರು ವಿಷಯಗಳ ಕುರಿತು ಅದಾಗಲೇ ಮಾತನಾಡಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಸಮರಶೀಲ ಹೋರಾಟದ ನೇತೃತ್ವ ವಹಿಸಿದ್ದವರು 'ನೀವು ನಮ್ಮಲ್ಲಿಗೆ ಮೋಹನ ದಾಸ ಕರಮಚಂದ್ ಗಾಂಧಿಯನ್ನು ಕಳಿಸಿದ್ದಿರಿ, ನಾವು ಮಹಾತ್ಮನನ್ನು ಹಿಂದಕ್ಕೆ ಕಳಿಸಿದೆವು' ಅಂತ ಆಗಾಗ ನಮಗೆ ನೆನಪಿಸುತ್ತಾರೆ. ಗಾಂಧಿಯವರ ಸ್ವಂತ ಬದುಕಿನಲ್ಲಿ ಮತ್ತು ಕೆಲಸದಲ್ಲಿನ ಈ ಪರಿವರ್ತನೆ ಎಂದೆಂದಿಗೂ ಪ್ರಸ್ತುತ. ಅವರು ಭಾರತಕ್ಕೆ ಹಿಂತಿರುಗಿದ ನಂತರ, ಆಗ ನಡೆಯುತ್ತಿದ್ದ ಹೋಂ ರೂಲ್ ಚಳುವಳಿಯಲ್ಲಿ ಭಾಗವಹಿಸಲು ನಿರಾಕರಿಸಿದರು; ಏಕೆಂದರೆ ಬ್ರಿಟಿಷರ ವಿರುದ್ಧದ ಯಾವುದೇ ಚಳುವಳಿಯನ್ನು ಅವರು ವಿರೋಧಿಸುತ್ತಿದ್ದರು. 'ಒಬ್ಬ ವೀಕ್ಷಕನಾಗಿ ಮತ್ತು ವಿದ್ಯಾರ್ಥಿಯಾಗಿ' ಅವರು ಇಡೀ ದೇಶವನ್ನು ಸುತ್ತಾಡಿದರು. ಭಾರತವನ್ನು ಮತ್ತು ಅದರ ಜನರನ್ನು ಅರಿಯುವ ಪ್ರಕ್ರಿಯೆಯಲ್ಲಿ ಅವರೊಬ್ಬ ಭಾರತದ ಸ್ವಾತಂತ್ರ್ಯ ಹೋರಾಟದ ಅತಿದೊಡ್ಡ ಜನನಾಯಕನಾಗಿ ಹೊರಹೊಮ್ಮಿದರು. ಇಂದಿಗೂ ಕೂಡ ಜನರನ್ನು ಅಣಿನೆರೆಸುವ ಅವರ ಸಾಮರ್ಥ್ಯಕ್ಕೆ ಸರಿಸಾಟಿಯಿಲ್ಲ.

ಉಪ್ಪಿನ ಸತ್ಯಾಗ್ರಹ ಮತ್ತು ದಂಡಿ ಮಾರ್ಚ್‌ನಂತಹ ವಿಷಯಗಳನ್ನು ಗುರುತಿಸುವ ಅವರ ವಿಲಕ್ಷಣ ಸಾಮರ್ಥ್ಯ ಜನರನ್ನು ಬಡಿದೆಬ್ಬಿಸಿ ಕಾರ್ಯಾಚರಣೆಗೆ ಇಳಿಯುವಂತೆ ಮಾಡುವ ಅವರ ಸಾಮರ್ಥ್ಯಕ್ಕೆ ಮಾತ್ರ ಸರಿಸಾಟಿಯಾಗಬಲ್ಲುದು. ಇದರ ಜತೆಯಲ್ಲೇ ಸಮರಶೀಲ ಹೋರಾಟವನ್ನು ನಿಯಂತ್ರಣಕ್ಕೆ ತರುವ ಅವರ ಸಾಮರ್ಥ್ಯ ಅವರನ್ನು ಶೋಷಿತರು ಮತ್ತು ಶೋಷಕರು ಇಬ್ಬರೂ ಒಪ್ಪುವಂತಾಯಿತು. ಅತ್ಯಂತ ದೊಡ್ಡ ಬಂಡವಾಳಗಾರನ ಮನೆಯಲ್ಲಿ ಇದ್ದುಕೊಂಡು, ಶೋಷಿತರನ್ನು ಬಡಿದೆಬ್ಬಿಸಿ ಕಾರ್ಯಾಚರಣೆಗೆ ಇಳಿಸುತ್ತಿದ್ದರು.

ಜನಪ್ರಿಯ ಹೋರಾಟದ ಚಲನಶೀಲತೆಯೊಂದು ಕ್ರಾಂತಿಕಾರಿ ರೂಪ ತಾಳುತ್ತಿದೆ ಎಂದು ಅವರಿಗೆ ಅನಿಸಿದಾಗ ಅದನ್ನು ನಿಯಂತ್ರಿಸುವ ಸಾಮರ್ಥ್ಯಕ್ಕೆ ಸಹ ಇಂದಿಗೂ ಯಾರೂ ಸರಿಸಮ ಇಲ್ಲ. ಉಪವಾಸ ಸತ್ಯಾಗ್ರಹವನ್ನು ಒಂದು ಅಸ್ತ್ರವನ್ನಾಗಿ ಮಹಾತ್ಮ ಮೊದಲು ಬಳಸಿದ್ದು 1918ರಲ್ಲಿ ಅಹಮದಾಬಾದ್ ಕಾರ್ಮಿಕ ವರ್ಗದ ಸಮರಶೀಲತೆಯನ್ನು ನಿಯಂತ್ರಿಸಲು. ಚೌರಿಚೌರಾದಲ್ಲಿ ಜನಪ್ರಿಯ ಹೋರಾಟ ಶುರುವಾದಾಗ ಅಸಹಕಾರ ಚಳುವಳಿಯನ್ನು ಅವರು ಹಿಂತೆಗೆದುಕೊಂಡಿದ್ದು ಸ್ವಾತಂತ್ರ್ಯ ಚಳುವಳಿಯನ್ನು ಐದು ವರ್ಷಗಳ ಕಾಲ ಕುಂಠಿತಗೊಳಿಸಿತು. ಕಮ್ಯುನಿಸ್ಟರು ಮಾತ್ರವಲ್ಲ ಜವಾಹರ್ ಲಾಲ್ ನೆಹರೂ ಮತ್ತಿತರ ಕಾಂಗ್ರೆಸ್ಸಿನ ನೇತಾರರೂ ಕೂಡ ಅದೇರೀತಿಯಲ್ಲಿ ಗಾಂಧಿಯ ಅಂತಹ ನಿರ್ಧಾರಗಳನ್ನು ವಿರೋಧಿಸಿದರು.



ಹುತಾತ್ಮ ಗಾಂಧಿ



ಕಟಕಟೆಯಲ್ಲಿ ಸಾವರ್‌ಕರ್

"ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಅಮಾನತು ಮಾಡಿ ನಮ್ಮ ಹೋರಾಟದ ಕೆಚ್ಚನ್ನು ಹರಣಮಾಡಿದ್ದು ಜೈಲಿನಲ್ಲಿದ್ದ ನಮ್ಮನ್ನು ನಿಬ್ಬೆರಗಾಗಿಸಿತ್ತು ಮತ್ತು ತಲ್ಲಣಗೊಳಿಸಿತ್ತು." ಎಂದು ನೆಹರು ಬರೆದಿದ್ದರು.

ಇದು ಒಂದೆಡೆಯಲ್ಲಿ ಕೋಮು ಗಲಭೆಗಳು ಹೆಚ್ಚಾಗಲು ಕಾರಣವಾದರೆ, ಮತ್ತೊಂದೆಡೆ 1924ರ ಕಾನ್ಪುರ, 1929ರ ಮೀರತ್ ಮುಂತಾದ ಪಿತೂರಿ ಮೊಕದ್ದಮೆಗಳ ಮೂಲಕ ಕಮ್ಯುನಿಸ್ಟರ ಮೇಲೆ ತೀವ್ರತರದ ದಾಳಿ ದಬ್ಬಾಳಿಕೆಯನ್ನು ನಡೆಸಲು ಅನುವಾಯಿತು. ಇದು ಅನೇಕ ಕಾಂಗ್ರೆಸ್ ನಾಯಕರ ಭ್ರಾಂತಿ ಹರಿಯಲು ಕಾರಣವಾಗಿ ಕಮ್ಯುನಿಸ್ಟರಾಗಿ ಪರಿವರ್ತನೆಗೊಳ್ಳಲು ಇಂಬು ನೀಡಿತು ಹಾಗೂ 1928ರಲ್ಲಿ ಭಗತ್ ಸಿಂಗ್ ಹಿಂದೂಸ್ತಾನ್ ಸೋಸಿಯಲಿಸ್ಟ್ ರಿಪಬ್ಲಿಕನ್ ಸೇನೆಯನ್ನು ಕಟ್ಟಲು ಪ್ರೇರೇಪಣೆ ನೀಡಿತು. ಜೆ ಎನ್ ಯು ವಿದ್ಯಾರ್ಥಿಯೊಬ್ಬನಿಂದ ಬಂದ ಪ್ರಶ್ನೆಗೆ ಉತ್ತರವಾಗಿ ನಾನು 'ಭಗತ್ ಸಿಂಗ್‌ನ ಮೊಕದ್ದಮೆ ಬಗ್ಗೆ ಬ್ರಿಟಿಷರ ಜತೆ ಗಾಂಧಿ ಮಾತನಾಡದಿರುವುದನ್ನು ನಾನೆಂದೂ ಕ್ಷಮಿಸಲಾರೆ' ಎಂದು ಹೇಳಿದೆ. ಭಗತ್ ಸಿಂಗನ ವಿರುದ್ಧ ಇದ್ದ ಮೊಕದ್ದಮೆಯು ಗಾಂಧಿಯ ಹತ್ಯೆಯಲ್ಲಿ ವೀರ ಸಾವರ್ಕರ್ ಮೇಲಿದ್ದ ಮೊಕದ್ದಮೆಗಿಂತ ದುರ್ಬಲವಾಗಿತ್ತು. ಸಾವರ್ಕರನನ್ನು ಬಿಡುಗಡೆ ಮಾಡಲಾಯಿತು. ಭಗತ್ ಸಿಂಗ್ ಕ್ಷಮಾದಾನವನ್ನಾಗಲೀ ಅಥವಾ ಮರಣದಂಡನೆಯಿಂದ ವಿಮೋಚನೆಯನ್ನಾಗಲೀ ಎಂದಿಗೂ ಒಪ್ಪುತ್ತಿರಲಿಲ್ಲ. ಆದ್ದರಿಂದ ಅವನು ನಮ್ಮ ಅಮರ ನಾಯಕನಾಗಿಯೇ ಉಳಿಯುತ್ತಾನೆ.

ಪೂರ್ಣ ಸ್ವರಾಜ್ಯಕ್ಕಾಗಿ ಭಾರತ ಕಮ್ಯುನಿಸ್ಟ್ ಪಕ್ಷದ ಪರವಾಗಿ ಮೌಲಾನಾ ಹಸ್ರತ್ ಮೋಹನಿ ಮತ್ತು ಸ್ವಾಮಿ ಕುಮಾರ್ ಆನಂದ್ ರವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಹಮದಾಬಾದ್ ಅಧಿವೇಶನದಲ್ಲಿ ಮಂಡಿಸಿದ್ದ ನಿರ್ಣಯವನ್ನು ಗಾಂಧಿ ವಿರೋಧಿಸಿದ್ದರು ಕೂಡ. ಕಾಂಗ್ರೆಸ್ ಅಂತಿಮವಾಗಿ 1930ರ ಲಾಹೋರ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಅಂಗೀಕರಿಸಿತು.

ಉಪ್ಪಿನ ಸತ್ಯಾಗ್ರಹ ಮತ್ತು ದಂಡಿ ಮಾರ್ಚ್‌ನಂತಹ ವಿಷಯಗಳನ್ನು ಗುರುತಿಸುವ ಅವರ ವಿಲಕ್ಷಣ ಸಾಮರ್ಥ್ಯ ಜನರನ್ನು ಬಡಿದೆಬ್ಬಿಸಿ ಕಾರ್ಯಾಚರಣೆಗೆ ಇಳಿಯುವಂತೆ ಮಾಡುವ ಅವರ ಸಾಮರ್ಥ್ಯಕ್ಕೆ ಮಾತ್ರ ಸರಿಸಾಟಿಯಾಗಬಲ್ಲುದು. ಇದರ ಜತೆಯಲ್ಲೇ ಸಮರಶೀಲ ಹೋರಾಟವನ್ನು ನಿಯಂತ್ರಣಕ್ಕೆ ತರುವ ಅವರ ಸಾಮರ್ಥ್ಯ ಅವರನ್ನು ಶೋಷಿತರು ಮತ್ತು ಶೋಷಕರು ಇಬ್ಬರೂ ಒಪ್ಪುವಂತಾಯಿತು. ಅತ್ಯಂತ ದೊಡ್ಡ ಬಂಡವಾಳಗಾರನ ಮನೆಯಲ್ಲಿ ಇದ್ದುಕೊಂಡು, ಶೋಷಿತರನ್ನು ಬಡಿದೆಬ್ಬಿಸಿ ಕಾರ್ಯಾಚರಣೆಗೆ ಇಳಿಸುತ್ತಿದ್ದರು.

ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತ ಗಣತಂತ್ರಕ್ಕಾಗಿ ಗಾಂಧಿ ತನ್ನೆಲ್ಲ ಇತರ ಕನಸುಗಾರರ ಸಹಾಯ ಪಡೆದು ಸ್ವಾತಂತ್ರ್ಯ ಹೋರಾಟವನ್ನು ಯಶಸ್ವಿಯಾಗಿ ಮುನ್ನಡೆಸಿದರು. ಅಂತಹ ಭಾರತದ ಕನಸನ್ನು ನನಸುಮಾಡಲು ಹಗಲಿರುಳೂ ದುಡಿದದ್ದಕ್ಕಾಗಿ ಮತ್ತು ಜನರನ್ನು ಮುನ್ನಡೆಸಿದ್ದಕ್ಕಾಗಿ ಗಾಂಧಿ ಹತ್ಯೆಗೊಳಗಾಗಿ ಹುತಾತ್ಮರಾದರು.

ಅವರ ಹತ್ಯೆಯ ನಂತರ, ಹೋರಾಟದ ಹೊಸ ಹಂತ ಪ್ರಾರಂಭವಾಯಿತು: ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ವಿವೇಕಶೂನ್ಯ ಅಸಹನೀಯ ಫ್ಯಾಸಿಸ್ಟಿಕ್ ಆರ್‌ಎಸ್‌ಎಸ್‌ನ 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವ ಆಕಾಂಕ್ಷೆಯನ್ನು ಇಂದಿಗೂ ಪೋಷಿಸುತ್ತಿರುವ ಕೋಮುವಾದಿ ಶಕ್ತಿಗಳ ದಾಳಿಗಳಿಂದ ಆಧುನಿಕ ಭಾರತದ ಕನಸನ್ನು ರಕ್ಷಿಸುವುದು ಹೇಗೆ ಎನ್ನುವುದೇ ದೊಡ್ಡ ಸವಾಲಾಗಿದೆ.

ಗಾಂಧಿ ಪ್ರತಿಮೆಗೆ ಮೋದಿ ಮಾಲಾರ್ಪಣೆ ಮಾಡುತ್ತಿರುವ ಚಿತ್ರದಷ್ಟು ಸ್ಪಷ್ಟವಾಗಿ ಬೇರಾವುದೂ ಈ ಅಪಾಯದ ಸುಳಿವು ನೀಡಲು

ಪುಟ 10ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ದಲಿತರ ಮೇಲೆ ನಿಲ್ಲದ ದೌರ್ಜನ್ಯಗಳು ಸರಕಾರದ ನಿರ್ಲಕ್ಷ್ಯ

ಬಿಟ್ಟಿ ಚಾಕರಿಯನ್ನು ನಿರಾಕರಿಸಿದ ಕಾರಣಕ್ಕೆ ಕಳೆದಾರು ತಿಂಗಳಿನಿಂದಲೂ ಬಹಿಷ್ಕಾರದ ಬೇಗೆಯಲ್ಲಿ ಬೇಯುತ್ತಿರುವ ನವಲಗುಂದದ ದಲಿತರ ಧಾರುಣ ಸ್ಥಿತಿಯ ಸಂಗತಿಗಳು ಹೊರ ಬರುತ್ತಿರುವಾಗಲೇ ತಮಗೆ ಕ್ಷೌರ ಮಾಡಬೇಕೆಂದು ಹಕ್ಕೊತ್ತಾಯ ಮಾಡಿದ ಮಳವಳ್ಳಿ ತಾಲ್ಲೂಕಿನ ಕಿರುಗಾವಲಿನಲ್ಲಿ ದಲಿತನ ಮೂಗು ಕತ್ತರಿಸಿದ ಘಟನೆ ನಡೆದದ್ದು ದಿಗ್ಭ್ರಮೆ ಹುಟ್ಟಿಸುವುದಾಗಿದೆ. ಇಂತಹ ಘಟನೆಗಳು ಕೇವಲ ಅಕಸ್ಮಿಕವು ಅಲ್ಲ, ಕೊನೆಯದ್ದೂ ಅಲ್ಲ ಎಂಬುದು ಮತ್ತೇ ಮತ್ತೇ ನಡೆಯುತ್ತಲೇ ಬಂದ ಘಟನೆಗಳಿಂದ ಮನವರಿಕೆಯಾಗುವಂತಹದ್ದು. ಇಂತಹ ಘಟನೆಗಳು ನಡೆದಾಗ ಸರ್ಕಾರದ ಒಲ್ಲದ ಮನಸ್ಸಿನ ಹೇಳಿಕೆಗಳು, ತಡೆಯುವ ಭರವಸೆಗಳಿಗೆ ಕವಡೆಯ ಕಿಮ್ಮತ್ತನ್ನೂ ನೀಡದಿರುವುದು ಕಾಣುತ್ತದೆ. ಹೀಗಾಗಿ ಎಷ್ಟೇ ಕಾನೂನು, ಸಮಿತಿಗಳು, ಇಲಾಖೆಗಳಿದ್ದರೂ ಅವ್ಯಾವುವೂ ದಲಿತರ ಪಾಲಿಗೆ ಇಲ್ಲವಾಗಿದೆ.

ತೀರಾ ಇತ್ತೀಚಿನಲ್ಲೇ ಹಾನಗಲ್‌ನಲ್ಲಿ ದಲಿತರ ಮೇಲೆ ಹಲ್ಲೆ ನಡೆದು ಹುಬ್ಬಳ್ಳಿ ಆಸ್ಪತ್ರೆಗೆ ಸೇರಿದ್ದು, ಸಚಿವ ಉದಾಸಿಯವರ ಕುಮ್ಮಕ್ಕಿನಿಂದಲೇ ದೌರ್ಜನ್ಯ ಎಸಗಲಾಗಿದೆಯೆಂದು ಹಾಸಿಗೆ ಸಮೇತ ಪ್ರತಿಭಟಿಸಲಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕೊಸಬಿನ ಹಳ್ಳಿಯಲ್ಲಿ ಗಣೇಶನ ಹಬ್ಬದಲ್ಲಿ ಹಲಗೆ ಬಾರಿಸಲು ನಿರಾಕರಿಸಿದರೆಂಬ ಕಾರಣಕ್ಕೆ ದಲಿತರ ಮೇಲೆ ಬಹಿಷ್ಕಾರ ಹೇರಲಾಗಿದೆ. ಹುಣಸೂರಿನ ವಡಂಬಾಳು ಗ್ರಾಮದಲ್ಲಿ ಜಮೀನ್ದಾರರ ದನಗಳ ಸಗಣಿಯನ್ನು ಬಳಿಯಲು ದಲಿತ ಮಹದೇವ ನಿರಾಕರಿಸಿದನೆಂಬ ಕಾರಣಕ್ಕೆ ಆತನ ಪಿತ್ರಾರ್ಜಿತ ಆಸ್ತಿಯನ್ನೇ ವಶಪಡಿಸಿ ಕೊಂಡಿದ್ದಾರೆ. ಇದರಿಂದಾಗಿ ಆಮರಣ ಉಪವಾಸ ನಡೆಸಲಾಗಿದೆ. ಈಗಲೂ ಕೆ.ಆರ್. ನಗರದ 500 ರಷ್ಟು ದಲಿತರು ಅವರ ಜಮೀನಿನಲ್ಲಿ ಜಮೀನ್ದಾರರಿಗೆ ತಿಪ್ಪೆ ಮಾಡಲು ಬಿಡಲಿಲ್ಲ ಎಂಬ ಕಾರಣಕ್ಕೆ ಬಹಿಷ್ಕಾರವನ್ನು ಎದುರಿಸುತ್ತಿದ್ದು, ಕೆಲಸವೇ ಇಲ್ಲದೇ ನರಳುತ್ತಿದ್ದಾರೆ. ಇಂತಹ ಅನೇಕ ಘಟನೆಗಳು ನಡೆಯುತ್ತಲೇ ಇವೆ. ದಲಿತರ ಮೇಲಿನ ಇಂತಹ ದೌರ್ಜನ್ಯಗಳು ಮಂಡ್ಯ ಹಾಗೂ ಸಾಂಸ್ಕೃತಿಕ ರಾಜಧಾನಿ ಎನ್ನಲಾಗುತ್ತಿರುವ ಮೈಸೂರು ಜಿಲ್ಲೆಗಳಲ್ಲಿ ಅತೀ ಹೆಚ್ಚು ಎಂದು ವರದಿಗಳು ತಿಳಿಸುತ್ತವೆ. ಹಾಗೆಯೇ ಪ. ಜಾತಿ, ಪ. ಪಂಗಡಗಳ ಕುರಿತ ರಾಜ್ಯ ಆಯೋಗದ ವರದಿಯು ದಕ್ಷಿಣ ಭಾರತದ ಕರ್ನಾಟಕ ದಲ್ಲೇ ಇಂತಹ ದೌರ್ಜ್ಯನ್ಯಗಳು ಹೆಚ್ಚು ಎಂದಿರುವುದು ಪರಿಸ್ಥಿತಿಯ ಗಂಭೀರತೆಗೆ ಹಿಡಿದ ಕನ್ನಡಿಯಾಗಿದೆ.


ಇಂತಹ ದೌರ್ಜನ್ಯಗಳಿಗೆ ಇಂದಿನ ಅಸಮಾನತೆ, ಶೋಷಣೆ ಪ್ರಧಾನವಾದ ವರ್ಗ–ಜಾತಿ ತಾರತಮ್ಯದ ಭೂಮಾಲೀಕ, ಬಂಡವಾಳಶಾಹಿ ವ್ಯವಸ್ಥೆ ಕಾರಣವಾಗಿದೆ. ದೌರ್ಜನ್ಯಕ್ಕೆ ಈಡಾಗುವ ದಲಿತರು ಬಹುತೇಕ ಭೂರಹಿತ ಕೂಲಿಕಾರರು, ಸಾಮಾಜಿಕವಾಗಿ, ಅರ್ಥಿಕವಾಗಿ, ಸಾಂಸ್ಕೃತಿಕವಾಗಿ ತೀವ್ರ ಥರದ ದಮನಕ್ಕೆ ಈಡಾದವರು. ಮೇಲ್ಜಾತಿ, ಮೇಲ್ವರ್ಗಗಳಿಂದ ಆಸ್ಪೃಶ್ಯತೆಯಂತಹ ಸುಮಾರು 64 ಬಗೆಯ ತಾರತಮ್ಯಗಳಿಗೆ ದಲಿತರು ಒಳಗಾಗಿದ್ದಾರೆ. ಬಿಟ್ಟಿ ಚಾಕರಿ ನಿರಾಕರಣೆ, ತಮ್ಮ ಹಕ್ಕುಗಳ ಬಗೆಗಿನ ಜಾಗೃತಿ– ಸಮರ್ಥನೆ, ಸಮಾನತೆಯ ಆಶಯಗಳು ದಮನಕ್ಕೆ ಈಡಾಗಿವೆ. ಅವರ ಕನಿಷ್ಠ ಕೇಳಿಕೆಗೂ ಬೆಲೆಯೇ ಇಲ್ಲವೆಂಬ ಸಂಗತಿಯು ಮಲ ಮೈ ಮೇಲೆ ಸುರಿದು ಕೊಂಡು ಪ್ರತಿಭಟಿಸಿದ ಘಟನೆಗಳೇ ಸಾಕ್ಷಿ ನೀಡುತ್ತವೆ.

ಇಲ್ಲಿ ಮುಖ್ಯ ಪ್ರಶ್ನೆಯೆಂದರೆ ಇಂತಹ ಘಟನೆಗಳು ನಡೆದಾಗ ನಮ್ಮ ಸಮಾಜ ಹೇಗೆ ಪ್ರತಿಕ್ರಿಯಿಸುತ್ತದೆ? ಎಂಬುದು. ಬಹಳಷ್ಟು ಪ್ರತಿಕ್ರಿಯೆಗಳು ಜಾತಿ ಆಧಾರದಲ್ಲೆ ಬರುವುದು ದುರಂತ. ಅದಕ್ಕಿಂತಲೂ ಮುಖ್ಯವಾಗಿ ಸಂವಿಧಾನಾತ್ಮಕ ಹಕ್ಕು, ಜನರ ರಕ್ಷಣೆ ಮಾಡಲು ಬದ್ಧವೆಂದು ಘೋಷಿಸಿಕೊಂಡ ನಾಗರೀಕ(?) ಸರ್ಕಾರದ ಕ್ರಮಗಳೇನು ಎಂದೂ ಯೋಚಿಸಿದಾಗ ಅತ್ಯಂತ ನಿರಾಶಾದಾಯಕ ಮಾತ್ರವಲ್ಲ ತೀರಾ ಪಕ್ಷಪಾತದಿಂದ, ಜಾತಿದ್ವೇಷದ ಪ್ರಭಾವದಿಂದ ಕೂಡಿವೆಯೆಂಬುದನ್ನು ಗಮನಿಸಬೇಕು. ಇಂತಹ ಸ್ಥಿತಿಯಲ್ಲಿ ಕೋಮುದ್ವೇಷವನ್ನು ಜನರ ವಿಭಜನೆ, ಜಾತಿವಾದೀ ವರ್ಣ ವ್ಯವಸ್ಥೆಯನ್ನು ಪ್ರತಿವಾದಿಸುವ ಮನುವಾದಿ ಸರ್ಕಾರ ಅಧಿಕಾರದಲ್ಲಿದ್ದಾಗ ಪರಿಸ್ಥಿತಿ ಇನ್ನಷ್ಟು ಘೋರ ಎಂಬುದು ರಾಜ್ಯದ ಪ್ರಸಂಗದಲ್ಲಿ ನೋಡುತ್ತಿದ್ದೇವೆ. ಬಿಜೆಪಿ ಸಂಘಪರಿವಾರವು ತನ್ನ ನಡೆ ನುಡಿಗಳಿಂದ ಮೇಲ್ ಜಾತಿಗಳ ಓಲೈಕೆಗೆ ತೊಡಗಿರುವುದು, ದಲಿತರು, ದುರ್ಬಲರ ಮೇಲೆ ದೌರ್ಜನ್ಯ ಹೆಚ್ಚಾಗಲು ಒಂದು ಪ್ರಮುಖ ಕಾರಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಪೋಲೀಸ್ ಇಲಾಖೆ ದೂರನ್ನು ದಾಖಲಿಸುವುದಿಲ್ಲ. ಒತ್ತಾಯದ ಬಳಿಕ ದಾಖಲಿಸಿದರೂ ಕ್ರಮಗಳನ್ನು ಕೈಗೊಳ್ಳದೇ ಮೇಲ್ವರ್ಗಗಳ ಹಿತಗಳನ್ನು ರಕ್ಷಿಸುತ್ತದೆ. ದಲಿತರ ವಿಷಯಗಳ ಕುರಿತ ಸಮಿತಿಗೆ ಮುಖ್ಯಮಂತ್ರಿಯೇ ಅಧ್ಯಕ್ಷರಾಗಿದ್ದರೂ, ಕಾಲಕಾಲಕ್ಕೆ ಸಭೆ ಸೇರಬೇಕೆಂಬ ನಿರ್ದೇಶನವಿದ್ದರೂ ಅದು ಸೇರುತ್ತಲೇ ಇಲ್ಲದಿರುವುದು ಸರ್ಕಾರದ ಪ್ರಜ್ಞಾಪೂರ್ವಕ ನಿರ್ಲಕ್ಷ್ಯ ,ಅನಾಗರೀಕ ವರ್ತನೆಗೆ ಒಂದು ನಿದರ್ಶನ .ಇಷ್ಟೆಲ್ಲಾ ಘಟಿಸುತ್ತಿದ್ದರೂ ಅಭಿವೃದ್ಧಿಯ ಮಂಕು ಬೂದಿ ಎರಚುತ್ತಾ ಕಾಲ ತಳ್ಳುತ್ತಿರುವುದು ಅಮಾನವೀಯ, ಖಂಡನೀಯ.

ಈ ಹಿನ್ನೆಲೆಯಲ್ಲಿ ಸರ್ಕಾರ ಸಂವಿಧಾನ, ಕಾನೂನಿಗೆ ಅನುಗುಣವಾಗಿ ಕಾರ್ಯವೆಸಗಬೇಕು. ಮುಖ್ಯಮಂತ್ರಿಗಳು ದಲಿತರ ಸ್ಥಿತಿ, ಎದುರಿಸುತ್ತಿರುವ ಸಮಸ್ಯೆಗಳು, ದೌರ್ಜನ್ಯಗಳ ಕುರಿತಾಗಿ ಚರ್ಚಿಸಲು ಸಭೆ ತಕ್ಷಣ ಕರೆದು ಆಡಳಿತಕ್ಕೆ ನಿರ್ದೇಶನ. ನೀಡಬೇಕು ಸದಾನಂದಗೌಡರು ನಾಗರೀಕ ಹಕ್ಕುಗಳನ್ನು ಗೌರವಿಸಿ ತನ್ನ ಕರ್ತವ್ಯ ಪಾಲನೆಗೆ ಮುಂದಾಗಲೇಬೇಕು.

ಶ್ರೀರಾಮುಲು ರಾಜಿನಾಮೆ ಅಂಗೀಕಾರ ಬ್ಲಾಕ್‌ಮೇಲ್‌ಗೆ ಹೊಸತಂತ್ರ

ಅಂತೂ ಇಂತೂ ಸಭಾದ್ಯಕ್ಷ ಬೋಪಯ್ಯನವರು ಮಾಜಿ ಸಚಿವ ಶ್ರೀರಾಮುಲುರವರ ರಾಜೀನಾಮೆಯನ್ನು ಅಂಗೀಕರಿಸುವ ದೊಡ್ಡ ಮನಸು ಮಾಡಿಬಿಟ್ಟಿದ್ದಾರೆ.ಇದರಲ್ಲಿ ಅವರು ತಮ್ಮ ಸ್ವಯಂ ನಿರ್ಣಯದ ಹಕ್ಕನ್ನು ಚಲಾಯಿಸಿದ್ದಾರೆ ಎಂದು ಕೊಂಡರೆ ಅದು ಖಂಡಿತ ತಪ್ಪಾಗುತ್ತದೆ. ಶ್ರೀರಾಮುಲು ರಾಜೀನಾಮೆ ಕೊಟ್ಟಿದ್ದು ಸೆಪ್ಟಂಬರ್ ....ರಂದು. ಅಂಗೀಕರಿಸಿದ್ದು ಅಕ್ಟೋಬರ್ 13 ರಂದು. ಅಂದರೆ ಒಂದು ತಿಂಗಳಿಗೂ ಹೆಚ್ಚಿನ ಕಾಲ ಬೆಚ್ಚಗೇ ತಮ್ಮಲ್ಲಿ ಇರಿಸಿಕೊಂಡಿದ್ದರು. ಹಿಂದೆಲ್ಲಾ ಬಿ ಜೆ ಪಿ ಯೇತರ ಶಾಸಕರು ಆಪರೇಷನ್ ಕಮಲದಲ್ಲಿ ರಾಜೀನಾಮೆ ನೀಡಿದಾಗ ಕೆಲವೇ ಕ್ಷಣಗಳಲ್ಲಿ ಅದನ್ನು ಅಂಗೀಕರಿಸಿದ್ದು ಈಗ ಇಲ್ಲದ್ದು ಯಾಕೆಂಬುದು ಗುಟ್ಟಿನ ಸಂಗತಿಯೇನಲ್ಲ. ಅಕ್ರಮ ಗಣಿಗಾರಿಕೆಯ ಹಗರಣಗಳ ಕುರಿತ ಲೋಕಾಯುಕ್ತರ ವರದಿಯ ಹಿನ್ನೆಲೆಯಲ್ಲಿ ಮುಖ್ಯ ಮಂತ್ರಿ ಬದಲಾವಣೆ ಬಳಿಕ ರಚನೆಗೊಂಡ ಸಂಪುಟದಲ್ಲಿ ರೆಡ್ಡಿ ಕಂಪನಿಯ ಯಾರೊಬ್ಬರೂ ಇಲ್ಲದೇ ಹೋದದ್ದರಿಂದ ಕನಿಷ್ಟ ತಮ್ಮನ್ನು ಸೇರಿಸಿಕೊಳ್ಳಲೇಬೇಕೆಂದು ಒತ್ತಡ ಸೃಷ್ಟಿಸುವ ತಂತ್ರದ ಭಾಗವಾಗಿ ಶ್ರೀರಾಮುಲು ಶಾಸಕತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದು, "ಮನವೊಲಿಸುವ 'ಅರ್ಥಾತ್ ರಾಜೀಮಾಡಿಕೊಳ್ಳುವಲ್ಲಿ ಆದ ವಿಳಂಬವೇ ಸ್ಪೀಕರ್‌ರವರ ನಿರ್ಧಾರವೂ ವಿಳಂಬವಾಗಲು ಕಾರಣ. ಈ ಒಟ್ಟು ಪ್ರಕರಣದಲ್ಲಿ ಸಭಾದ್ಯಕ್ಷರ ನಡವಳಿಕೆ, ಇದರ ದುರುದ್ದೇಶಗಳೂ ಜಗಜ್ಜಾಹೀರಾದವು.ಅವರು ಗೌರವಾನ್ವಿತ ಸಭಾದ್ಯಕ್ಷರು ಎನ್ನುವುದಕ್ಕಿಂತ ಸಂಘನಿಷ್ಟರು ಎಂದು ತೋರಿಸಿದರು.



ಮತ್ತೊಂದು ಚುನಾವಣೆ

ಈ ರಾಜೀನಾಮೆ ಅಂಗೀಕಾರದಿಂದ ತಕ್ಷಣವೇ ಪ್ರಮಾಣ ವಚನದ ಪ್ರಶ್ನೆ ಇಲ್ಲವಾಗಿದೆ. ಆದರೆ ಮತ್ತೊಂದು ಉಪ ಚುನಾವಣೆಗೆ ಕಣ ಸಿಧ್ಧವಾಗಿದೆ,ಮತ್ತೊಮ್ಮೆ ಚುನಾವಣೆಯಲ್ಲಿ ಗೆದ್ದು ಬಂದು ಬಿಟ್ಟರೆ ಅಕ್ರಮಗಳ ಪಾಪವೆಲ್ಲಾ ತೊಳೆದು ಹೋಗಿ ಜನಾದೇಶ ಸಿಕ್ಕು ಪರಿಶುಧ್ಧನಾಗಿದ್ದೇನೆಂದು ಮಂಕು ಬೂದಿ ಎರಚಬಹುದೆಂದು ರೆಡ್ಡಿ ಕಂಪನಿ ಭಾವಿಸಿದೆ. ಅಂದರೆ ಈಗಲೂ ಈ ನೆಲದ ಕಾನೂನು, ಸಂವಿಧಾನ ಮತ್ತು ಸಾರ್ವಜನಿಕ ನೈತಿಕ ಮೌಲ್ಯಗಳಿಗೆ ಕವಡೆ ಕಿಮ್ಮತ್ತು ನೀಡುವುದಿಲ್ಲ ಎಂದೇ ಹೇಳುತ್ತಿದ್ದಾರೆ. ಇಂತಹ ನಾಟಕಗಳಿಂದ ಬಿಜೆಪಿ ಬಚಾವಾಗಬಹುದೆಂದು ಭಾವಿಸಿರಬಹುದು. ಆದರೆ ಕರ್ನಾಟಕ ಮತ್ತು ದೇಶಕ್ಕೆ ಅಪಾಯ ತಪ್ಪಿದ್ದಲ್ಲ.


ಅಭಿನಂದನೀಯ ಕಾರ್ಯಕ್ರಮ – ಮುಂದೆ?

ಕಳೆದ ವಾರ ಕರಾವಳಿ, ಸಮಾಜ ಸುಧಾರಣೆಯ ಹಾದಿಯಲ್ಲಿ ಅತ್ಯಂತ ಗಮನಾರ್ಹ ಘಟನೆಗೆ ಸಾಕ್ಷಿಯಾಗಿದೆ. ತನ್ನ ಬಾಳ ಸಂಗಾತಿಯನ್ನು ಕಳೆದುಕೊಂಡ ಕಾರಣಕ್ಕೆ ವಿಧವೆಯೆಂಬ ಮೂದಲಿಕೆಯಿಂದ ಸಮಾಜದ ಎಲ್ಲಾ ಆಚರಣೆಗಳಿಂದ ಮೂಲೆಗೊತ್ತಲ್ಪಟ್ಟ ಮಹಿಳೆಯರಲ್ಲಿ ಆತ್ಮಸ್ಥೈರ್ಯದ ಒಂದು ಬೆಳಕು ಮೂಡಿದೆ. ಮಂಗಳೂರಿನ ಕುದ್ರೋಳಿ ಗೋಕರ್ಣ ನಾಥೇಶ್ವರನ ದೇವಾಲಯದಲ್ಲಿ ನವರಾತ್ರಿ ಸಂದರ್ಭದಲ್ಲಿ ಆಯೋಜಿಸಲ್ಪಟ್ಟ ಕಾರ್ಯಕ್ರಮವು ಅಂತಹ ಮಹಿಳೆಯರು 'ಮಂಗಳಕಾರ್ಯ'ಗಳಲ್ಲಿ ತೊಡಗಿಸುವ ಮೂಲಕ ಹಿಂದೂ ಧರ್ಮದಲ್ಲಿರುವ ಮೌಢ್ಯತೆ, ಸ್ತ್ರೀಯರ ಬಗೆಗಿನ ತಾರತಮ್ಯ, ಅರ್ಥಹೀನ ಸನಾತನ ಆಚರಣೆಗಳನ್ನು ಪ್ರಶ್ನಿಸಿದ್ದಾಗಿದೆ. ಈ ಕಾರ್ಯಕ್ರಮ ಸಮಾಜ ಸುಧಾರಕ ನಾರಾಯಣ ಗುರು ಅವರ ಸ್ಮರಣೆಯಲ್ಲಿ ನಡೆದದ್ದು. ಅದನ್ನು ಸಂಘಟಿಸಿದ ಜನಾರ್ದನ ಪೂಜಾರಿ ಒಳಗೊಂಡು ಕಾರಣವಾದ ಎಲ್ಲರೂ ಅಭಿನಂದಾನಾರ್ಹರು. ಅದರಲ್ಲೂ

ಪುಟ 11 ಕ್ಕೆ

ಕಾರ್ಟೂನ್ ಕಾರ್ನರ್





ಬದಲಾವಣೆಗೆ ದಿಕ್ಸೂಚಿಯಾಗಲಿ ಈ ಸಮಾವೇಶ

ರಟ್ಟೆಯ ಬಿಟ್ಟರೆ ಆಸ್ತಿಯೇ ಇಲ್ಲದ ಬಡವರು ... ಬಗ್ಗರು.. ಎಂಬ ಕವಿವಾಣಿಯು ರಕ್ತ-ಬೆವರನ್ನು ಬಸಿದು - ದೇಹವನ್ನು ದಂಡಿಸಿ ತುಂಡು ಹೊಟ್ಟೆ ತುಂಬಿಸಿಕೊಳ್ಳಲು ನಿತ್ಯ ಹೆಣಗಾಡುವ ಹಮಾಲಿ ವೃತ್ತಿ ಮಾಡುವ ಕಾರ್ಮಿಕರಿಗೆ ಅಕ್ಷರಶಃ ಅನ್ವಯಿಸುತ್ತದೆ.

ಇಂತಹ ವಿಭಾಗವನ್ನು ಸಂಘಟಿಸುವುದೆಂದರೆ ಅತ್ಯಂತ ಸವಾಲಿನ ಕೆಲಸ. ಕಳೆದ ಹತ್ತಾರು ವರ್ಷಗಳಿಂದ ಈ ಕಾರ್ಮಿಕರನ್ನು ಸಂಘಟಿಸುತ್ತಿರುವ ನಮಗೆ ಈ ಸತ್ಯ ಮತ್ತಷ್ಟು ಸ್ಪಷ್ಟವಾಗಿ ಗೋಚರಿಸುತ್ತಿದೆ. ತೀರ ಅನಕ್ಷರಸ್ಥ ವಿಭಾಗದ ಈ ಕಾರ್ಮಿಕರು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಶೋಷಣೆಗೊಳಗಾದವರು. ನಿಲ್ಲಲು ನೆಲೆ ಇಲ್ಲದ, ಉಳಲು ಭೂಮಿ ಇಲ್ಲದ ಈ ಸಮುದಾಯ ಅಂತಿಮವಾಗಿ ಬದುಕಿಗಾಗಿ ಕಂಡುಕೊಳ್ಳುವ 'ನ್ಯಾಯಮಾರ್ಗವೇ ಈ ಹಮಾಲಿ'.. 15-16 ವರ್ಷದಿಂದಲೇ ಕೌಟುಂಬಿಕ ಆರ್ಥಿಕ, ಸಾಮಾಜಿಕ ಕಾರಣಗಳಿಂದಾಗಿ ಈ ವೃತ್ತಿಗೆ ಕಾಲಿಡುವ ಈ ಯುವಕರು 35-40 ವರ್ಷವಾಗುತ್ತಲೇ ಹತ್ತು ಹಲವು ರೋಗ ರುಜಿನಗಳಿಗೆ ತುತ್ತಾಗಿ, ಬಸವಳಿದಿರುತ್ತಾರೆ. ಜೊತೆಗೆ ಅವರ ದೈಹಿಕ ಕಠಿಣ ದುಡಿಮೆಯ ಪರಿಣಾಮ ಮತ್ತು ಕುಟುಂಬದ ಹಿನ್ನೆಲೆಯಿಂದ ಕುಡಿತ - ಧೂಮಪಾನ-ತಂಬಾಕು ಮೊದಲಾದ ದುಶ್ಚಟಗಳಿಗೆ ದಾಸರಾಗಿ ತಮ್ಮ ಬದುಕನ್ನೇ ಅಂತಿಮವಾಗಿ ನರಕಮಯಗೊಳಿಸಿಕೊಳ್ಳುವವರು ಇವರು. ಇಂತಹ ಪರಿಸ್ಥಿತಿಯಿಂದ ಈ ಕಾರ್ಮಿಕರನ್ನು ಹೊರತರುವ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ರಾಜ್ಯದ ಹಲವಾರು ಜಿಲ್ಲೆ-ತಾಲ್ಲೂಕು-ಪಟ್ಟಣಗಳಲ್ಲಿ ಜಾಗೃತಗೊಂಡ ಕಾರ್ಮಿಕರು - ಮುಖಂಡರು-ಕಾರ್ಮಿಕ ಸಂಘಗಳು ಹಲವು ಯತ್ನಗಳನ್ನು ನಡೆಸಿದ್ದಾರೆ. ಆದರೆ ಈ ಪ್ರಯತ್ನಗಳು ವ್ಯವಸ್ಥಿತವಾಗಿ ಮುಂದುವರೆದಿಲ್ಲ. ಹಾಗಾಗಿ ಈ ಕಾರ್ಮಿಕರು ಸರ್ಕಾರದಿಂದ, ಅವರನ್ನು ದುಡಿಸಿಕೊಳ್ಳುವ ಮಾಲೀಕರಿಂದ ಕನಿಷ್ಠ ನ್ಯಾಯಬದ್ಧವಾಗಿ ಸಿಗಬೇಕಾದ ಸೌಲಭ್ಯಗಳನ್ನು ಇದುವರೆಗೂ ಪಡೆಯಲು ಸಾಧ್ಯವಾಗಿಲ್ಲ.



ಆದರೆ ರಾಜ್ಯದ ಸಿರುಗುಪ್ಪ - ಗಂಗಾವತಿ ಮೊದಲಾದ ಕಡೆಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಅಲ್ಲಿನ ಹಮಾಲಿ ಕಾರ್ಮಿಕರು ವ್ಯವಸ್ಥಿತವಾಗಿ-ಸಂಘಟಿತರಾಗಿ ದೀರ್ಘ ಹೋರಾಟಗಳನ್ನು ನಡೆಸಿದ ಪರಿಣಾಮ ಬೋನಸ್, ನಿರಂತರ ಕೂಲಿ ಹೆಚ್ಚಳ, ಭವಿಷ್ಯ



ನಿಧಿ, ವಿಮಾ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದೆ.

ಉಳಿದಂತೆ ರಾಜ್ಯದ ಬಹುತೇಕ ಹಮಾಲಿ ಕಾರ್ಮಿಕರಿಗೆ ಈ ಸೌಲಭ್ಯಗಳು ಈಗಲೂ ಮರೀಚಿಕೆಯಾಗಿವೆ. ಮತ್ತು ಈ ಎಲ್ಲಾ ಸೌಲಭ್ಯಗಳನ್ನು ನಮಗಿವೆ ಎಂಬ ಕನಿಷ್ಠ ತಿಳುವಳಿಕೆಯು ಈ ಕಾರ್ಮಿಕರಲ್ಲಿ ಇಲ್ಲ. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ನೇತೃತ್ವದಲ್ಲಿ ಎಲ್ಲೆಲ್ಲಾ ಹಮಾಲಿ ಕಾರ್ಮಿಕರು ಸಂಘಟಿತರಾಗುತ್ತಿದ್ದಾರೋ ಅಲ್ಲೆಲ್ಲಾ ಅಧಿಕಾರಿಗಳು, ಸರ್ಕಾರದ ಪ್ರತಿನಿಧಿಗಳು, ಮಾಲೀಕರು, ಅವರ ಬೇಡಿಕೆಗಳನ್ನು ಕುರಿತು ಚರ್ಚಿಸಲು - ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಪ್ರಯತ್ನಿಸಿದ್ದಾರೆ. ಆದರೆ ಲಕ್ಷಾಂತರ ಸಂಖ್ಯೆಯಲ್ಲಿರುವ ಈ ಕಾರ್ಮಿಕರಲ್ಲಿ ನಮ್ಮ ಪ್ರಯತ್ನ ಯಾತಕ್ಕೂ ಸಾಲದು. ಒಟ್ಟಾರೆ ಈ ಕಾರ್ಮಿಕ ವಿಭಾಗದಲ್ಲಿ ಸಂಘಟನೆ - ಜನಜಾಗೃತಿ ಬರದೆ ಹೊರತು ಅವರ ಬದುಕಿನಲ್ಲಿ ಬದಲಾವಣೆ ಸಾಧ್ಯವಿಲ್ಲ ಮತ್ತು ಕಾರ್ಮಿಕರ ಬಗ್ಗೆ ಸರ್ಕಾರದ ಮೇಲೆ ಯಾವುದೇ ಒತ್ತಡ ಹಾಕಲು ಸಾಧ್ಯವಾಗುವುದಿಲ್ಲ.

ಹಾಗಾಗಿ ಹಮಾಲಿ ಕಾರ್ಮಿಕರ ಸಂಘಟನೆ ಮತ್ತು ಚಳುವಳಿಯನ್ನು ಬಲಪಡಿಸುವುದು ಇವತ್ತಿನ ತೀರ ಅನಿವಾರ್ಯ. ಈ ಹಿನ್ನೆಲೆಯಲ್ಲಿ ಹಮಾಲಿ ಕಾರ್ಮಿಕರಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವ ಮತ್ತು ಒಂದು ಮಾರುಕಟ್ಟೆ ವ್ಯವಸ್ಥೆಯೊಳಗಡೆ ಕೇಂದ್ರೀಕರಣಗೊಂಡು ಕೆಲಸ ಮಾಡುವ ಎಂಪಿಎಂಸಿ ಹಮಾಲಿ ಕಾರ್ಮಿಕರು ಇದರ ನೇತೃತ್ವ ವಹಿಸಿಕೊಳ್ಳಬೇಕು. ಆ ದಿಸೆಯಲ್ಲಿ ಎಪಿಎಂಸಿ ಹಮಾಲಿ ಕಾರ್ಮಿಕರಲ್ಲಿ ಸಂಘಟನೆ, ಜಾಗೃತಿಗಾಗಿ ನಡೆಸಲಾಗುತ್ತಿರುವುದೇ ಈ 2ನೇ ರಾಜ್ಯ ಸಮ್ಮೇಳನ.

2008 ರ ಸೆಪ್ಟೆಂಬರ್ 5 ರಂದು ಇಂತಹ ಪ್ರಯತ್ನವನ್ನು ಮೊದಲ ಸಮಾವೇಶದ ಮೂಲಕ ಹುಬ್ಬಳ್ಳಿಯಲ್ಲಿ ಆರಂಭಿಸಲಾಗಿತ್ತು. ಆ ನಂತರ ರಾಜ್ಯದಲ್ಲಿ ಹಮಾಲರಲ್ಲಿ ಸಾಕಷ್ಟು ಜಾಗೃತಿ ಮೂಡಿದೆ ಮತ್ತು ಚಳುವಳಿ ರೂಪಿಸಲು ಸಾಧ್ಯವಾಗಿದೆ. ಪರಿಣಾಮವಾಗಿ ಹಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ ಅದು ಮತ್ತಷ್ಟು ಫಲಪ್ರದವಾಗಬೇಕಾದರೆ ಮತ್ತಷ್ಟು ವ್ಯವಸ್ಥಿತ ಸಂಘಟನೆ ಅಗತ್ಯ. ಈ ದಿಶೆಯಲ್ಲಿ ಮುಂಬರುವ 'ಬೆಳಕಿನ ಹಬ್ಬ ದೀಪಾವಳಿ' ಗಿಂತ ಗಂಗಾವತಿಯಲ್ಲಿ ನಡೆಸುತ್ತಿರುವ 2ನೇ ಎಪಿಎಂಸಿ ಹಮಾಲಿ ಕಾರ್ಮಿಕರ ಸಮಾವೇಶ ನೊಂದ ಹಮಾಲಿ ಕಾರ್ಮಿಕರ ಬದುಕನ್ನು ಬದಲಿಸುವ ಬೆಳಕಿನದಿಕ್ಸೂಚಿಯಾಗಲಿ. ▲

ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಒತ್ತಾಯಿಸಿ ಪ್ರತಿಭಟನೆ

ಕೋಲಾರ: ಉದಾರೀಕರಣ ನೀತಿಗಳನ್ನು ಜಾರಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಕಾರ್ಮಿಕರ ಶೋಷಣೆ ಹೆಚ್ಚಾಗುತ್ತಿದ್ದು, ಕಾರ್ಮಿಕರ ಹಕ್ಕುಗಳನ್ನು ರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ಸಿಐಟಿಯು ವತಿಯಿಂದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಜಾಗತಿಕ ಕಾರ್ಮಿಕ ಸಂಘಗಳ ಒಕ್ಕೂಟ (ಫಾಈಖಿಗ) ದ ಕರೆಂಯು ಮೇರೆಗೆ ಹಮ್ಮಿಕೊಂಡಿದ್ದ ಈ ಪ್ರತಿಭಟನೆಗೆ ಮುನ್ನ ನಗರದ ಪ್ರವಾಸಿಮಂದಿರದಿಂದ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಛೇರಿ ತಲುಪಿದರು.

ಜಾಗತೀಕ ಉದಾರೀಕರಣ ನೀತಿಗಳು ಜಗತ್ತಿನಾದ್ಯಂತ ತೀವ್ರಗತಿಂಯುಲ್ಲಿ ಜಾರಿಯಾಗುತ್ತಿರುವ ಸಂದರ್ಭದಲ್ಲಿ ಕೈಗಾರಿಕಾ ಉದ್ದಿಮೆದಾರರು ತಮ್ಮ ಲಾಭವನ್ನು ಸತತವಾಗಿ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಆದರೆ ಕಾರ್ಮಿಕರ ಮತ್ತು ನೌಕರರ ನಿಜ ಆದಾಯ ಕಡಿಮೆ ಆಗುತ್ತಿದೆ. ಇನ್ನೊಂದೆಡೆಯಲ್ಲಿ ಭಾರತವೂ ಸೇರಿದಂತೆ ಬಂಡವಾಳಶಾಹಿ ಸರ್ಕಾರಗಳು ವಿಶ್ವಬ್ಯಾಂಕ್, ಐಎಂಎಫ್ ಮತ್ತು ಬಹುರಾಷ್ಟ್ರೀಂಯ ಬಂಡವಾಳಗಾರರ ಒತ್ತಡಕ್ಕೆ ಮಣಿದು, ಸಾಲದ ಷರತ್ತುಗಳಿಗೆ ಒಳಗಾಗಿ, ಸಾರ್ವಜನಿಕ ವೆಚ್ಚ ಕಡಿತ ಹೆಸರಲ್ಲಿ, ಇದುವರೆಗೆ ಜಾರಿಯಲ್ಲಿದ್ದ ನಿವೃತ್ತಿ ವೇತನ ಮೊದಲಾದ ಸಾಮಾಜಿಕ ಭದ್ರತಾ ಸವಲತ್ತುಗಳನ್ನು ಕಸಿದುಕೊಳ್ಳಲು ಆರಂಭಿಸಿದೆ ಎಂದು ದೂರಲಾಯಿತು.

ಪ್ರತಿಭಟನೆಯುನ ನೇತೃತ್ವವನ್ನು ಸಿಐಟಿಂಯು ಜಿಲ್ಲಾಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ, ಜಿಲ್ಲಾ ಉಪಾಧ್ಯಕ್ಷರಾದ ಜಿ.ಅರ್ಜುನನ್, ಪ್ರಧಾನ ಕಾರ್ಯದರ್ಶಿ ಬಿ.ಎಸ್.ನಾಗರತ್ನ, ಮುಖಂಡರಾದ ಹೆಚ್.ಎಂ.ಯಲ್ಲಪ್ಪ, ಮುನಿರಾಜಮ್ಮ, ಈಶ್ವರಮ್ಮ, ಬಿ.ವಿ.ಸಂಪಂಗಿ ಮತ್ತಿತರರು ವಹಿಸಿದ್ದರು. □



ಬಾಗೇಪಲ್ಲಿ

ಗ್ರಾಮ ಪಂಚಾಯ್ತಿ ನೌಕರರ ಬೇಡಿಕೆಗಳಿಗೆ ಒತ್ತಾಯಿಸಿ

ಅನಿರ್ದಿಷ್ಟಾವಧಿ ಧರಣಿ

ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ತಾಲ್ಲೂಕು ಪಂಚಾಯ್ತಿ ಕಛೇರಿ ಮುಂದೆ ಸೆಪ್ಟೆಂಬರ್ 05 ರಂದು ಬಾಗೇಪಲ್ಲಿ ತಾಲ್ಲೂಕು ಗ್ರಾಮ ಪಂಚಾಯ್ತಿ ನೌಕರರು ಸಿ.ಐ.ಟಿ.ಯು ನೇತೃತ್ವದಲ್ಲಿ ಅನಿರ್ದಿಷ್ಟ ಕಾಲ ಧರಣಿಯನ್ನು ನಡೆಸಿದರು. ಇದಕ್ಕೂ ಮೊದಲು ಗೂಳೂರು ವೃತ್ತದಿಂದ ಪಟ್ಟಣದ ಬಸ್ ನಿಲ್ದಾಣದ ವರೆಗೂ ರ್‍ಯಾಲಿಯನ್ನು ನಡೆಸಲಾಯಿತು. ರ್‍ಯಾಲಿಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಅನಿರ್ದಿಷ್ಟ ಕಾಲ ಧರಣಿಯಾದ್ದರಿಂದ ಅಡುಗೆಯನ್ನು ತಾಲ್ಲೂಕು ಪಂಚಾಯ್ತಿ ಕಛೇರಿ ಮುಂದೆ ಮಾಡಿದರು.

ಧರಣಿ ನಿರತರನ್ನು ಉದ್ದೇಶಿಸಿ ಜಿಲ್ಲಾ ಗ್ರಾಮ ಪಂಚಾಯ್ತಿ ನೌಕರರ ಸಂಘದ ಅಧ್ಯಕ್ಷರು ಹಾಗೂ ಸಿ.ಐ.ಟಿ.ಯು ಜಿಲ್ಲಾ ಅಧ್ಯಕ್ಷರೂ ಆದ ಸಿದ್ದಗಂಗಪ್ಪ ಮಾತನಾಡಿ ಈ ಹೋರಾಟ ಒಂದು ದಿನದ ಹೋರಾಟವಲ್ಲ, ಇದು ಅನಿರ್ದಿಷ್ಟಕಾಲ ಹೋರಾಟ. ಬೇಡಿಕೆಗಳು ಈಡೇರುವ ತನಕ ನಾವು ಇಲ್ಲಿಂದ ಎದ್ದು ಹೋಗುವುದಿಲ್ಲ. ಅದು ಒಂದು ದಿನವಾದರೂ ಸರಿ– ಎಂಟು ದಿನವಾದರೂ ಕೈ ಬಿಡುವ ಪ್ರಶ್ನೆಯೇ ಇಲ್ಲ. ಹಾಗೆಯೇ ಈ ಹೋರಾಟ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ತೀವ್ರವಾಗುವುದು. ಬಿಲ್ ಕಲೆಕ್ಟರ್‌ಗೆ 5,350/– ವಾಟರ್ ಮ್ಯಾನ್‌ಗೆ 4,950/– ಜಾಡಮಾಲಿಗೆ 4,100/– ನಂತೆ ನಿಗದಿಯಾಗಿರುವ ಸಂಬಳವನ್ನು ಈ ಕೂಡಲೇ ಜಾರಿಗೊಳಿಸಬೇಕು. 1948ರಲ್ಲಿ ಜಾರಿಯಾಗಿರುವ ಕಾರ್ಮಿಕ ಕಾಯ್ದೆಯಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುವರಿಗೆ ಕನಿಷ್ಠ ಕೂಲಿ ನೀಡಬೇಕೆಂಬ ಕಾನೂನು ಇದೆ. ಇದರ ಪ್ರಕಾರ ಕನಿಷ್ಠ ವೇತನವಾದರೂ ಕೊಡಲೇ ಬೇಕು. ಇಲ್ಲವೆಂದರೆ ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಬಹುದು. ಆಗ 1ಕ್ಕೆ 10 ರಷ್ಟು ದಂಡ ಕಟ್ಟಿಕೊಡಬೇಕಾಗುತ್ತದೆ. ಸರ್ಕಾರದಿಂದ ಬರುವ ಅನುದಾನದಲ್ಲಿ ಶೇಕಡ 40ರಷ್ಟು ಗ್ರಾಮ ಪಂಚಾಯ್ತಿ ನೌಕರರಿಗೆ ವೇತನಕ್ಕೆ ಮೀಸಲಿಡಬೇಕು ಎನ್ನುವುದು ಈ ಕೂಡಲೆ ಜಾರಿಗೆ ಬರಬೇಕು ಎಂದು ಒತ್ತಾಯಿಸಿದರು.

ನಂತರ ಮಾತನಾಡಿದ ಬಾಗೇಪಲ್ಲಿ ತಾಲ್ಲೂಕು ಗ್ರಾಮ ಪಂಚಾಯ್ತಿ ನೌಕರರ ಸಂಘದ ಗೌರವಾಧ್ಯಕ್ಷರಾದ ವೈ.ಆರ್.ವೆಂಕಟೇಶ್‌ಬಾಬು ಕಳೆದ ಅಕ್ಟೋಬರ್‌ನಲ್ಲಿ ಬೆಂಗಳೂರ್‌ನಲ್ಲಿ ಬೃಹತ್ ಚಳುವಳಿ ಮಾಡಿದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನೀಡಿದ ಭರವಸೆಗಳನ್ನು ಸರಿಯಾಗಿ ಜಾರಿ ಮಾಡಿಲ್ಲ. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯ್ತಿಯ ಬಳಿ ಚಳುವಳಿ ಮಾಡಿದ್ದರ ಬಗ್ಗೆ ಜಿಲ್ಲಾ ಪಂಚಾಯ್ತಿ ವತಿಯಿಂದ ಅಕ್ಟೋಬರ್ 12,2010 ರಂದು ಆದೇಶ ಮಾಡಿದರೂ ಇದುವರೆವಿಗೂ ಯಾವುದೇ ಗ್ರಾಮ ಪಂಚಾಯ್ತಿಗಳು ಆದೇಶವನ್ನು ಜಾರಿಗೆ ಮಾಡಿರುವುದಿಲ್ಲ. ಬೇಡಿಕೆಗಳ ಈಡೇರಿಕೆಗೆ ಸಂಬಂಧಪಟ್ಟ ಅಧಿಕಾರಿಗಳು ಅಶ್ವಾಸನೆ ನೀಡಿದರು. ಆದರೆ ಇದುವರೆವಿಗೂ ಯಾವುದೇ ಆದೇಶ ಜಾರಿ ಮಾಡಿರುವುದಿಲ್ಲ. ಆದ್ದರಿಂದ ನಮ್ಮ ಮುಖ್ಯ 8 ಬೇಡಿಕೆಗಳಿಗಾಗಿ ಒತ್ತಾಯಿಸಿ ಅನಿರ್ದಿಷ್ಟ ಕಾಲ ಧರಣಿಯನ್ನು ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಿದೇವಮ್ಮ ಮಾತನಾಡಿ ಇಷ್ಟೊಂದು ಕಷ್ಟಗಳನ್ನು ಎದುರಿಸಿಕೊಂಡು ನೌಕರರು ಕೆಲಸ ಮಾಡುತ್ತಿದ್ದಾರೆ. ಈ ಹೋರಾಟಕ್ಕೆ ಅಂಗನವಾಡಿ ನೌಕರರ ಸಂಘ ಬೆಂಬಲ ವ್ಯಕ್ತಪಡಿಸುತ್ತಿದೆ ಎಂದರು. ಜಿಲ್ಲಾ ಸಿ.ಐ.ಟಿ.ಯು ಮುಖಂಡರಾದ ಮುನಿಕೃಷ್ಣ ಸಹ ಮಾತನಾಡಿದರು. ನಂತರ ಡಿ.ವೈ.ಎಫ್.ಐ ಅಧ್ಯಕ್ಷರಾದ ರಘುನಾಥರೆಡ್ಡಿ ರವರು ಸಹ ಈ ಹೋರಾಟಕ್ಕೆ ಬೆಂಬಲವನ್ನು ನೀಡಿದರು.

ವರದಿ : ಜಿ.ಮುಸ್ತಾಫ್

ಹೋರಾಟದ ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ಜಯರಾಂ ಮಾತನಾಡಿ ನೀವು ಬೆಳಿಗ್ಗೆಯಿಂದ ಮಾಡುತ್ತಿರುವ ಹೋರಾಟದಿಂದ ನಿಮ್ಮ ಬೇಡಿಕೆಗಳ ಬಗ್ಗೆ ತಿಳಿದುಕೊಂಡು ಎಲ್ಲಾ ಪಿಡಿಓಗಳು ಹಾಗೂ ಕಾರ್ಯದರ್ಶಿಗಳ ಜೊತೆ ಸಭೆ ನಡೆಸಿ ಎಲ್ಲೆಲ್ಲಿ ಏನೇನು ಕೊರತೆ ಇದೆ ಎಂಬುದನ್ನು ಪರಿಶೀಲಿಸಿದ್ದೇನೆ. ಹಾಗೆಯೇ ನಿಮ್ಮ ಸಿ.ಐ.ಟಿ.ಯು ಪದಾಧಿಕಾರಿಗಳ ಜೊತೆ ಚರ್ಚಿಸಿದ್ದೇನೆ. ಒಂದು ತಿಂಗಳು ಕಾಲಾವಕಾಶ ಕೇಳಿದ್ದೇವೆ ಅದರೊಳಗೆ ನಿಮ್ಮ ವೇತನ ಹಾಗೂ ಕೆಲಸದ ಅನುಮೋದನೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇನೆ. ಆದ್ದರಿಂದ ಈ ಕೂಡಲೇ ಈ ಹೋರಾಟವನ್ನು ಕೈಬಿಡಬೇಕೆಂದು ಕೋರಿಸಿದರು.

ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾದ ವೆಂಕಟರಾಮಯ್ಯ, ಕಾರ್ಯದರ್ಶಿ ಸುಧಾಕರ, ಬಾಬುರೆಡ್ಡಿ ಹಾಗೂ ಈ ಹೋರಾಟಕ್ಕೆ ಬೆಂಬಲ ನೀಡಿದ್ದ ಡಿ.ವೈ.ಎಫ್.ಐ ನ ಚನ್ನರಾಯಪ್ಪ, ಮುನಿವೆಂಕಟಪ್ಪ, ಗೋವರ್ಧನಾಚಾರಿ, ರಾಮುಲಿಂಗಪ್ಪ ಮುಂತಾದವರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.

✣


ಬಿಸಿ ಊಟ ನೌಕರರ ಬೇಡಿಕೆ ಈಡೇರಿಕೆಗಾಗಿ ಪ್ರತಿಭಟನೆ

ಅಕ್ಷರದಾಸೋಹ ರಾಜ್ಯ ಸಮಿತಿಯ ಕರೆಯ ಮೇರೆಗೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ 01–10–2011 ರಂದು ಬಿಸಿ ಊಟ ನೌಕರರು ತಾಲ್ಲೂಕು ಕಛೇರಿ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು. ಡಾ॥ ಹೆಚ್.ಎನ್. ವೃತ್ತದಿಂದ ಪಟ್ಟಣದ ಬಸ್ ನಿಲ್ದಾಣದ ವರೆವಿಗೂ ರ್‍ಯಾಲಿಯನ್ನು ಮಾಡಿ ನಂತರ ತಹಸೀಲ್ದಾರ್ ಕಛೇರಿಯ ಮುಂದೆ ಧರಣಿಯನ್ನು ಮಾಡಿದರು. ಪ್ರತಿಭಟನಾಕಾರರನು ಉದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ಜಿಲ್ಲಾ ಉಪಕಾರ್ಯದರ್ಶಿ ಹಾಗೂ ಸಂಚಾಲಕರಾದ ವೈ.ಆರ್.ವೆಂಕಟೇಶ್ ಬಾಬು 10 ವರ್ಷದಿಂದ ರಾಜ್ಯದಲ್ಲಿ 90 ಸಾವಿರ ಮಹಿಳೆಯರು ಯಾವುದೇ ಉದ್ಯೋಗ ಭದ್ರತೆ ಇಲ್ಲದೆ ಕಡಿಮೆ ಸಂಬಳಕ್ಕೆ ಗುಲಾಮರಂತೆ ದುಡಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಹಾಜರಾತಿ ಆಧಾರದ ಮೇಲೆ ಇಡೀ ರಾಜ್ಯಾದ್ಯಂತ 6 ಸಾವಿರ ಬಿಸಿಊಟ ನೌಕರರನ್ನು ಕೆಲಸದಿಂದ ತೆಗೆಯುವುತ್ತಿರುವುದು ಗಾಯದ ಮೇಲೆ ಬರೆಎಳೆದಂತಾಗಿದೆ. ಹಾಗೂ ಈ ಯೋಜನೆ ಖಾಸಗಿಕರಣ ಮಾಡಿ 30 ಸಾವಿರ ಮಹಿಳೆಯರು ಇದುವರೆಗು ಕೆಲಸದಿಂದ ವಂಚಿತರಾಗಿದ್ದರೆ ಹಾಗೆಯೇ ವಿವಾದದಲ್ಲಿರುವ ಇಸ್ಕಾನ್‌ನಂತಹ ಸಂಸ್ಥೆಗಳು ಇದರಿಂದ ಹೆಚ್ಚಿನ ಲಾಭವನ್ನು ಪಡೆಯುತ್ತಿವೆ. ಕೂಡಲೇ ಸರ್ಕಾರ ಈ ಮಹಿಳಾ ವಿರೋಧಿ ನೀತಿಯನ್ನು ಕೈಬಿಡಬೇಕೆಂದು ಖಂಡಿಸಿದರು. ನಂತರ ಮಾತನಾಡಿದ ತಾಲ್ಲೂಕು ಬಿಸಿಊಟದ ನೌಕರರ ಗೌರವಾಧ್ಯಕ್ಷರಾದ ಮುಸ್ತಾಫ ಕೇಂದ್ರ ಸರ್ಕಾರ 2009 ಡಿಸೆಂಬರ್‌ನಲ್ಲಿ ರೂ.600/– ಸಂಬಳ ಹೆಚ್ಚು ಮಾಡಿ ಮತ್ತೊಂದು ಕಡೆ ಅಡಿಗೆಯವರನ್ನು ಕಡಿಮೆ ಮಾಡುತ್ತಿದೆ. 26 ರಿಂದ 70 ರ ಮೇಲೆ ಮಕ್ಕಳ ಹಾಜರಾತಿ ಇರುವ ಶಾಲೆಗಳಲ್ಲಿ 2 ರಿಂದ 3 ಜನ ಅಡಿಗೆಯವರು ಇದ್ದರು ಈಗ 26 ರಿಂದ 100 ರ ವರೆಗೆ ಇಬ್ಬರೇ ಅಡಿಗೆಯವರು ಸಾಕು ಎಂದು ಸರ್ಕಾರ ಅವೈಜ್ಞಾನಿಕವಾಗಿ ಚಿಂತಿಸಿ ಸುತ್ತೋಲೆ ಕಳುಹಿಸಿ ಅಡಿಗೆಯವರನ್ನು ತೆಗೆದಿದೆ. 9 ವರ್ಷದಿಂದ ದುಡಿದ ಮಹಿಳೆಯರು ಇಂದು ಕೆಲಸ ಕಳೆದುಕೊಂಡಿದ್ದಾರೆ. ಇನ್ನೂ ಶಾಲೆಗಳಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರಿಂದ ಹಿಡಿದು ಮುಖ್ಯೋಪಾಧ್ಯಾಯರು, ಎಸ್.ಡಿ.ಎಂ.ಸಿ ಅಧ್ಯಕ್ಷರಿಂದ ಕಿರುಕುಳ ಅನುಭವಿಸುತ್ತಿದ್ದಾರೆ. ಕೇವಲ ರೂ.1,000/– ಸಂಬಳ ತೆಗೆದುಕೊಂಡು ತಿಂಗಳೆಲ್ಲ ದುಡಿಯ ಬೇಕು. ಇಂತಹ ಪರಿಸ್ಥಿಯಲ್ಲಿರುವ ಅಡಿಗೆ ನೌಕರರಿಂದ ಇದೇ ತಿಂಗಳು 17 ರಿಂದ ಅನಿರ್ದಿಷ್ಟಾವಧಿ ಹೋರಾಟವನ್ನು ಮುಖ್ಯ ಮಂತ್ರಿಗಳ ಮನೆಯ ಮುಂದೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಹೋರಾಟದಲ್ಲಿ 9 ಮುಖ್ಯ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ನಮ್ಮ ಬೇಡಿಕೆಗಳು ಈಡೇರುವರೆವಿಗೂ ನಮ್ಮ ಹೋರಾಟವನ್ನು ಮುಂದುವರಿಸುತ್ತೇವೆ ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದರು.

ತಹಸೀಲ್ದಾರ್‌ರವರ ಅನುಪಸ್ಥಿತಿಯಲ್ಲಿ ಶಿರಸ್ತೆದಾರ್ ಬಂದು ಮನವಿ ಪತ್ರವನ್ನು ಪಡೆದು ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಕೈಬಿಡಲಾಯಿತು.

ತಾಲ್ಲೂಕು ಅಕ್ಷರದಾಸೋಹ ಅಧ್ಯಕ್ಷರಾದ ಮುನಿಗೋವಿಂದಮ್ಮ, ಕಾರ್ಯದರ್ಶಿ ಬಿ.ಸುಧಮ್ಮ, ಸಹಕಾರ್ಯದರ್ಶಿ ರಾಮಲಕ್ಷ್ಮಮ್ಮ ಹಾಗೂ ತಾಲ್ಲೂಕು ಸಮಿತಿ ಸದಸ್ಯರಾದ ಮುಭಿನ್ ತಾಜ್, ಶಾಬನಾ, ಐ.ವಾಣಿ, ಸುಗಣಮ್ಮ, ರಾಮಲಕ್ಷ್ಮಮ್ಮ ಹಾಗೂ ಸಿ.ಐ.ಟಿ.ಯು ಮುಖಂಡರಾದ ನರಸಿಂಹರೆಡ್ಡಿ, ಬಾಬುರೆಡ್ಡಿ ಮತ್ತು ಚನ್ನರಾಯಪ್ಪ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

★



ವಿ.ವಿ. ಮುಂದೆ ಎಸ್‌ಎಫ್‌ಐ ಪ್ರತಿಭಟನೆ ಇತ್ಯಾದಿ

ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಕಾಲೇಜುಗಳ ಪ್ರಥಮ, ತೃತೀಯ ಹಾಗೂ ಪಂಚಮ ಸೆಮಿಸ್ಟರು ಪರೀಕ್ಷೆಗಳನ್ನು ಅವಧಿಗಳ ಮುಂಚೆಯೇ ನಿರ್ಧರಿಸಲು ಮಂಗಳೂರು ವಿ.ವಿ. ದಿಢೀರ್ ನಿರ್ಧಾರ ಕೈಗೊಂಡಿತ್ತು. ಇದರಿಂದ ವಿದ್ಯಾರ್ಥಿಗಳು



ಆತಂಕಿತರಾದುದನ್ನು ಗುರುತಿಸಿ, ಎಸ್‌ಎಫ್‌ಐ ಪರೀಕ್ಷೆಗಳನ್ನು ಮುಂದೂಡಬೇಕೆಂದು ಒತ್ತಾಯಿಸಿ ಪ್ರತಿಭಟನೆಯನ್ನು ಸಪ್ಟೆಂಬರ್ 24 ರಂದು ಮಂಗಳೂರು ವಿ.ವಿ. ಆಡಳಿತ ಕಚೇರಿ ಎದುರು ನಡೆಸಿರುತ್ತದೆ.

ಮಂಗಳೂರು ನಗರದಿಂದ 15 ಕಿ.ಮೀ.ದೂರದ ಕೊಣಾಜೆಯಲ್ಲಿ ವಿ.ವಿ.ಆಡಳಿತ ಕಚೇರಿಯಿದ್ದು, ಮಂಗಳೂರಿನ ಆಸುಪಾಸಿನ ಕಾಲೇಜು ವಿದ್ಯಾರ್ಥಿ ಗಳು ತರಗತಿ ಬಹಿಷ್ಕರಿಸಿ ವಿ.ವಿ.ಚಲೋ ನಡೆಸಿದರು. ಕೊಣಾಜೆಯಲ್ಲಿ 1 ಕಿ.ಮೀ.ದೂರ ವಿ.ವಿ.ವರೆಗೆ ಮೆರವಣಿಗೆ ನಡೆಸಿದರು. ಪ್ರತಿಭಟನಕಾರರನ್ನುದ್ದೇಶಿಸಿ ಎಸ್‌ಎಫ್‌ಐ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಮನೋಜ್ ಕುಮಾರ್, ಹಂಸ ಮಾತನಾಡಿದರು. ಬಳಿಕ ಉಪಕುಲಪತಿಯವರಿಗೆ ಮನವಿ ಸಲ್ಲಿಸಲಾಯಿತು. ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ವಿದ್ಯಾರ್ಥಿ ಮುಖಂಡರಾದ ರಜಾಕ್ ಮೊಂಟೆಪದವು, ಭವ್ಯಾ, ಫಯಾಜ್ ಮಂಜನಾಡಿ, ಚರಣ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮೂಡಬಿದರೆಯಲ್ಲಿ ಹಮಾಲಿ ಕಾರ್ಮಿಕರ ಸಮಾವೇಶ

ಮೂಡಬಿದರೆಯಲ್ಲಿ ಹಮಾಲಿ ಕಾರ್ಮಿಕರ ಸಮಾವೇಶ ನಡೆದಿದ್ದು, ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಸಮಾವೇಶವನ್ನು ಉದ್ಘಾಟಿಸಿದರು.

ಕಾರ್ಮಿಕ ಮುಖಂಡರಾದ ಶಿವಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು, ಅತಿಥಿಗಳಾಗಿ. ದ.ಕ.ಜಿಲ್ಲಾ ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಸಿಐಟಿಯು ಮುಖಂಡರು ಹಾಗೂ ಪುರಸಭಾ ಉಪಾಧ್ಯಕ್ಷೆ ರಮಣಿ, ಡಿವೈಎಫ್‌ಐ ಮೂಡಬಿದ್ರಿ ವಲಯದ ಅಧ್ಯಕ್ಷ ಸೀತಾರಾಮ ಶೆಟ್ಟಿ, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ವಲಯಾಧ್ಯಕ್ಷ ಶಂಕರ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಹಮಾಲಿ ಕಾರ್ಮಿಕರ ಮೂಡಬಿದ್ರೆ ವಲಯ ಸಮಿತಿಯನ್ನು ರಚಿಸಲಾಯಿತು. ವಲಯಾಧ್ಯಕ್ಷರಾಗಿ ಶಿವಕುಮಾರ್, ಕಾರ್ಯದರ್ಶಿಯಾಗಿ ಕೃಷ್ಣಪ್ಪ ಇವರನ್ನೊಳಗೊಂಡ 11 ಜನರ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಮಾನವ ಸಂಗಮ ಕಾರ್ಯಕ್ರಮದಲ್ಲಿ ನಿಡುಮಾಮಿಡಿ ಶ್ರೀ

ನಮ್ಮ ಪ್ರಜಾಪ್ರಭುತ್ವ ಜನಸಾಮಾನ್ಯರ ಪ್ರಜಾಪ್ರಭುತ್ವವಾಗಿರದೆ ಸುಲಿಗೆಕೋರರ ಪ್ರಜಾಪ್ರಭುತ್ವವಾಗಿ ಮಾರ್ಪಾಡಾಗುತ್ತಿದೆ. ಆಡಳಿತ ಕೇಂದ್ರಗಳು ಭ್ರಷ್ಟಾಚಾರದ, ಶೋಷಣೆಯ ಕೇಂದ್ರಗಳಾಗಿ ಮಾರ್ಪಾಡಾಗುತ್ತಿವೆ. ಇದರ ವಿರುದ್ಧವಾಗಿ ಜನಾಂದೋಲನ ರೂಪುಗೊಳ್ಳಬೇಕಾದ ಅಗತ್ಯವಿದೆ ಎಂದು ನಿಡುಮಾಮಿಡಿ ಮಠದ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಕರೆ ನೀಡಿದ್ದಾರೆ.


ಸೆಪ್ಟೆಂಬರ್ 28 ರಂದು ಬೆಳ್ತಂಗಡಿಯಲ್ಲಿ ಭಗತ್‌ಸಿಂಗ್ ಜನ್ಮದಿನಾಚರಣಾ ಸಮಿತಿಯ ವತಿಯಿಂದ ನಡೆದ ಭಗತ್‌ಸಿಂಗರ 104ನೇ ಜನ್ಮದಿನಾಚರಣೆಯ ಅಂಗವಾಗಿ ನಡೆದ



'ಮಾನವ ಸಂಗಮ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಧರ್ಮಗಳನ್ನು ಮೂಲಭೂತವಾದಿಗಳು ಹೈಜಾಕ್ ಮಾಡಿಕೊಂಡಿದ್ದಾರೆ. ಧಾರ್ಮಿಕ ಮುಖಂಡರು ಭ್ರಷ್ಟರಾಗುತ್ತಿದ್ದಾರೆ. ಕಪ್ಪು ಹಣದ ಕೇಂದ್ರಗಳಾಗಿ ಧಾರ್ಮಿಕ ಕೇಂದ್ರಗಳು ಮಾರ್ಪಾಡಾಗುತ್ತಿವೆ. ಪಾಪದ ಹಣವನ್ನು ಬೇಡವೆಂದು ಹೇಳುವ ಧೈರ್ಯವನ್ನು ಧಾರ್ಮಿಕ ಕೇಂದ್ರಗಳು ಪ್ರದರ್ಶಿಸಲಿ ಎಂದು ಅವರು ಸಲಹೆ ನೀಡಿದರು.

ಬಳಿಕ ನಡೆದ ವಿಚಾರಗೋಷ್ಠಿಯಲ್ಲಿ 'ಜನಶಕ್ತಿ' ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್ ಮತ್ತು ಲೇಖಕರಾದ ಅರವಿಂದ ಚೊಕ್ಕಾಡಿ ಭಗತ್‌ಸಿಂಗರ ಪ್ರಸ್ತುತತೆ ಮತ್ತು ಭಗತ್‌ಸಿಂಗರ ವೈಜ್ಞಾನಿಕ ಚಿಂತನೆಗಳ ಬಗ್ಗೆ ವಿಚಾರ ಮಂಡಿಸಿದ್ದರು. ಡಿವೈಎಫ್‌ಐ, ದಸಂಸ, ಪತ್ರಕರ್ತರ ಸಂಘ ಮೊದಲಾದ ಸಂಘಟನೆಗಳು ಒಟ್ಟಾಗಿ ಕಾರ್ಯಕ್ರಮವನ್ನು ಸಂಯೋಜಿಸಿದ್ದವು.



ಉಡುಪಿಯಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ



ಉಡುಪಿ ಜಿಲ್ಲೆಯ ಆಶಾ ಕಾರ್ಯಕರ್ತೆಯರು ಉಡುಪಿ ಜಿಲ್ಲಾ ಸಂಘಟನಾ ಸಮಿತಿ (ಸಿಐಟಿಯು) ಆಶ್ರಯದಲ್ಲಿ ಅಕ್ಟೋಬರ್ 1 ರಂದು ಉಡುಪಿ ಜಿಲ್ಲಾ ಪಂಚಾಯತ್ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನೆಯ ಬಳಿಕ ಬೇಡಿಕೆಗಳ ಮನವಿಯನ್ನು ಜಿ.ಪಂ.ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸಲ್ಲಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಸಂಘದ ಜಿಲ್ಲಾ ಸಂಚಾಲಕ ದಾಸ ಭಂಡಾರಿ, ಕುಂದಾಪುರ ತಾಲೂಕು ಅಧ್ಯಕ್ಷೆ ಸಂಗೀತಾ ಶೆಟ್ಟಿ, ವಸಂತಿ ಶೆಟ್ಟಿ, ಸುಮತಿ ಹಾಲಾಡಿ, ವಿನೋದ ಮೊದಲಾದವರು ವಹಿಸಿದ್ದರು.

ಹರೇಕಳ ಗ್ರಾಮ ಪಂಚಾಯತ್ ವಿರುದ್ಧ ಡಿವೈಎಫ್‌ಐ ಪ್ರತಿಭಟನೆ

ಹರೇಕಳ ಗ್ರಾಮ ಪಂಚಾಯತಿನಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸ್ಥಳೀಯ ಡಿವೈಎಫ್‌ಐ



ಘಟಕ ಲೋಕಾಯುಕ್ತ ಹಾಗೂ ಯೋಜನೆಯ ಒಂಬುಡ್ಸ್‌ಮನ್ ಅವರ ಗಮನಕ್ಕೆ ತಂದಿದ್ದು ತನಿಖೆ ನಡೆಯುತ್ತಿದ್ದು ಅವ್ಯವಹಾರಗಳು ಸ್ಪಷ್ಟವಾಗುತ್ತಿದ್ದಂತೆಯೇ ಪಂಚಾಯತ್ ಆಡಳಿತವು ಸ್ಥಳೀಯ ಶಾಸಕರ ಬೆಂಬಲದೊಂದಿಗೆ ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ಪೋಲೀಸು ಠಾಣೆಯಲ್ಲಿ ದಾಖಲಿಸಿ ಕಿರುಕುಳ ನೀಡುತ್ತಿದೆ. ಇದನ್ನು ಖಂಡಿಸಿ ಹಾಗೂ ಗ್ರಾಮ ಪಂಚಾಯತನ್ನು ವಜಾಗೊಳಿಸಬೇಕೆಂದು ಆಗ್ರಹಿಸಿ ಹಾಗೂ ಭ್ರಷ್ಟಾಚಾರಿಗಳಿಗೆ ಶಿಕ್ಷೆಯಾಗಬೇಕೆಂದೂ ಒತ್ತಾಯಿಸಿ ಅಕ್ಟೋಬರ್ 2 ರಂದು ಹರೇಕಳ ಡಿವೈಎಫ್‌ಐ ಗ್ರಾಮ ಸಮಿತಿ ವತಿಯಿಂದ ನೇತ್ರಾವತಿ ನದಿ ತೀರದಲ್ಲಿ ಮೆರವಣಿಗೆ ಹಾಗೂ ಪ್ರತಿಭಟನಾ ಸಭೆ ನಡೆಸಲಾಯಿತು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಮಾತನಾಡಿದರು. ಸಿಪಿಎಂ ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಡಿವೈಎಫ್‌ಐ ಉಳ್ಳಾಲ ವಲಯದ ಅಧ್ಯಕ್ಷ ಮಹಾಬಲ ದೆಪ್ಪೆಲಿಮಾರ್, ಕಾರ್ಯದರ್ಶಿ ಅಶೋಕ್ ಶೆಟ್ಟಿ, ಡಿವೈಎಫ್‌ಐ ಸ್ಥಳೀಯ ನಾಯಕರಾದ ರಫೀಕ್ ಹರೇಕಳ, ಅಶ್ರಫ್ ಮುಂತಾದವರು ಉಪಸ್ಥಿತರಿದ್ದರು.

ಮಂಗಳೂರು, ಉಡುಪಿಗಳಲ್ಲಿ ಡಬ್ಲ್ಯೂಎಫ್‌ಟಿಯು ವಿಶ್ವ ಕಾರ್ಯಾಚರಣೆ ದಿನ

ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ 1945ರ ಅಕ್ಟೋಬರ್ 3 ರಂದು ರಚಿತಗೊಂಡಿದ್ದು, ಈ ವರ್ಷ ವಿಶ್ವ ಕಾರ್ಯಾಚರಣೆ ದಿನವಾಗಿ ಆಚರಿಸಬೇಕೆಂದು ಕರೆಕೊಟ್ಟ ಮೇರೆಗೆ ಮಂಗಳೂರು ಮತ್ತು ಉಡುಪಿಯಲ್ಲಿ ವಿವಿಧ ಸಂಘಟನೆಗಳು ಒಟ್ಟಾಗಿ ಅಕ್ಟೋಬರ್ 3 ರಂದು ಈ ದಿನದ ಆಚರಣೆ ನಡೆಸಿದವು.

ಮಂಗಳೂರಿನಲ್ಲಿ ಸಿಐಟಿಯು, ಬ್ಯಾಂಕ್ ಎಂಪ್ಲೋಯಿಸ್ ಫೆಡರೇಶನ್ ಆಫ್ ಇಂಡಿಯಾ, ಅಖಿಲ ಭಾರತ ವಿಮಾ ನೌಕರರ ಸಂಘ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ರ್ಯಾಲಿ, ಬಂದ್... ಹಲವು ಚಳುವಳಿಗಳು ನಡೆದವು. ಕಿವುಡು, ಕುರುಡು ಸರ್ಕಾರಗಳು ಬಾಯಿಮಾತಿನ ಭರವಸೆ ಬಿಟ್ಟು ಏನನ್ನೂ ಮಾಡಲಿಲ್ಲ. ರೇಷ್ಮೆ ಮೇಲಿನ ಆಮದು ಸುಂಕ ಕಡಿತ ವಾಪಸ್ಸಾಗಲಿಲ್ಲ. ಈ ದುಷ್ಟ ನೀತಿ ರೇಷ್ಮೆ ರೈತರ ಅಮೂಲ್ಯ ಜೀವನವನ್ನು ಬಲಿ ಪಡೆಯುತ್ತಿರುವುದು ಮಾತ್ರ ವಿಷಾದನೀಯವಾಗಿದೆ

ಬಿತ್ತು, ಮತ್ತೊಂದು ರೇಷ್ಮೆ ರೈತನ ಹೆಣ!

ಬಿ.ಯಶವಂತ

ಇಡೀ ದೇಶದಲ್ಲೇ ರೈತ ಆತ್ಮಹತ್ಯೆಗಳಿಗೆ ಕುಖ್ಯಾತವಾಗಿರುವ ಕರ್ನಾಟಕ, ಇದೀಗ ರೇಷ್ಮೆ ಬೆಳೆಗಾರರನ್ನು ಬಲಿ ತೆಗೆದುಕೊಳ್ಳುತ್ತಿದೆ. ಕೇಂದ್ರ ಸರ್ಕಾರದ ಸುಂಕ ರಹಿತ ರೇಷ್ಮೆ ಆಮದು ಹಾಗೂ ಆಮದು ಸುಂಕದ ತೀವ್ರ ಇಳಿಕೆ ತಂದ ರೇಷ್ಮೆಗೂಡಿನ ಬೆಲೆ ಕುಸಿತ 'ರೇಷ್ಮೆ ಹುಳು ತಾನು ನೇಯ್ದ ಗೂಡಿಗೆ ತಾನೇ ಬಲಿಯಾಗುವಂತೆ' ರೇಷ್ಮೆ ರೈತನ ಕೊರಳಿಗೆ ಉರುಳು ಬಿಗಿಯುತ್ತಿದೆ. ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿಯ ವಳಗೆರೆದೊಡ್ಡಿ ಗ್ರಾಮದ ರೇಷ್ಮೆ ರೈತ ದಂಪತಿಗಳಾದ ಸ್ವಾಮಿ ಮತ್ತು ವಸಂತರವರ ಕರುಣಾಜನಕ ಆತ್ಮಹತ್ಯೆ ನೆನಪು ಮಾಸುವ ಮೊದಲೇ ಮದ್ದೂರು ತಾಲ್ಲೂಕಿನ ರಾಂಪುರ ಗ್ರಾಮದ ಯುವ ರೈತ 35ರ ಪ್ರಾಯದ ಸ್ವಾಮಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಬೇಸಾಯಕ್ಕೆ ಬೇಕು ಸಾಲ, ಸಾಲ. ತೀರಿಸಲು ದಾರಿಯೇ ಇಲ್ಲಾ.

ಡೀಸಲ್, ಕೀಟನಾಶಕ, ರಸಗೊಬ್ಬರ ಮುಂತಾದ ವಸ್ತುಗಳ ಬೆಲೆ ಹೆಚ್ಚಳದ ಕೊಡುಗೆಯು ಸೇರಿದಂತೆ ನಿರಂತರವಾಗಿ ನಾಗಾಲೋಟದಲ್ಲಿ ಏರುತ್ತಿರುವ ವ್ಯವಸಾಯದ ವೆಚ್ಚಗಳು ರೈತರನ್ನು ಹೆಚ್ಚೆಚ್ಚು ಸಾಲದತ್ತ ನೂಕುತ್ತಿವೆ. ಇದೇ ಸಂದರ್ಭದಲ್ಲಿ ಬ್ಯಾಂಕ್ ಮತ್ತಿತರೆ ಹಣಕಾಸು ಸಂಸ್ಥೆಗಳಿಂದ ಸಾಲದ ನಿರಾಕರಣೆ, ಮುಂತಾದ ಪರಿಸ್ಥಿತಿ ಖಾಸಗಿ ಲೇವಾದೇವಿಯನ್ನು ಅವಲಂಬಿಸುವಂತೆ ಮಾಡಿದೆ. ಅತಿ ಹೆಚ್ಚು ಹೂಡಿಕೆ ವೆಚ್ಚ ಬೇಡುವ, ಉಷ್ಣಾಂಶ-ತೇವಾಂಶದ ಏರಿಳಿತಗಳಿಗೆ ಸುಲಭವಾಗಿ ನಷ್ಟಕ್ಕೀಡಾಗುವ ರೇಷ್ಮೆ ಗೂಡಿನ ಉತ್ಪಾದನೆಯಲ್ಲಿ ತೊಡಗಿರುವ ರೇಷ್ಮೆ ಬೆಳೆಗಾರರದು ಸಾಲದ ಬದುಕು. ಕೇಂದ್ರ ಸರ್ಕಾರ ಈ ವರ್ಷದ ತನ್ನ ಬಡ್ಜೆಟ್‌ನಲ್ಲಿ ರೇಷ್ಮೆ ಆಮದು ಮೇಲೆ ಇದ್ದ ಶೇ. 31 ರ ಸುಂಕವನ್ನು ನಗಣ್ಯ ಶೇ. 05ಕ್ಕೆ ಇಳಿಸುತ್ತಿದ್ದಂತೆ ದೇಶಿಯ ಮಾರುಕಟ್ಟೆಯಲ್ಲಿ ಕಚ್ಚಾ ರೇಷ್ಮೆ ನೂಲಿನ ದರಗಳು ತತ್ಪರಿಣಾಮವಾಗಿ ರೇಷ್ಮೆ ಗೂಡಿನ ದರಗಳು ತೀವ್ರವಾಗಿ ಕುಸಿದು ರೇಷ್ಮೆಗೂಡು ಬೆಳೆದ ರೈತ ಪ್ರತಿ ಕೆ.ಜಿ. ಗೂಡಿಗೆ 150/- ರೂ. ನಿಂದ 200/- ರೂ.ವರೆಗೆ ನಷ್ಟ ಮಾಡಿಕೊಂಡು ಮಾರುವ ಸ್ಥಿತಿಗೆ ತಲುಪಿ, ಸಾಲ ತೀರಿಸಲು ದಾರಿಯೇ ಇಲ್ಲದಾಗಿದೆ.

ಇದೇ ಪರಿಸ್ಥಿತಿಗೆ 5 ವರ್ಷದ ಮಗ ರಿತೇಶ್, 1 ವರ್ಷದ ಮಗಳು ವೈಷ್ಣವಿ, ಪತ್ನಿ ರೂಪಾಳನ್ನು ಅಗಲಿ, ಆತ್ಮಹತ್ಯೆ ಮಾಡಿಕೊಂಡಿರುವ ಸ್ವಾಮಿ, ಸುಮಾರು 15 ವರ್ಷಗಳಿಂದ ರೇಷ್ಮೆ ಬೇಸಾಯ ಮಾಡಿಕೊಂಡಿದ್ದವನು. ಅವಿಭಕ್ತ ಕುಟುಂಬದ ಯಜಮಾನನಾಗಿ, ತಂದೆ-ತಾಯಿ, ಅಣ್ಣನ ಕುಟುಂಬದ ಜೊತೆ ಜೀವನ ಮಾಡುತ್ತಿದ್ದ ಮೃತ ರೈತ ಕರ್ನಾಟಕ ರಾಜ್ಯ ರೈತ ಸಂಘದ ಸಕ್ರಿಯ ಕಾರ್ಯಕರ್ತ.

3 ಎಕರೆ 30 ಗುಂಟೆ ನೀರಾವರಿ ಜಮೀನು ಹೊಂದಿರುವ ಈ ಕುಟುಂಬ 2 ಎಕರೆಯಲ್ಲಿ ರೇಷ್ಮೆ ತೋಟ, 1 ಎಕರೆಗೆ ಕಬ್ಬು, 30 ಗುಂಟೆಗೆ ಭತ್ತ ಬೆಳೆಯಿದೆ. ತನ್ನ ತಂದೆಯ ಭಾಗಕ್ಕೆ ಬಂದಿದ್ದ ಮನೆಯಲ್ಲೇ ವಾಸ ಮತ್ತು ರೇಷ್ಮೆ ಸಾಕಾಣೆ ನಿರ್ವಹಿಸುತ್ತಿದ್ದು, 100-125 ಮೊಟ್ಟೆಯಂತೆ ಎರಡು ಬ್ಯಾಚ್‌ನಲ್ಲಿ ವರ್ಷಕ್ಕೆ ಸರಾಸರಿ ಎಂಟು ರೇಷ್ಮೆ ಬೆಳೆ ತೆಗೆಯುತ್ತಿದ್ದರು.

ಕಳೆದ ಡಿಸೆಂಬರ್-ಜನವರಿಯಲ್ಲಿ ಸಿಕ್ಕ ಉತ್ತಮ ಬೆಲೆಯಿಂದ ಉತ್ತೇಜಿತರಾದ ಸ್ವಾಮಿ ಈಗಾಗಲೇ ಇದ್ದ ಬೆಳತೂರು ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ.,ದಲ್ಲಿ ತೆಗೆದುಕೊಂಡಿದ್ದ 40,000/- ರೂ., ಬೆಸಗರಹಳ್ಳಿ ವಿಜಯಾ ಬ್ಯಾಂಕ್‌ನಿಂದ 6,000/- ರೂ. ಬೆಳೆ ಸಾಲದ ಜೊತೆಗೆ, ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಿಸಿಕೊಳ್ಳಲು ಮದ್ದೂರಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಪಡೆದುಕೊಂಡಿದ್ದರು. 1.24 ಲಕ್ಷದ ಸಾಲವನ್ನು ಹಂತ ಹಂತವಾಗಿ ಮೂರು ಕಂತುಗಳಲ್ಲಿ ಪಡೆದು, 22X40X14 (ಅಗಲ, ಉದ್ದ, ಎತ್ತರ) ವಿಸ್ತೀರ್ಣದ ಸುಮಾರು 3.5 ಲಕ್ಷ ವೆಚ್ಚ ತಗುಲಿರುವ ಈ ಸಾಕಾಣಿಕಾ ಮನೆಗೆ ಉಳಿದ ಹಣವನ್ನು ಹೊಂದಿಸಲು



ಪತ್ನಿ ಸದಸ್ಯೆಯಾಗಿರುವ ಸ್ವ-ಸಹಾಯ ಸಂಘ ಹಾಗೂ ಖಾಸಗಿ ಲೇವಾದೇವಿ ಸಾಲವನ್ನು ಅವಲಂಬಿಸಿದರು. ಮನೆ ಪ್ರಾರಂಭ ಮಾಡಿದ ದಿನದಿಂದಲೂ ಮುಕ್ತಾಯವಾಗುವ ತನಕವೂ ರೇಷ್ಮೆಗೂಡಿನ ಧಾರಣೆ ಏರಿಕೆಯಾಗಲಿಲ್ಲ, ಬದಲಾಗಿ ಉಳುಮೆ ವೆಚ್ಚ, ರಸಗೊಬ್ಬರ, ಕೀಟನಾಶಕ ಬೆಲೆಗಳೂ ಗಮನಾರ್ಹವಾಗಿ ಏರಿಕೆ ಕಂಡವು. ವಿ.ಸಿ. ಕಾಲುವೆ ನೀರಾವರಿ ಸೌಲಭ್ಯವಿದ್ದರೂ ಅವಧಿ ನೀರು ಆಗಿದ್ದರಿಂದ ಒಂದು ಬೆಳೆಗೆ ಕನಿಷ್ಠ ಎರಡು ಬಾರಿ ಗಂಟೆಗೆ 80/- ರೂ.ನಂತೆ 12 ರಿಂದ 14 ಗಂಟೆ ಬೋರ್‌ವೆಲ್‌ನಿಂದ ನೀರು ಪಡೆಯಬೇಕಾದ ಪರಿಸ್ಥಿತಿ ಇತ್ತು. ಈ ಹಿನ್ನೆಲೆಯಲ್ಲಿ ಕಳೆದ 20 ದಿನದ ಹಿಂದೆ 50 ಕೆ.ಜಿ. ರೇಷ್ಮೆಗೂಡನ್ನು 160/- ರೂ. ದರದಂತೆ ಮಾರಿ ಬಂದಿದ್ದ ಸ್ವಾಮಿ ರೇಷ್ಮೆ ವ್ಯವಸಾಯ ಮಾಡಿ ಸಾಲ ತೀರಿಸುವ ದಾರಿ ಕುರಿತು ಚಿಂತೆಗೀಡಾಗಿದ್ದ, ಈ ಸಂಬಂಧ ಅಲ್ಲಲ್ಲಿ ಏಕಾದರೂ ಮನೆ ಮಾಡಿದೆ ಎಂದು ಗೋಳು ತೋಡಿಕೊಂಡಿದ್ದ. ಯಾವುದೇ ದುಶ್ಚಟಗಳು ಇಲ್ಲದೆ ಊರಿನಲ್ಲಿ ಮಾದರಿಯಾಗಿದ್ದ ಈ ಯುವರೈತ ಸ್ವಾಭಿಮಾನಿಯಾಗಿದ್ದನು. ನಾಲ್ಕನೇ ಜ್ವರದಿಂದ ಎದ್ದ ಈ ಬ್ಯಾಚಿನ ರೇಷ್ಮೆ ಹುಳುಗಳು ಸಹ ಅವನಲ್ಲಿ ಭರವಸೆ ಮೂಡಿಸಲಿಲ್ಲ. ನಷ್ಟದ ದರ ಮುಂದುವರಿದೆ ಇತ್ತು.

ಈ ಹತಾಶ ಪರಿಸ್ಥಿತಿ ಸ್ವಾಮಿಯಲ್ಲಿ ಬದುಕುವ ಚೈತನ್ಯ ಹೊಸಕಿಹಾಕಿ ಸಾವಿನತ್ತ ತಳ್ಳಿತು. ಶವ ಸಂಸ್ಕಾರ ಆದ ಮಾರನೇ ದಿನ ಮೃತರ ಮನೆಗೆ ಭೇಟಿ ಕೊಟ್ಟಾಗ ಈ ಹುಳುಗಳನ್ನೇ ಮಾರುತ್ತಿದ್ದುದು ಕಂಡುಬಂದಿತು. 'ರೇಷ್ಮೆ ಮನೆ ಕಟ್ಟಿ ಹೊಸ ಮನೇಲಿ ಹುಳು ಸಾಕ್ಲಿಲ್ಲ, ನನ್ಮಗ' ಎಂದು ತಾಯಿ ಪುಟ್ಟಲಿಂಗಮ್ಮ ರೋದಿಸುತ್ತಿದ್ದರೆ, ಚಿಕ್ಕ ವಯಸ್ಸಿನಲ್ಲೇ ವಿಧವೆಯಾದ ಪತ್ನಿ ರೂಪ ತನ್ನ ತೊಡೆಯ ಮೇಲೆ ನಿದ್ರಿಸುತ್ತಿದ್ದ ಪುಟ್ಟ ಮಗನನ್ನೇ ದಿಟ್ಟಿಸುತ್ತಾ ದಿಕ್ಕು ಕಾಣದೇ ಪರಿತಪಿಸುತ್ತಿದ್ದಳು.

ಪರಿಹಾರದ ಭರವಸೆ ಇಲ್ಲ

ಅವಿಭಕ್ತ ಕುಟುಂಬವಾದ್ದರಿಂದ ಜಮೀನುಗಳಲ್ಲವು ಮೃತನ ತಂದೆ ಚಿನ್ನೇಗೌಡ (70ವರ್ಷ)ರ ಹೆಸರಿನಲ್ಲಿದ್ದು, ಸಾಂಸ್ಥಿಕ ಸಾಲಗಳು ಅವರ ಹೆಸರಿನಲ್ಲೇ ಮಂಜೂರಾಗಿದ್ದವು. ಆತ್ಮಹತ್ಯೆ ಮಾಡಿಕೊಂಡ ರೈತನ ಹೆಸರಿನಲ್ಲಿ ಜಮೀನಿರಬೇಕು ಮತ್ತು ಸುಸ್ತಿಯಾದ ಸಾಲಕ್ಕೆ ಮರುಪಾವತಿ ಮಾಡುವಂತೆ ನೋಟೀಸ್ ಪಡೆದಿರಬೇಕು ಎನ್ನುವ ಸರ್ಕಾರದ ಧೋರಣೆಯಿಂದಾಗಿ ಸ್ಥಳಕ್ಕೆ ಭೇಟಿ ನೀಡಿದ್ದ ತಾಲ್ಲೂಕು ತಹಶೀಲ್ದಾರ್‌ರಿಂದ ಪರಿಹಾರದ ಭರವಸೆ ಸಿಕ್ಕಿಲ್ಲ. ರೈತ ಆತ್ಮಹತ್ಯೆಯ ಕುರಿತ ಸರ್ಕಾರಗಳ ಕೆಟ್ಟ ಧೋರಣೆ ಉತ್ತಮ ಉದಾಹರಣೆಯಾಗಿರುವ ಈ ಪ್ರಕರಣದಲ್ಲಿ ಆಧಾರ ಸ್ತಂಭ ಕಳೆದುಕೊಂಡು ದುಃಖದಲ್ಲಿರುವ ಕುಟುಂಬವನ್ನು ನಿಯಮಗಳ ಹೆಸರಿನಲ್ಲಿ ರಾಜ್ಯ ಸರ್ಕಾರ ಅಣಕಿಸುತ್ತಿದೆ. ●

ಲೋಕಾಯುಕ್ತ ವರದಿ : ಅಕ್ರಮಗಳ ರಕ್ಷಣೆಗೆ ಸರ್ಕಾರದ ಹುನ್ನಾರ

ಸಿಪಿಐ(ಎಂ) ಖಂಡನೆ

ಅಕ್ರಮ ಗಣಿಗಾರಿಕೆ ಕುರಿತಂತೆ ತನಿಖೆ ನಡೆಸಿದ ಲೋಕಾಯುಕ್ತ ವರದಿಯನ್ನು ಅಂಗೀಕರಿಸದೇ ಕುಂಟು ನೆಪಗಳ ಮೂಲಕ ಅಕ್ರಮಗಳನ್ನು ರಕ್ಷಿಸಲು ಮುಂದಾಗಿರುವ ಕರ್ನಾಟಕ ಸರಕಾರದ ನಿರ್ಧಾರವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅತ್ಯಂತ ತೀವ್ರವಾಗಿ ಖಂಡಿಸಿದೆ.

ಲೋಕಾಯುಕ್ತರು ನೀಡಿರುವ ವರದಿಯಲ್ಲಿ ಸಾವಿರಾರು ದಾಖಲೆಗಳು ಲಕ್ಷಾಂತರ ನಮೂದುಗಳನ್ನು ಪರೀಶಿಲಿಸಿ ನೀಡಿದ ವರದಿಯಾಗಿದೆ. ಸರ್ಕಾರವು ಲೋಕಾಯುಕ್ತ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳನ್ನು ಆಧರಿಸಿ ಸರ್ಕಾರವು ಶಿಕ್ಷೆ ನೀಡಬೇಕಾಗಿತ್ತು ಈ ಹಿಂದೆಯೂ 2008ರಲ್ಲಿ ಲೋಕಾಯುಕ್ತರು ನೀಡಿದ ವರದಿಯನ್ನು ಅಂಗೀಕರಿಸಿ ಕಠಿಣವಾದಂತಹ ಕ್ರಮಗಳನ್ನು ಸರ್ಕಾರ ಕೈಗೊಂಡಿದ್ದಲ್ಲಿ ನಂತರನಡೆದ ಬಾರಿ ಅಕ್ರಮಗಳನ್ನು ತಡೆಯಬಹುದಾಗಿತ್ತು. ಆದರೆ ಹೀಗೆ ಮಾಡದೆ ಇದ್ದುದರಿಂದ 2009 ಮತ್ತು 2011ರ ನಡುವೆ ಸಂಭವಿಸಿರುವ ಬಾರೀ ಅಕ್ರಮಗಳು ಜರುಗಲು ಸಾಧ್ಯವಾಗಿದೆ. ಈ ಎಲ್ಲಾ ಅಕ್ರಮಗಳ ಹೊಣೆಯು ನೇರವಾಗಿ ಸರ್ಕಾರದ ಮೇಲಿದೆ. ಹೀಗೆ ಲೋಕಾಯುಕ್ತ ವರದಿಯನ್ನು ಜಾರಿಗೊಳಿಸದೆ ಕುಂಟು ನೆಪಗಳನ್ನು ಹೇಳುತ್ತಾ ಅಕ್ರಮದಲ್ಲಿ ತೊಡಗಿರುವ ಅಪರಾಧಿಗಳನ್ನು ಬಿಜೆಪಿ ನಾಯಕರು ರಕ್ಷಣೆ ಮಾಡುತ್ತಿದ್ದಾರೆ, ಅವರನ್ನು ಅಧಿಕಾರಕ್ಕೆ ತಂದ ನಾಯಕರುಗಳ ಋಣವನ್ನು ಬಿಜೆಪಿಯು ಹೀಗೆ ತೀರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಇನ್ನು ಕಾಲ ವಿಳಂಬಿಸದೇ ಲೋಕಾಯುಕ್ತರ ವರದಿಗಳನ್ನು ತಕ್ಷಣವೇ ಅಂಗೀಕರಿಸಿ ಕಠಿಣವಾಗಿ ಕಾನೂನು ಕ್ರಮಗಳನ್ನು ಜರುಗಿಸಬೇಕೆಂದು ಭಾರತ ಕಮ್ಯೂನಿಸ್ಟ ಪಕ್ಷ (ಮಾರ್ಕ್ಸ್‌ವಾದಿ)ವು ಮುಖ್ಯಮಂತ್ರಿ ಸದಾನಂದಗೌಡರನ್ನು ಅಗ್ರಹಿಸುತ್ತದೆ. ಲೋಕಾಯುಕ್ತ ವರದಿಯನ್ನು ಅಂಗೀಕರಿಸುವಂತೆ ಒತ್ತಾಯಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ಜನತೆಗೆ ಕರೆ ನೀಡಿದೆ.

ಈ ಆಧಾರದಲ್ಲಿ ಸಿಪಿಐ(ಎಂ)ನ ಪಾರ್ಲಿಮೆಂಟರಿ ಸದಸ್ಯರ ನಿಯೋಗ ಇದೇ ಅಕ್ಟೋಬರ್ 18ಮತ್ತು 19ರಂದು ಬಳ್ಳಾರಿ ಗಣಿ ಹಗರಣದ ಪ್ರದೇಶಗಳಿಗೆ ಭೇಟಿ ನೀಡಲಿದೆ. ಅಕ್ಟೋಬರ್ 21ರಂದು ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ರ್ಯಾಲಿ ನಡೆಸಲಿದೆ. ▲

ಅಡ್ವಾಣಿಯವರು ತನ್ನ ರಥದಲ್ಲಿ ದೇಶದಲ್ಲೆಲ್ಲ ಸಂಚರಿಸುವಾಗ, ಜನ ಅವರು ಉಪಪ್ರಧಾನಿ ಮತ್ತು ಗೃಹಮಂತ್ರಿಯಾಗಿದ್ದ ಎನ್‌ಡಿಎ ಸರಕಾರದ ಅಡಿಯಲ್ಲಿ ಆರಂಭವಾದ ಟೆಲಿಕಾಂ ಹಗರಣವನ್ನು ಮತ್ತು ಇನ್ನೂ ಹತ್ತು-ಹಲವು ಸಾಲು-ಸಾಲು ಹಗರಣಗಳನ್ನು ನೆನಪಿಸಿಕೊಳ್ಳುವಂತಾಗುತ್ತದೆ. ಬಿಜೆಪಿಗೆ ಭ್ರಷ್ಟಾಚಾರದ ವಿರುದ್ಧ ಹೋರಾಡುವಲ್ಲಿ ಏನಾದರೂ ಪ್ರಾಮಾಣಿಕತೆ ಇದ್ದರೆ, ಯೆಡ್ಯೂರಪ್ಪ ಮತ್ತು ಲೋಕಾಯುಕ್ತ ವರದಿಯಲ್ಲಿ ಹೆಸರಿಸಿದ ಎಲ್ಲರ ಮೇಲೆ ರಾಜ್ಯ ಸರಕಾರ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳುವಂತೆ ಮಾಡಬೇಕಿತ್ತು, ತನ್ನ ರಾಜ್ಯ ಸರಕಾರಗಳಿರುವ ಮಧ್ಯಪ್ರದೇಶ ಮತ್ತು ಗುಜರಾತದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿತ್ತು.

ಭ್ರಷ್ಟಾಚಾರದ ವಿರುದ್ಧ ಬೂಟಾಟಿಕೆಯ ಯಾತ್ರೆ

ಪೀಪಲ್ಸ್ ಡೆಮಾಕ್ರಸಿ ವಾರಪತ್ರಿಕೆಯ ಅಕ್ಟೋಬರ್ 13, 2011 ರ ಸಂಚಿಕೆಯ ಸಂಪಾದಕೀಯ ಆಧರಿಸಿ

ಬಿಜೆಪಿ ಮುಖಂಡ ಎಲ್.ಕೆ.ಅಡ್ವಾಣಿ ಅಕ್ಟೋಬರ್ 11ರಂದು ಇನ್ನೊಂದು ರಥಯಾತ್ರೆ ಹೊರಟಿದ್ದಾರೆ. ಇದು ಭ್ರಷ್ಟಾಚಾರ ಮತ್ತು ಕಪ್ಪು ಹಣದ ವಿರುದ್ಧ ಎಂದು ಅವರು ಸಾರಿದ್ದಾರೆ. ಬಿಹಾರದ ಛಪ್ರ ಜಿಲ್ಲೆಯ ಸಿತಾಬ್ದಿಯರದಿಂದ ಈ ಯಾತ್ರೆ ಆರಂಭವಾಗಿದೆ. ಇದು ಜಯಪ್ರಕಾಶ ನಾರಾಯಣ ಅವರ ಹುಟ್ಟೂರು. 1970ರ ದಶಕದ ಜೆ.ಪಿ. ಆಂದೋಲನದ ಪರಂಪರೆಯ ಲಾಭ ಗಿಟ್ಟಿಸಲು ಈ ಸ್ಥಳವನ್ನು ಆರಿಸಲಾಗಿದೆ ಎಂಬುದು ಸ್ವಯಂವೇದ್ಯ. ಆ ಆಂದೋಲನ ಕಾಂಗ್ರೆಸ್ ಆಡಳಿತದ ಭ್ರಷ್ಟಾಚಾರದ ವಿರುದ್ಧ ನಡೆದಿತ್ತು.

ಜನಗಳಲ್ಲೆದ್ದಿರುವ ಬಲವಾದ ಭ್ರಷ್ಟಾಚಾರ-ವಿರೋಧಿ ಭಾವನೆಗಳ ಪ್ರಯೋಜನ ದೋಚಿಕೊಳ್ಳಲೆಂದು ಈ ಅಡ್ವಾಣಿ ಯಾತ್ರೆಯನ್ನು ಕೈಗೊಳ್ಳಲಾಗಿದೆ. ಆದರೆ ಸೆಪ್ಟಂಬರ್ 8 ರಂದು ಅಡ್ವಾಣಿಯವರು ಪ್ರಕಟಿಸಿದ ಈ ಯಾತ್ರೆಯ ಗುರಿ ಅದಷ್ಟೇ ಆಗಿರುವಂತೆ ಕಾಣುತ್ತಿಲ್ಲ. ಅದಕ್ಕೆ ಕೆಲವು ದಿನಗಳ ಹಿಂದೆ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ಪ್ರಧಾನ ಮಂತ್ರಿ ಅಭ್ಯರ್ಥಿಯನ್ನು ಮೊದಲೇ ಹೆಸರಿಸುವುದಿಲ್ಲ, ಚುನಾವಣೆಯ ನಂತರ ಒಂದು ನಿರ್ಧಾರ ಕೈಗೊಳ್ಳಲಾಗುವುದು ಎಂದು ಪ್ರಕಟಿಸಿದ್ದರು. ಇದು ಅಡ್ವಾಣಿ ಇದ್ದಕ್ಕಿದ್ದಂತೆ ಈ ಯಾತ್ರೆಯನ್ನು ಪ್ರಕಟಿಸುವಂತೆ ಮಾಡಿತು. 84 ವರ್ಷ ವಯಸ್ಸಿನ ಈ ಮುಖಂಡ ಇನ್ನೂ ಪ್ರಧಾನಮಂತ್ರಿಯಾಗುವ ಆಕಾಂಕ್ಷೆಯಿಂದ ಪ್ರೇರಿತರಾಗಿರುವುದೇ ಈ 38 ದಿನಗಳ ಯಾತ್ರೆಯ ಮುಖ್ಯ ಅಂಶವಾಗಿದ್ದಂತೆ ಕಾಣುತ್ತದೆ. ಅಡ್ವಾಣಿಯವರ ಪ್ರಕಟಣೆಯ ಐದು ದಿನಗಳ ನಂತರ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರು ತಾನು ಅಹಮದಾಬಾದಿನಲ್ಲಿ ಕೋಮು ಸೌಹಾರ್ದಕ್ಕಾಗಿ ಮೂರು ದಿನಗಳ ಉಪವಾಸ ಕೈಗೊಳ್ಳುವುದಾಗಿ ಘೋಷಿಸಿದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಬಿಜೆಪಿಯ ಎಲ್ಲ ಉನ್ನತ ಮುಖಂಡರ ಹಾಜರಾತಿಯಲ್ಲಿ ಅವರು ಈ ಉಪವಾಸ ಕೈಗೊಂಡರು. ಈ ಉಪವಾಸದ ಮೂಲಕ ಮೋದಿ ತಾನು ಬಿಜೆಪಿಯ ರಾಷ್ಟ್ರೀಯ ಮುಖಂಡತ್ವದತ್ತ ಗುರಿಯಿಟ್ಟಿದ್ದೇನೆ ಎಂಬ ಸಂಕೇತ ನೀಡಿದರು. ಎಂದಿನಂತೆ ಬಿಜೆಪಿ ಮುಖಂಡರ ನಡುವೆ ಒಂದು ವ್ಯವಸ್ಥೆಯನ್ನು ತರಲು ಆರೆಸ್ಸೆಸ್ ಮಧ್ಯಪ್ರವೇಶಿಸಿತು.



ವ್ಯಂಗಪೂರಿತ ಕ್ರಿಯೆಗಳು

ಈ ಎರಡೂ ಕ್ರಿಯೆಗಳಲ್ಲಿ ವ್ಯಂಗ್ಯದ ಒಂದು ಲೇಪನವಿದೆ. ಮೋದಿ ಬಗ್ಗೆ ಹೇಳುವುದಾದರೆ, ಸ್ವತಂತ್ರ ಭಾರತದಲ್ಲಿಯೇ ಅತ್ಯಂತ ಕೆಟ್ಟ ಕೋಮು ನರಮೇಧದ ಪೌರೋಹಿತ್ಯ ವಹಿಸಿದ ಅವರ ಬಾಯಲ್ಲಿ 'ಸದ್ಭಾವನೆ' ಎಂಬ ಪದ ಸೈತಾನ ಧರ್ಮಗ್ರಂಥ ಪಠಣ ಕೈಗೊಂಡಂತೆಯೇ.

ಇನ್ನು ಅಡ್ವಾಣಿಯವರ ಬಗ್ಗೆ ಹೇಳಬೇಕೆಂದರೆ, ಅವರ 1990ರ ರಥಯಾತ್ರೆಯ ಬೆನ್ನ ಹಿಂದೆಯೇ ವ್ಯಾಪಕ ಕೋಮು ಹಿಂಸಾಚಾರ ನಡೆದಿದ್ದರೆ, ಈ ಬಾರಿ ಅವರು ಜಪಿಸುತ್ತಿರುವ ಭ್ರಷ್ಟಾಚಾರ-ವಿರೋಧಿ ಮಂತ್ರ ಉನ್ನತ ಮಟ್ಟದ ಭ್ರಷ್ಟಾಚಾರದಲ್ಲಿ ಬಿಜೆಪಿಯ ಸ್ವಂತ ದಾಖಲೆಯತ್ತ ಗಮನ ಸೆಳೆಯುತ್ತದಷ್ಟೇ. ಅಡ್ವಾಣಿ ತನ್ನ ರಥಯಾತ್ರೆಯನ್ನು ಪ್ರಕಟಿಸಿದ ಪತ್ರಿಕಾ ಸಮ್ಮೇಳನದಲ್ಲಿ ಒಬ್ಬ ಪತ್ರಕರ್ತರು ಕೇಳಿದ ಪ್ರಶ್ನೆ ಅತ್ಯಂತ ಸಮಂಜಸವಾಗಿತ್ತು: ಅಡ್ವಾಣಿಯವರು ತಮ್ಮ ಯಾತ್ರೆಯನ್ನು ಬಳ್ಳಾರಿಯಿಂದ ಆರಂಭಿಸುವರೇ ಎಂಬುದೇ ಆ ಪ್ರಶ್ನೆ!

ಕರ್ನಾಟಕದಲ್ಲಿ ಯೆಡ್ಯೂರಪ್ಪನವರ ಅಡಿಯಲ್ಲಿ ಬಿಜೆಪಿ ಸರಕಾರ ನಿರ್ಮಿಸಿದ ಉನ್ನತ ಮಟ್ಟದ ಭ್ರಷ್ಟಾಚಾರಕ್ಕೆ ಸರಿಗಟ್ಟುವಂತದ್ದು ಕೇಂದ್ರದಲ್ಲಿನ 2ಜಿ ಹಗರಣ ಮಾತ್ರ. ಒಂದರ್ಥದಲ್ಲಿ, ಗಣಿ ಹಗರಣ ದೊಡ್ಡ ಬಂಡವಾಳಿಗರು, ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳ ಇನ್ನೂ ವಿಸ್ತಾರವಾದ ದುಷ್ಟಕೂಟವನ್ನು ತೋರಿಸುತ್ತದೆ.



ಲೋಕಾಯುಕ್ತ ವರದಿ ಮುಖ್ಯಮಂತ್ರಿಗಳಲ್ಲದೆ, ಇಬ್ಬರು ಮಂತ್ರಿಗಳು ಮತ್ತು ವಿವಿಧ ಇಲಾಖೆಗಳ 787 ಅಧಿಕಾರಿಗಳು ಮತ್ತು ವಿಭಿನ್ನ ಗಣಿ ಕಂಪನಿಗಳನ್ನು ದೋಷಿಗಳೆಂದು ಗುರುತಿಸಿದೆ. ಆ ಇಬ್ಬರು ಮಂತ್ರಿಗಳೆಂದರೆ ಬಳ್ಳಾರಿ ಗಣಿ ಮಾಫಿಯಾಕ್ಕೆ ಸೇರಿದ ಕುಖ್ಯಾತ ರೆಡ್ಡಿ ಸೋದರರು.

ಅಡ್ವಾಣಿಯವರು ತನ್ನ ರಥದಲ್ಲಿ ದೇಶದಲ್ಲೆಲ್ಲ ಸಂಚರಿಸುವಾಗ, ಜನ ಅವರು ಉಪಪ್ರಧಾನಿ ಮತ್ತು ಗೃಹಮಂತ್ರಿಯಾಗಿದ್ದ ಎನ್‌ಡಿಎ ಸರಕಾರವನ್ನು, ಅದರ ಅಡಿಯಲ್ಲಿ ಆರಂಭವಾದ ಟೆಲಿಕಾಂ ಹಗರಣವನ್ನು ಮತ್ತು ಶೇರು ಮಾರುಕಟ್ಟೆ ಹಗರಣ, ರಕ್ಷಣಾ ವ್ಯವಹಾರಗಳ ಹಗರಣ, ಪೆಟ್ರೋಲ್ ಮತ್ತು ಅನಿಲ ಏಜೆಂಸಿಗಳ ನೀಡಿಕೆಯ ಹಗರಣ ಮುಂತಾದ ಸಾಲು-ಸಾಲು ಹಗರಣಗಳನ್ನು ನೆನಪಿಸಿಕೊಳ್ಳುವಂತಾಗುತ್ತದೆ.

ಕಪಟ ಪ್ರಶ್ನೆ

ಬಿಹಾರದ ಮುಖ್ಯಮಂತ್ರಿ ಮತ್ತು ಜೆಡಿ(ಯು) ಮುಖಂಡ ನಿತಿಶ್ ಕುಮಾರ್ ಅಡ್ವಾಣಿ ಯಾತ್ರೆಗೆ ಹಸಿರು ಬಾವುಟ ತೋರಿಸಿದರು. ಹಾಗೆ ಮಾಡುವಾಗ ಭ್ರಷ್ಟಾಚಾರದ ಪ್ರಶ್ನೆಗೆ ಕೋಮುವಾದದ ಬಣ್ಣ ಏಕೆ ಹಚ್ಚಲಾಗುತ್ತಿದೆ ಎಂದು ಕೇಳಿದರು. ನಿತಿಶ್ ಕುಮಾರ್ ಅವರಿಗೆ 1990ರ ಅಡ್ವಾಣಿ ಯಾತ್ರೆಯ ಇತಿಹಾಸ ಚೆನ್ನಾಗಿಯೇ ಗೊತ್ತಿದೆ. ಅದು ಉತ್ತರಪ್ರದೇಶ ಪ್ರವೇಶಿಸಿ ಅಯೋಧ್ಯೆಯನ್ನು ತಲುಪುವ ಮೊದಲು ಬಿಹಾರದಲ್ಲಿ ಅದನ್ನು ತಡೆದು ನಿಲ್ಲಿಸಬೇಕಾಗಿ ಬಂತು. ಇದು ಡಿಸೆಂಬರ್ 1992ರಲ್ಲಿ ಸಂಭವಿಸಿದುದರ ರಂಗತಾಲೀಮು ಆಗುವಂತದಿತ್ತು. ಭ್ರಷ್ಟಾಚಾರ-ವಿರೋಧಿ ಯಾತ್ರೆಯನ್ನು ಕೋಮುವಾದದೊಂದಿಗೆ ಬೆರೆಸುತ್ತಿರುವುದೇಕೆ ಎಂಬ ನಿತಿಶ್ ಕುಮಾರ್ ಪ್ರಶ್ನೆಯಲ್ಲಿ ಕಪಟ ಅಡಗಿದೆ. ಅಡ್ವಾಣಿಯವರ ಯಾತ್ರೆ ಕೋಮು ಹಿಂಸಾಚಾರ ಅನುಭವಿಸುತ್ತಿರುವ ಪ್ರದೇಶಗಳ ಮೂಲಕ ಸಂಚರಿಸಲಿದೆ. ಇತ್ತೀಚೆಗಷ್ಟೇ ಉತ್ತರಪ್ರದೇಶದ ಮೊರಾದಾಬಾದ್, ಬಹ್ರೈಚ್ ಮತ್ತು ಪ್ರತಾಪಗಢದಲ್ಲಿ ಕೋಮು ತಲ್ಲಣಗಳಿದ್ದವು, ಹಿಂಸಾಚಾರ ಭುಗಿಲೆದ್ದಿತ್ತು. ರಾಜಸ್ತಾನದ ಗೋಪಾಲಗಢದಲ್ಲಿ ಹತ್ತು ಜನ ಸತ್ತರು, ಅವರೆಲ್ಲರೂ ಮಿಯೊ ಮುಸ್ಲಿಮರು. ರಥಯಾತ್ರೆಗೆ ಅಣಿನೆರೆಸುತ್ತಿರುವುದು ಆರೆಸ್ಸೆಸ್ ಅಂಗ ಸಂಘಟನೆಗಳನ್ನು. ಭ್ರಷ್ಟಾಚಾರದ ವಿರುದ್ಧ ಹೋರಾಡುವ ಹೆಸರಿನಲ್ಲಿ ಅದೇ ಅಲ್ಪಸಂಖ್ಯಾತರ ದೂಷಣೆಯ ಕೋಮುವಾದಿ ವಿಷಪೋಷಣೆಯಲ್ಲಿ ಬೆಳೆದಿರುವ ಜನಜಂಗುಳಿಯನ್ನು ಸೇರಿಸಲಾಗುತ್ತಿದೆ. ನಿತಿಶ್ ಕುಮಾರ್ ಬಿಜೆಪಿ-ಆರೆಸ್ಸೆಸ್ ಪ್ರಚಾರಾಂದೋಲನಕ್ಕೆ ಔಚಿತ್ಯತೆ ಒದಗಿಸಿ ತಾನು ಪ್ರತಿಪಾದಿಸುವ ಜಾತ್ಯಾತೀತ ಮೌಲ್ಯಗಳಿಗೆ ದೊಡ್ಡ ಕೇಡು ಬಗೆದಿದ್ದಾರೆ.

ಬಿಜೆಪಿಗೆ ಭ್ರಷ್ಟಾಚಾರದ ವಿರುದ್ಧ ಹೋರಾಡುವಲ್ಲಿ ಏನಾದರೂ ಪ್ರಾಮಾಣಿಕತೆ ಇದ್ದರೆ, ಅದು ಲೋಕಾಯುಕ್ತರ ವರದಿಯ ಮೇಲೆ ದೃಢ ಕ್ರಮ ಕೈಗೊಳ್ಳುವಂತೆ ಮಾಡಬೇಕಿತ್ತು. ಯೆಡ್ಯೂರಪ್ಪ ಮತ್ತು ಲೋಕಾಯುಕ್ತ ವರದಿಯಲ್ಲಿ ಹೆಸರಿಸಿದ ಎಲ್ಲರ ಮೇಲೆ ರಾಜ್ಯ ಸರಕಾರ ಅಗತ್ಯ ಕಾನೊನು ಕ್ರಮಗಳನ್ನು ಕೈಗೊಳ್ಳುವಂತೆ ಮಾಡಬೇಕಿತ್ತು. ಅದು ರಾಜ್ಯ ಸರಕಾರಗಳನ್ನು ನಡೆಸುತ್ತಿರುವ ಮಧ್ಯಪ್ರದೇಶ ಮತ್ತು ಗುಜರಾತದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿತ್ತು. ಹಾಗೆ ಮಾಡದಿದ್ದರೆ, ಅಡ್ವಾಣಿ ಪ್ರದರ್ಶನ ಒಂದು ರಾಜಕೀಯ ಭಾವುಕತೆಯ ನಾಟಕವಾಗಿಯಷ್ಟೇ ಉಳಿಯುತ್ತದೆ.

ದೇವದುರ್ಗ

ಸಾವಿನ ಕುಣಿಕೆಗೆ ಸರದಿಯಂತೆ....

ಮುಖ್ಯಮಂತ್ರಿಗಳು ಜಿಲ್ಲೆಯ ಅಭಿವೃದ್ಧಿಗೆ ಕೋಟಿ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುತ್ತಾರೆ. ಆದರೆ ರಾಯಚೂರು ಜಿಲ್ಲೆಯ ಆ ಊರಿನಲ್ಲಿ ಜನರ ಬದುಕು ಹೇಗಿದೆ? ಇಥಿಯೋಪಿಯಾವನ್ನು ನೆನಪಿಸುವ ಮಕ್ಕಳು... ತಾಯಂದಿರು... ಜನವಾದಿ ನಿಯೋಗ ಕಂಡಿದ್ದೇನು?



ನಿಲ್ಲಲೂ ಆಗದ ಮಗು

ಬಡವಾರು ಸತ್ತಾರೆ ಸುಡಲಾಕ ಸೌದಿಲ್ಲೋ ಬಡವರಿಗೆ ಸಾವ ಕೊಡಬ್ಯಾಡೊ...

ಕೆ.ಎಸ್.ವಿಮಲ

ಇದೊಂದು ಕರುಳಿರಿಯುವ ಕಥೆ.ಕೇವಲ ಒಂದು ತಿಂಗಳ ಅವಧಿಯಲ್ಲಿ ಇಬ್ಬರು ಮಕ್ಕಳನ್ನು ಕಳೆದು ಕೊಂಡು ಮೂರನೆಯದನ್ನು ಹೊಟ್ಟೆಯಲ್ಲಿ ಹೊತ್ತುಕೊಂಡ ತಾಯಿ. ಬಡತನವಿದ್ದರೂ ಮಕ್ಕಳನ್ನು ಉಳಿಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸಿದರೂ ಸಾಧ್ಯವಾಗದ ಬಗ್ಗೆ ನೋವು ತಿನ್ನುತ್ತಿರುವ ತಂದೆ. ಇರುವ ತುಂಡು ಜಮೀನಿನಲ್ಲಿ ಬೆಳೆಯಲೂ ನೀರಿಲ್ಲ. ಕೂಲಿ ಸಿಕ್ಕರೆ ಬದುಕು.

ಇದೊಂದು ಕುಟುಂಬ

ಜೀವಂತ ಅಸ್ತಿ ಪಂಜರವೊಂದು ಇಲ್ಲಿ ಕುಳಿತಿದೆ. ದೇಹದ ಪ್ರತಿ ಮೂಳೆಯ ರಚನೆ ಹೇಗಿದೆ ಎಂಬುದನ್ನು ಸ್ಪಷ್ಟವಾಗಿ ನೋಡಬಹುದಾದ ಒಂದು ದೇಹವದು.

ಆ ಹುಡುಗನ ವಯಸ್ಸು 16. ತನ್ನ ಮಗ ಚೆನ್ನಾಗಿಯೇ ಇದ್ದ. ಈಗ ಎರಡು ಮೂರು ವರ್ಷಗಳಿಂದ ತನ್ನ ಮಗ ಹೀಗೆ ನವೆಯುತ್ತಿದ್ದಾನೆ ಎನ್ನುವ ನೀರವ ಸ್ವರದಲ್ಲಿ



ಇಥಿಯೋಪಿಯಾದವನಲ್ಲ ಇವ, ಇಲ್ಲಿಯವನೇ....

ಉತ್ತರಿಸುವ ತಾಯಿ. ಆ ಸ್ಥಿತಿಯಲ್ಲಿರುವ ಮೊಮ್ಮಗುವನ್ನು ಅತ್ಯಂತ ಅಕ್ಕರೆಯಿಂದ ಅವನು ಸರಿ ಹೋಗುತ್ತಾನೆ ಎಂಬ ಆಸೆಯಲ್ಲಿ ಇನಿತೂ ಬೇಸರವಿಲ್ಲದೇ ಆರೈಕೆಯಲ್ಲಿ ತೊಡಗಿರುವ ಅಜ್ಜಿ.

ಮಗುವಿನ ಕೈ ಉಗುರು ಪೂರ ನೀಲಿ. ತುಟಿ ನೀಲಿ. ಮೈ ಕೂಡ ನೀಲಿಯಾಗುತ್ತಿದೆ. ಎಂದರೆ ಮಗುವಿಗೆ ಗಂಭೀರವಾದ ಹೃದಯದ ತೊಂದರೆ, ಬಹಳ ಪ್ರಚಾರ ಪಡೆದುಕೊಂಡ ವಾಜಪೇಯಿ ಆರೋಗ್ಯ ಯೋಜನೆಯ ಪ್ರಕಾರ ಉಚಿತ ಚಿಕಿತ್ಸೆ ಲಭ್ಯವಾಗಬೇಕು. ಆದರೆ ಆ ಮಗುವಿನ ಪೋಷಕರು ಪ್ರಯಾಣದ ಖರ್ಚನ್ನು ಹೇಗೆ ಭರಿಸಬೇಕು? ಹಾಗಾಗಿ ಮಗು ಬದುಕಿರುವಷ್ಟು ದಿನ ನಮ್ಮ ಮಗ ಹೋದ ಮೇಲೆ ನಮ್ಮ ಮಗುವಲ್ಲ ಎಂಬ ಉತ್ತರ. ತಾನು ಅಲ್ಪಾಯುಷಿ ಎಂಬುದರ ಅರಿವೇ ಇಲ್ಲದೇ ತನ್ನೊಳಗೇ ತನ್ನನ್ನು ತಿನ್ನುತ್ತಿರುವ ಮಹಾನ್ ರೋಗವೊಂದಿದೆ ಎಂಬುದು ಗೊತ್ತಿಲ್ಲದೇ ತನ್ನ ಪಾಡಿಗೆ ಆಟ ಆಡಿಕೊಂಡಿರುವ ಆ ಮಗು.

ಮಗುವಿಗೆ ಕಾಲು ಗಟ್ಟಿ ಇಲ್ಲ. ನಿಲ್ಲಲೂ, ಕೂರಲೂ ಅಸಮರ್ಥ ಮಗುವದು. ಮಗು ಎಷ್ಟು ದಿನ ಬದುಕುತ್ತದೆ ಎಂಬ ಬಗ್ಗೆಯೇ ತಂದೆ ತಾಯಿಗಳಿಗೆ ಖಚಿತವಿಲ್ಲ. ಆದ್ದರಿಂದಲೇ ಈಗಾಗಲೇ ಎರಡು ಮಕ್ಕಳ ತಾಯಿಯಾದರೂ ಇನ್ನೂ ಮಕ್ಕಳು ಬೇಕು.

ತಾಯಿಯೇ ಅಸ್ಥಿ ಪಂಜರದಂತಿದ್ದಾಳೆ. ಅವಳ ಮಗು ಹೊಟ್ಟೆ ಮಾತ್ರ ದಪ್ಪ, ಕೈ ಕಾಲುಗಳು ಸ್ವಾಧೀನವಿಲ್ಲ. ಅತ್ತೆ 13 ಮಕ್ಕಳನ್ನು ಹೆತ್ತಿದ್ದೇನೆ ನೋಡು ಗುಂಡು ಕಲ್ಲಿನಂತಿದ್ದೇನೆ ಎಂಬ ಅವಳ ಮಾತಿಗೆ ಹೌದೇ ಎನಿಸಿತು, ನಿಜ ಗೊತ್ತಾದದ್ದು 13ರಲ್ಲಿ ಉಳಿದವರು ಇಬ್ಬರು ಮಾತ್ರ, ಹೀಗೆ ದೇವದುರ್ಗ ತಾಲೂಕಿನ ಮಲಕಂದಿನ್ನಿ, ಮಲ್ಲ ದೇವರ ಗುಡ್ಡ, ನಾಗರದಿನ್ನಿ ಮುಂತಾದ ಸ್ಥಳಗಳ ಪ್ರತಿ ಮನೆಯ ಕಥೆ ಇದು. ಊರಿನ 90% ಪ್ರತಿಶತ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಟೀವಿ ಚಾನಲ್ ಒಂದರಲ್ಲಿ ಪ್ರಸಾರವಾದ ಸುದ್ದಿಯ ಬೆನ್ನು ಹತ್ತಿ ನಾನು, ಮೀನಕ್ಕ ನಮ್ಮ ರಾಯಚೂರು ಜನವಾದಿ ಮತ್ತು ಅಂಗನವಾಡಿ ಗೆಳತಿಯರಾದ ಪದ್ಮ, ಸರಸ್ವತಿ ವರಲಕ್ಮಿ, ಶೇಕಮ್ಮ, ರಂಗಮ್ಮ ಮತ್ತಿತರರೊಂದಿಗೆ ಈ ಎಲ್ಲ ಊರುಗಳಿಗೆ ಭೇಟಿ ನೀಡಿದಾಗ ಕಂಡುಬಂದ ಮನಮಿಡಿಯುವ ದೃಶ್ಯವಿದು. ಇಂತಹ ಒಂದು ಘಟನೆಗೆ ಬಹಳ ಸರಳವಾಗಿ ಮಕ್ಕಳಿಗೆ ಪೌಷ್ಟಿಕಾಂಶದ ಕೊರತೆಯಿಂದ ಹೀಗಾಗುತ್ತಿದೆ ಎಂದು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಕೈ ತೊಳೆದು ಕೊಳ್ಳಲು ಪ್ರಯತ್ನಿಸುತ್ತಿದೆ. ನಿಜವಾದ ಪರಿಸ್ಥಿತಿಯೆಂದರೆ ರಾಜ್ಯದ ಅತ್ಯಂತ ಹಿಂದುಳಿದ ತಾಲೂಕು ದೇವದುರ್ಗ ಎಂದು ಹೇಳಲಾಗುತ್ತದೆ. ಕಿತ್ತುತಿನ್ನುವ ಬಡತನ, ಬರಗಾಲವನ್ನು ಎದುರಿಸುತ್ತಿರುವ ಪ್ರದೇಶವದು. ಸಹಜವಾಗಿಯೇ ರಕ್ತ ಹೀನತೆ, ಅಪೌಷ್ಟಿಕತೆ ಕಾಡಲೇಬೇಕು. ಮತ್ತು ಬಡತನದ ಭೂತದ ಜೊತೆಯೆ ತಳುಕು ಹಾಕಿಕೊಂಡಿರುವ ಇನ್ನೂ ಅನೇಕ ಸಾಮಾಜಿಕ ಸಮಸ್ಯೆಗಳು ಬೇಡವೆಂದರೂ ಕಣ್ಣಿಗೆ ರಾಚುತ್ತವೆ. ಆದರೆ ಆಳುವ ಸರ್ಕಾರ ಮತ್ತದರ ಪರಿಚಾರಕ ಅಧಿಕಾರಿ ವರ್ಗಕ್ಕೆ ಇದು ಕೇವಲ ಶಿಶು ಅಭಿವೃದ್ದಿ ಯೋಜನೆಯ ಅಧಿಕಾರಿಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಜವಾಬ್ದಾರರಾಗಬೇಕಾದ ಸಮಸ್ಯೆ. ಆದರೆ ನಾವು ಕಂಡಿದ್ದು?.



'ತಾಯಿ'ಯ ಸ್ಥಿತಿಗತಿ

ನಾವು ಭೇಟಿ ಮಾಡಿದ ಆ ಎಲ್ಲ ಹೆಣ್ಣು ಮಕ್ಕಳೂ ತಮ್ಮ ಬಾಲ್ಯವನ್ನು ಕಳೆದುಕೊಂಡವರು. ಎಂದರೆ ಬಾಲ್ಯ ವಿವಾಹಕ್ಕೆ ಒಳಗಾದವರು. ಜೊತೆಗೇ ಬಡತನ ಸೃಷ್ಟಿಸುವ ಮತ್ತೊಂದು ಸಮಸ್ಯೆಯಾದ ಸಂಬಂಧದೊಳಗಿನ ವಿವಾಹ. ಸರಿಯಾದ ಊಟ, ಪೌಷ್ಟಿಕಾಂಶಗಳ ಕೊರತೆ, ವೈದ್ಯಕೀಯ ನೆರವಂತೂ ದೂರವೇ ಉಳಿಯಿತು. ಈ ರೀತಿಯ ಬದುಕನ್ನು ತಮ್ಮ ಪಾಲಿಗೆ ಬಂದ ಪಂಚಾಮೃತವೆಂಬಂತೆ ಸ್ವೀಕರಿಸಿ ಬದುಕು ನಡೆಸುತ್ತಿರುವ ಈ ಜನರ ಬಗ್ಗೆ ಕನಿಷ್ಟ ಕಾಳಜಿಯನ್ನೂ ಹೊಂದಿರದ ಜನಪ್ರತಿನಿದಿಗಳ ಬಗ್ಗೆಯಾಗಲೀ ಸರ್ಕಾರದ ಬಗ್ಗೆಯಾಗಲೀ ಈ ಜನ ಆಲೋಚಿಸುತ್ತಿಲ್ಲ. ಇಡೀ ಪ್ರದೇಶದ ಅಭಿವೃದ್ಧಿಯ ಬಗ್ಗೆ ಯಾರಿಗೂ ಗಮನವಿಲ್ಲ. ಈ ಘಟನೆಯ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಬಂದಾಗ ಕೊಪ್ಪಳದಲ್ಲಿ ಉಪ ಚುನಾವಣೆ ನಡೆಯುತ್ತಿತ್ತು. ಉಪ ಚುನಾವಣೆಯ ಪ್ರಚಾರಕ್ಕೆ ಬಂದಿದ್ದ ಮುಖ್ಯಮಂತ್ರಿಗಳು ಈ ಘಟನೆಗೆ ಪ್ರತಿಕ್ರಿಯಿಸಿದ್ದು ದೇವದುರ್ಗ ತಾಲೂಕಿನ ಅಭಿವೃದ್ಧಿಗಾಗಿ 75 ಕೋಟಿ ಹಣ ಬಿಡುಗಡೆ ಮಾಡಲಾಗಿದೆ ಎಂದು. 75 ಕೋಟಿ ಇರಲಿ 75 ರೂಪಾಯಿ ಕೂಡ ಅವರಿಗೆ ತಲುಪಿಲ್ಲ. ಪಡಿತರ ಚೀಟಿ ಇದೆ. ಆದರೆ ಪಡಿತರ ಕೊಂಡುಕೊಳ್ಳಲು ಕನಿಷ್ಟ ಹಣ ಬೇಕಲ್ಲವೇ? ಕೂಲಿ ಇಲ್ಲ, ಕಾನೂನಿನ ಪ್ರಕಾರ ತಿಂಗಳಿಡಿ ತೆರೆದಿರಬೇಕಾದ ಪಡಿತರ ಅಂಗಡಿ ಅದರ



ಯಜಮಾನನ ಮರ್ಜಿಗೆ ಅನುಗುಣವಾಗಿ ಬೇಕಾದ ಹಾಗೆ ತೆರೆಯುತ್ತದೆ. ಕಾರ್ಡುದಾರರು ಒಂದೇಸಾರಿ ಎಲ್ಲ ವಸ್ತುಗಳನ್ನೂ ಕೊಂಡುಕೊಳ್ಳಲೇ ಬೇಕೆಂದೇನಿಲ್ಲ. ಆದರೆ ಅದು ಪಡಿತರ ಅಂಗಡಿ ಮಾಲೀಕರು ವಿಧಿಸಿದ ಶಾಸನ. ಅವರು ಬಾಗಿಲು ತೆಗೆದ ದಿನ, ತೆಗೆದ ಹೊತ್ತಿಗೆ ಬಂದು ತೆಗೆದುಕೊಂಡು ಹೋಗಬೇಕು. ಇಲ್ಲವೆಂದರೆ ಅಷ್ಟೆ. ಸ್ವಂತ ತುಂಡು ಹೊಲ ಮಾಡುವಷ್ಟು ಹಣ ಕಾಸಿಲ್ಲ. ನೀರಿನ ಪಸೆಯೂ ಇಲ್ಲದ ಜಮೀನು. ಅಲ್ಲಿ ಕಲ್ಲು ಮಣ್ಣು. ಎಂತಹ ನಿರ್ಲಜ್ಜತನವಿದು. ಮಕ್ಕಳನ್ನು ಕಳೆದುಕೊಂಡು ಹತಾಶ ಸ್ಥಿತಿಗೆ ತಲುಪಿದ ತಂದೆ ತಾಯಂದಿರನ್ನು ಕನಿಷ್ಟ ಭೇಟಿ ಮಾಡಿ ಸಂತೈಸುವ, ನಿಮ್ಮ ಜೊತೆಗೆ ಸರ್ಕಾರವಿದೆ, ನಾವು ನಿಮ್ಮ ಬದುಕನ್ನು ಬದಲಾಯಿಸುತ್ತೇವೆ ಎನ್ನುವ ಭರವಸೆ ನೀಡುವ

ಪುಟ 14 ಕ್ಕೆ

'ವಾಲ್‌ಸ್ಟ್ರೀಟ್' ವಶಪಡಿಸಿಕೊಳ್ಳಿ......

ಪುಟ 16 ರಿಂದ

ತೆರಿಗೆ ಹೆಚ್ಚಿಸಬೇಕು

* ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಜನತೆಯ ಭಾಗ ಅಲ್ಲ ಎಂದು ಸಂವಿಧಾನದಲ್ಲಿ ತಿದ್ದುಪಡಿ ತರುವುದು.
* ಸರ್ವರಿಗೂ ಹೆಲ್ತ್ ಕೇರ್ ವ್ಯವಸ್ಥೆ ಜಾರಿಗೊಳಿಸುವುದು.
* ಉಚಿತ ಕಾಲೇಜು ಶಿಕ್ಷಣ ನೀಡಬೇಕು.
* ಉದ್ಯೋಗ ಭದ್ರತೆ ಹಾಗೂ ಉತ್ತಮ ವೇತನ ಖಾತರಿಗೊಳಿಸಬೇಕು.
* ಮೂಲಸೌಕರ್ಯಗಳಿಗಾಗಿ (ನೀರು, ಒಳಚರಂಡಿ, ರೈಲ್ವೆ, ರಸ್ತೆ, ಸೇತುವೆ, ವಿದ್ಯುತ್) ಒಂದು ಲಕ್ಷಕೋಟಿ ಡಾಲರ್ ನೀಡಬೇಕು.
* ಪರಿಸರ ಸಂರಕ್ಷಣೆಗಾಗಿ ಒಂಟು ಲಕ್ಷ ಕೋಟಿ ಡಾಲರ್ ನೀಡಬೇಕು.
* ತೈಲ ಇಂದನಾಧಾರಿತ ವಿದ್ಯುತ್ ಮೇಲಿನ ಅವಲಂಬನೆ ಕೊನೆಗೊಳಿಸಿ ಪರ್ಯಾಯ ಮಾರ್ಗಗಳನು ಅಭಿವೃದ್ಧಿಪಡಿಸಬೇಕು.
* ಲಿಂಗ ಹಾಗೂ ಜನಾಂಗೀಯ ಬೇಧಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಮಾನಹಕ್ಕು ತಿದ್ದು ಪಡಿ ತರಬೇಕು, ಇತ್ಯಾದಿ.

ಈ ಚಳವಳಿ ತನ್ನ ಕೇಂದ್ರವನ್ನು ವಾಲ್‌ಸ್ಟ್ರೀಟನ್ನೇ ಕೇಂದ್ರಮಾಡಿಕೊಂಡಿರುವುದಕ್ಕೆ ಕಾರಣವಿದೆ. ಇಂದು ಅಮೇರಿಕದ ಇಡೀ ಹಣಕಾಸು ವ್ಯವಹಾರ ನಡೆಯುವುದು ವಾಲ್‌ಸ್ಟ್ರೀಟ್‌ನಲ್ಲಿ. ಜಗತ್ತಿನ ಅತಿದೊಡ್ಡ ಶೇರು ಮಾರುಕಟ್ಟೆಯಾದ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್ ಹಾಗೂ ನಾಸ್ಡಾಕ್ ಎಲ್ಲಾ ಇರುವುದು ಇಲ್ಲೇ. 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳವಳಿಯ ಲೋಗೋ ನೋಡಿ. ಗೂಳಿಯ ಮೇಲೆ ನೃತ್ಯಗೈಯುತ್ತಿರುವ ಯುವತಿಯ ಚಿತ್ರ!

ತಮ್ಮ ಚಳವಳಿಗೆ ಮುಖ್ಯವಾಹಿನಿ ಮಾಧ್ಯಮಗಳು ಬೆಂಬಲ ನೀಡಲಾರವು ಎಂಬ ಸಂಶಯವಿಟ್ಟುಕೊಂಡೇ ಚಳವಳಿಗಾರರು ಸಾಧ್ಯವಿರುವ ಎಲ್ಲಾ ಪರ್ಯಾಯ ಮಾಧ್ಯಮಗಳನ್ನೂ ಬಳಸಿಕೊಳ್ಳುತ್ತಿದ್ದಾರೆ. 'ಆಕ್ಯುಪೈ ವಾಲ್‌ಸ್ಟ್ರೀಟ್ ಜರ್ನಲ್ ಎಂಬ ಪತ್ರಿಕೆಯನ್ನೂ' ಹೊರತರುತ್ತಿದ್ದಾರೆ. ಅದರ ಮೊದಲ ಸಂಚಿಕೆಯ ಮುಖಪುಟದಲ್ಲೇ ಕ್ರಾಂತಿ ಈಗ ತಾಯ್ನಾಡಿನಲ್ಲೇ ಭುಗಿಲೆದ್ದಿದೆ ಎಂಬ ಒಕ್ಕಣೆಯಿತ್ತು. ಇದರೊಂದಿಗೆ ಫೇಸ್‌ಬುಕ್,



ಟ್ವಿಟರ್‌ಗಳು, ಯೂಟ್ಯೂಬ್, ವೆಬ್‌ಸೈಟ್ ಹೀಗೆ ಎಲ್ಲವೂ ನಿರಂತರವಾಗಿ ಜನಸಾಮಾನ್ಯರಿಗೆ ಸುದ್ದಿವಾಹಿನಿಗಳಾಗಿ, ಚರ್ಚಾ ವೇದಿಕೆಗಳಾಗಿ ಕೆಲಸ ಮಾಡುತ್ತಿದೆ. ಜನರು ವ್ಯಾಪಕವಾಗಿ ಬಳಸುವ ವಿಕಿಪಿಡಿಯಾ ಕೂಡಾ ಚಳವಳಿಯ ಬೆಳವಣಿಗೆಯನ್ನು ದಾಖಲಿಸುತ್ತಿದೆ. ಅರಬ್ ಹಾಗೂ ಭಾರತದಲ್ಲೇ ಸಾಕಷ್ಟು ಕೆಲಸ ಮಾಡಿರುವ ಇವುಗಳೆಲ್ಲಾ ಅಮೆರಿಕದಲ್ಲಿ ಮಾಡದಿರುತ್ತವೆಯೆ?

ಸೆಪ್ಟೆಂಬರ್ 17ರಿಂದ ಆರಂಭವಾದ ಈ ಚಳವಳಿಯ ಮೊದಲ ದಿನ ಸುಮಾರು ಒಂದು ಸಾವಿರ ಕಾರ್ಯಕರ್ತರು ಬೀದಿ\ಗಳಲ್ಲಿ ಜಮಾಯಿಸಿ ಝುಕ್ಕೊಟ್ಟಿ ಪಾರ್ಕ್‌ನಲ್ಲಿ ಕಾರ್ಡ್‌ಬೋರ್ಡ್‌ಗಳ ಸಹಾಯದಿಂದ ಜೋಪಡಿ ಹಾಕಿಕೊಂಡು ತಂಗಿದ್ದರು, (ನ್ಯೂಯಾರ್ಕ್ ಪೋಲೀಸ್ ಇಲಾಖೆ ಟೆಂಟ್‌ಬಳಕೆಯನ್ನು ನಿಷೇಧಿಸಿದ ಕಾರಣ). ಆ ವಾರ ಪೋಲೀಸರು ನಾಲ್ಕು ಜನರನ್ನು ಬಂಧಿಸಿದ್ದರು. ಸೆ.24ರಂದು ಕನಿಷ್ಟ 80 ಜನರನ್ನು ಬಂಧಿಸಲಾಗಿತ್ತು. ಅಂದು ನಡೆದ ಜಟಾಪಟಿಯಲ್ಲಿ ಮೂವರು ಮಹಿಳೆಯರ ಮೇಲೆ ಪೋಲೀಸರು ಬಲೆಯನ್ನು ಬೀಸಿ 'ಪೆಪ್ಪರ್' (ಮೆಣಸು ಕಾಳಿನ ದ್ರವ) ಸಿಂಪಡಿಸಿ ಹಲ್ಲೆ ನಡೆಸಿದ್ದರು. ಇದನ್ನು ಕೂಡಲೇ ಯುಟ್ಯೂಬ್‌ನಲ್ಲಿ ಬಹಿರಂಗಪಡಿಸಿದ ಪ್ರತಿಭಟನಾಕಾರರು ಆ ಪೋಲೀಸ್ ಅಧಿಕಾರಿಯ ಸಂಪೂರ್ಣ ವಿವರ, ಫೋನ್ ನಂಬರ್‌ಗಳನ್ನೂ ಪ್ರಕಟಿದ್ದರು. ಯಾವುದೇ ಪೊಲೀಸ್ ಅಧಿಕಾರಿ ಕೆಟ್ಟದಾಗಿ ವರ್ತಿಸಿದ ಮರುಕ್ಷಣವೇ ಆತನ ಎಲ್ಲಾ ವರ್ತನೆಯನ್ನೂ ವಿಡಿಯೋ ಸಮೇತ ಜಗತ್ತಿನ ವೀಕ್ಷಣೆಗೆ ಬಿಡಲಾಗುತ್ತಿದೆ!

ಅಕ್ಟೋಬರ್ 1ರಂದು ಬ್ರೂಕ್‌ಲಿನ್ ಸೇತುವೆ ಮೇಲೆ ಪ್ರತಿಭಟಿಸಿದ ಸುಮಾರು 700 ಜನರನ್ನು ಪೋಲೀಸರು ಬಂಧಿಸಿದ್ದರು. ಇಲ್ಲಿ ಹೀಗೆ ಬಂಧಿಸುವಾಗ ಪೋಲೀಸರು 'ಕೆಟ್ಲಿಂಗ್' ಎಂಬ ತಂತ್ರವನ್ನು ಪ್ರಯೋಗಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ನಡೆಸುವಂತೆ ಹಠಾತ್ ಲಾಠಿ ಚಾರ್ಜು, ಹಲ್ಲೆಗಳನ್ನು ಅಮೆರಿಕದಲ್ಲಿ ನಡೆಸಲು ಸಾಧ್ಯವಾಗುವುದಿಲ್ಲ. ಮಾನವ ಹಕ್ಕು, ಪ್ರಜಾತಂತ್ರಗಳ ಕುರಿತ ಮುಂದುವರಿದ ದೇಶಗಳ ಜನರ ಜನರ ಪ್ರಜ್ಞಾಮಟ್ಟ ಹೆಚ್ಚಿರುವುದರಿಂದ ಪೋಲೀಸ್ ಅಧಿಕಾರಿಗಳು ಮನಬಂದಂತೆ ವರ್ತಿಸಲು ಬರುವುದಿಲ್ಲ. ಹೀಗಾಗಿ ಪ್ರತಿಭಟನಾಕಾರರನ್ನು ಆದಷ್ಟು ಚದುರಿಸಿ, ದಿಕ್ಕು ತಪ್ಪಿಸಿ ಗುಂಪು ಗುಂಪಾಗಿ ಬಂದಿಸುವ ತಂತ್ರ ಹೂಡುವ ಕೆಟ್ಲಿಂಗ್ ಕೂಡಾ ಬಹಳಷ್ಟು ಸಲ ಟೀಕೆಗೊಳಗಾಗಿದೆ.

ಅಕ್ಟೋಬರ್ 5 ರಂದು ನ್ಯೂಯಾರ್ಕ್ ನಗರದ ಹತ್ತಾರು ಶಾಲಾಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆಯಲ್ಲಿ ಸೇರಿಕೊಂಡರು. ಅಂದು ನಡೆದ ಮೆರವಣಿಗೆಯಲ್ಲೂ ಸುಮಾರು 15,000 ಜನರು ಪಾಲ್ಗೊಂಡಿದ್ದರು. ಹೀಗೆ ದಿನೇ ದಿನೇ ಆಂದೋಲನದಲ್ಲಿ ಹೆಚ್ಚೆಚ್ಚು ಜನರು ಭಾಗವಹಿಸುತ್ತಲೇ ಇದ್ದಾರೆ.

1999ರಲ್ಲಿ ಸಿಯಾಟಲ್‌ನಲ್ಲಿ ನಡೆದ ಡಬ್ಲ್ಯೂಟಿಓ ಸಮ್ಮೇಳನದ ವಿರುದ್ಧ ಹಾಗೂ ನಂತರ ಇರಾಕ್ ಯುದ್ಧದ ವಿರುದ್ಧ ಬೃಹತ್ ಚಳವಳಿ ನಡೆದಿದ್ದವು ಅವುಗಳಲ್ಲಿ ಲಕ್ಷಾಂತರ ಜನರು ಸೇರಿದ್ದರಾದರೂ ಅವು ನಿರ್ದಿಷ್ಟ ದಿನಗಳಂದು ನಡೆದ ಪ್ರದರ್ಶನಗಳು. ಆದರೆ ಈಗ ನಡೆಯುತ್ತಿರುವುದು ಬೇರೆಯದೇ ಸ್ವರೂಪದ್ದು.

(ಮುಂದುವರಿಯುವುದು)

ಬಳ್ಳಾರಿಗೆ ಸಿಪಿಐ(ಎಂ) ನಿಯೋಗ ಅಕ್ಟೋಬರ್ 21 ರಂದು ರಾಜ್ಯ ಮಟ್ಟದ ರ‍್ಯಾಲಿ

ಅಕ್ರಮ ಗಣಿಗಾರಿಕೆಯ ಹಗರಣಗಳ ಪ್ರಮುಖ ಕೇಂದ್ರವಾಗಿರುವ ಬಳ್ಳಾರಿಗೆ ಸಿಪಿಐ(ಎಂ) ನಸಂಸದರ ನಿಯೋಗವು ಇದೇ 18 ಮತ್ತು 19 ರಂದು ಬಳ್ಳಾರಿಗೆ ಆಗಮಿಸಲಿದ್ದು ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ವಸ್ತು ಸ್ಥಿತಿಯನ್ನು ಅಧ್ಯಯನ ಮಾಡಲಿದೆ. ಈ ನಿಯೋಗದ ನೇತೃತ್ವವನ್ನು ಸಂಸದೀಯ ನಾಯಕರಾದ ಕಾಂ.ಬಸುದೇವ ಆಚಾರ್ಯ ವಹಿಸಲಿದ್ದಾರೆ. ಅಲ್ಲದೇ ರಾಜ್ಯಸಭಾ ಸದಸ್ಯರಾದ ಕಾಂ.ಬಾಲಗೋಪಾಲ್ ಮತ್ತು ರಾಜ್ಯ ಸೆಕ್ರಟಾರಿಯೆಟ್ ಸದಸ್ಯರಾದ ಜಿ.ಎನ್.ನಾಗರಾಜ್, ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯದರ್ಶಿ ಯು ಬಸವರಾಜ್ ಮುಂತಾದವರು ನಿಯೋಗದಲ್ಲಿರುವರು:

ರಾಜ್ಯ ಮಟ್ಟದ ರ‍್ಯಾಲಿ

ಲೋಕಾಯುಕ್ತ ವರದಿ ಅಂಗೀಕರಿಸಲು ಆಗ್ರಹಿಸಿ, ಸಂಪುಟದ ನಿರ್ಣಯವನ್ನು ಖಂಡಿಸಿ ಸಿಪಿಐ(ಎಂ) ನೇತೃತ್ವದಲ್ಲಿ ರಾಜ್ಯಮಟ್ಟದ ಪ್ರತಿಭಟನಾ ರ‍್ಯಾಲಿಯು ಬಳ್ಳಾರಿ ನಗರದಲ್ಲಿ ಅಕ್ಟೋಬರ್ 21 ರಂದು ನಡೆಯಲಿದೆ. ನಗರದ 12 ಕಂಟೆಗೆ ದುರ್ಗಮ್ಮನ ಗುಡಿಯಿಂದ ಹೊರಟು ಗಾಂಧಿಭವನದ ಬಳಿ ಬಹಿರಂಗ ಸಭೆ ಜರುಗಲಿದೆ.

ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಕೆ.ವರದರಾಜನ್ ಭಾಗವಹಿಸಿ ಮಾತನಾಡುವರು. ಅಲ್ಲದೇ ರಾಜ್ಯ ಮುಖಂಡರೂ ಭಾಗವಹಿಸಲಿದ್ದಾರೆ. ರ‍್ಯಾಲಿಯಲ್ಲಿ ಭಾಗವಹಿಸಲು, ಯಶಸ್ವಿಗೊಳಿಸಲು ಸಿಪಿಐ(ಎಂ) ರಾಜ್ಯ ಸಮಿತಿಯು ವಿನಂತಿಸಿದೆ. ○

........ಹುತಾತ್ಮ ದಿನಾಚರಣೆ ಮುಖ್ಯ

ಪುಟ 2 ರಿಂದ

ಸಾಧ್ಯವಿಲ್ಲ. ಗಾಂಧಿಯ ಗುಜರಾತ್ ಮತ್ತು ಅಹಮದಾಬಾದ್ ಇಂದು ಮೋದಿಯದ್ದಾಗಿ ಮಾರ್ಪಾಟಾಗಿರುವ ವಾಸ್ತವ ಚಿತ್ರಣವೇ ಹೇಳುತ್ತದೆ ಆಧುನಿಕ ಭಾರತದ ಕನಸನ್ನು ನನಸಾಗಿಸಲು ನಾವು ಕ್ರಮಿಸಬೇಕಾದ ಹೋರಾಟದ ಹಾದಿ ಎಷ್ಟು ದುರ್ಗಮ ಎಂದು.

ಮೋದಿ ಸರ್ಕಾರ ಗುಜರಾತಿನ ಐಪಿಎಸ್ ಅಧಿಕಾರಿ ಸಂಜೀವ್ ಭಟ್‌ರನ್ನು ಬಂಧಿಸಿರುವ ಕ್ರಮವೇ ಸಾರುತ್ತದೆ ಅಲ್ಲಿಯ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದನ್ನು. 2002ರ ಕೋಮು ನರಮೇಧದಲ್ಲಿ ಯಾವ್ಯಾವ ಪ್ರಮುಖ ರಾಜಕಾರಣಿಗಳು, ನೇತಾರರು ಮತ್ತು ಅಧಿಕಾರಿಗಳು ನೇರವಾಗಿ ಪಾಲ್ಗೊಂಡಿದ್ದರು ಎಂಬ ಸಾಕ್ಷಿ ಪುರಾವೆಗಳು ತನ್ನ ಬಳಿ ಇವೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದ್ದಕ್ಕಾಗಿ ಸಂಜೀವ್ ಭಟ್ ಬಂಧನಕ್ಕೊಳಬೇಕಾಗಿ ಬಂದಿದೆ.

ಆಧುನಿಕ ಭಾರತದ ಕನಸನ್ನು ನುಚ್ಚು ನೂರು ಮಾಡುವುದೇ ಗಾಂಧಿಯ ಹತ್ಯೆಯ ಹಿಂದಿರುವ ಉದ್ದೇಶವಾಗಿತ್ತು. ಆ ಮೂಲಕ ದೇಶದ ಜನರ ಸಾಂವಿಧಾನಿಕ ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ನಿರಾಕರಿಸುವುದು ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವದ ತಳಪಾಯವನ್ನೇ ಬುಡಮೇಲು ಮಾಡುವುದು ಅವರ ಮೂಲ ಉದ್ದೇಶವಾಗಿತ್ತು. ಅವರ ಈ ಪ್ರಯತ್ನ ಇಲ್ಲಿಯವರೆಗೂ ಯಶಸ್ವಿಯಾಗಿಲ್ಲ. ಗಾಂಧಿ ಜಯಂತಿಯ ಹೊರತಾಗಿ ಅವರ ಹತ್ಯೆ, ಜನರ ಸಂಕಷ್ಟಗಳನ್ನು ಪರಿಹರಿಸುವ ಕುರಿತು ನಿರಂತರವಾಗಿ ಗಾಂಧಿ ಚಿಂತಿಸುತ್ತಿದ್ದ ಮತ್ತು ಕಲಿಯುತ್ತಿದ್ದ ರೀತಿ, ಸಾರ್ವಜನಿಕ ಜೀವನದಲ್ಲಿ ಗಾಂಧಿ ಪಾಲಿಸಿಕೊಂಡು ಬಂದಿದ್ದ ಉನ್ನತ ಮಟ್ಟದ ನೈತಿಕತೆ ಹಾಗೂ ಪ್ರಾಮಾಣಿಕತೆ ಮತ್ತು ಉದಾತ್ತ ಮಟ್ಟಕ್ಕೆ ಎತ್ತರಿಸಿದ ಹೋರಾಟದ ವಿಧಾನಗಳು, ಅವರ ಜತೆಗಿನ ನಮ್ಮ ಬೇರೆಲ್ಲಾ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಆಧುನಿಕ ಭಾರತದ ಕನಸನ್ನು ನನಸಾಗಿಸಲು ಮತ್ತು ಬಲಪಡಿಸಲು ಕ್ರಮಿಸಬೇಕಾದ ಹೋರಾಟದ ದಾರಿಯನ್ನು ವಿವರಿಸುತ್ತವೆ.

(ಅಕ್ಟೋಬರ್ 3, 2011ರಂದು ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಕನ್ನಡಾನುವಾದ: ತಡಗಳಲೆ ಸುರೇಂದ್ರ)

ಕನ್ನಡ ವಾರಪತ್ರಿಕೆ

"...ಕ್ಷೌರ ಮಾಡಿರೆಂದರೆ ಮೂಗು ಕತ್ತರಿಸಿದರೋ..."

ಮಳವಳ್ಳಿಯಲ್ಲಿ ದಲಿತರ ಮೇಲೆ ದೌರ್ಜನ್ಯ

ಸ್ವತಂತ್ರ ಭಾರತದಲ್ಲಿ 21ನೇ ಶತಮಾನದಲ್ಲಿ ಕೂಡಾ ಮನುಷ್ಯತ್ವವಿಲ್ಲದ ಇಂತಹ ದೌರ್ಜನ್ಯಗಳಿಗೆ ಕೊನೆಯೇ ಇಲ್ಲ.

ಮಧ್ಯಕಾಲೀನ ಭಾರತದ ಪರಿಸ್ಥಿತಿಯನ್ನು ಮತ್ತೆ-ಮತ್ತೆ ನೆನಪಿಸಿಕೊಡುವ ರೀತಿಯಲ್ಲಿ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲೆ, ಮಕ್ಕಳ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳು ಘಟಿಸುತ್ತಲೆ ಇವೆ. ಇವರ ರಕ್ಷಣೆಯ ಹೆಸರಿನಲ್ಲಿ ಸಾಕಷ್ಟು ಕಾಯ್ದೆ-ಕಾನೂನುಗಳು ಚಾಲ್ತಿಯಲ್ಲಿದ್ದರು, ಇವು ಸಾಲದೆಂದು ಮತ್ತಷ್ಟು ಕಾನೂನುಗಳು ರಚನೆಯಾಗುತ್ತಿದ್ದರು ಇವುಗಳ ಹಂಗೆ ಇಲ್ಲದೆ ಅವಾಯಕರ ಮೇಲಿನ ದೌರ್ಜನ್ಯಗಳು ಹಳೆಯ ಮಾದರಿಗಳಲ್ಲೂ ಮತ್ತು ಹೊಸ-ಹೊಸ ಸ್ವರೂಪದಲ್ಲು ಹೆಚ್ಚಾಗುತ್ತಾ ಸಾಗಿವೆ. ದೇಶದಲ್ಲಿ ಅಸ್ತಿತ್ವದಲ್ಲಿರುವ ಕಾನೂನುಗಳಿಗಿಂತಲು ನೂರಾರು ವರ್ಷಗಳಿಂದ ಆಚರಣೆಗೊಳಪಟ್ಟಿರುವ "ನೈಸರ್ಗಿಕ ಕಾನೂನುಗಳೆ" ಇಂದೂ ಪ್ರಧಾನವಾಗಿ ಚಾಲ್ತಿಯಲ್ಲಿರುವುದನ್ನು ಈ ಬೆಳವಣಿಗಳ ಹಿಂದೆ ಕಾಣುತ್ತಿದ್ದೇವೆ.

ಇವುಗಳನ್ನೆ ಕಾನೂನು ನಿರೂಪಕ, ಕಾನೂನು ಪಾಲಕ ಸ್ಥಾನದಲ್ಲಿರುವವರು ಎತ್ತಿ ಹಿಡಿಯುತ್ತಿರುವುದರಿಂದ ಪ್ರಜಾಸತ್ತಾತ್ಮಕ ವಿಧಾನಗಳನ್ನು ಅನುಸರಿಸಿ ಬಂದ ಇಲ್ಲವೆ ಜನಾಗ್ರಹದ ಮೇಲೆ ಬಂದ ಕಾಯಿದೆಗಳು ಪುಸ್ತಕ ರೂಪದಲ್ಲಿ ಕಪಾಟುಗಳಲ್ಲಿದ್ದು ಆಚರಣೆಯಲ್ಲಿ ಮಾತ್ರ ಬಲಾಢ್ಯರ ಪರವಾದ "ನೈಸರ್ಗಿಕ ಕಾನೂನುಗಳೆ" ಅಸ್ತಿತ್ವದಲ್ಲಿವೆ. ಅವುಗಳಿಗೆ ಪುಷ್ಟಿ ನೀಡುವಂತೆ ಜಾತಿ, ಧರ್ಮದ ಹೆಸರುಗಳಲ್ಲಿ ಜನರನ್ನು ವಿಭಾಗಿಸುವ ಕೆಲಸ ಕರ್ನಾಟಕದಲ್ಲಿ ಸರ್ಕಾರಿ ಕೆಲಸವೆ ಆಗಿಬಿಟ್ಟಿದೆ. ಇದರ ಫಲವೆಂಬಂತೆ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯತ್ತ ಜನರ ಮನವೊಲಿಸುವ ಪ್ರಜ್ಞಾಪೂರ್ವಕ ಕೆಲಸವನ್ನು, ದಲಿತ ವಿರೋಧಿ ಬಾವನೆಗಳನ್ನು ಪ್ರಚೋದಿಸುವ ಕೃತ್ಯಗಳನ್ನು ಸರ್ಕಾರ ಸಹಜವೆಂಬಂತೆ ಮಾನ್ಯ ಮಾಡುತ್ತಿದೆ. ಆದ್ದರಿಂದಲೆ ದಲಿತರ ಮೇಲೆ ಎಂಥವೇ ದೌರ್ಜನ್ಯಗಳು ನಡೆದರು, ದಲಿತ ಹಕ್ಕುಗಳನ್ನು ತ ಬಿಸಾಡಿದರು ರಾಜೀ ಸೂತ್ರದ ಮೂಲಕ ಪ್ರಕರಣಗಳಿಗೆ ನ್ಯಾಯ ಒದಗಿಸುವ ಎಗ್ಗಿಲ್ಲದ ಕೆಲಸ ರಾಜ್ಯದಾದ್ಯಂತ ಚಾಲ್ತಿಯಲಿದೆ. ಅದಕ್ಕೊಂದು ತಾಜಾ ಉದಾಹರಣೆ ಮಂಡ್ಯದಿಂದ ವರದಿಯಾಗಿದೆ ಓದಿ.

ಪರಿಶಿಷ್ಟ ಜಾತಿಯ ಚಿಕ್ಕಮಂಚಯ್ಯನಿಗೆ ಮಹದೇವನೆಂಬ ಕ್ಷೌರಿಕನೋರ್ವ ರೇಜರ್‌ನಿಂದ ಮೂಗು ಕತ್ತರಿಸಿದ ಅಮಾನವೀಯ ಘಟನೆ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹೋಬಳಿ ಕೇಂದ್ರವಾದ ಕಿರುಗಾವಲಿನಲ್ಲಿ ನಡೆದಿದೆ. ಕಳೆದ ಭಾನುವಾರ ಮದ್ಯಾಹ್ನ ಘಟನೆ ನಡೆದಿದ್ದು ತೀವ್ರವಾಗಿ ಗಾಯಗೊಂಡಿರುವ ಚಿಕ್ಕಮಂಚಯ್ಯ ಮಂಡ್ಯದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾರೆ. ಚಿಕ್ಕಮಂಚಯ್ಯನವರು ಕ್ಷೌರ ಮಾಡಿಸಲೆಂದು ಮಹದೇವುರವರ ಕ್ಷೌರದ ಅಂಗಡಿಗೆ ಹೋದಾಗ ಕ್ಷೌರ ಮಾಡಲು ಮಹದೇವು ನಿರಾಕರಿಸಿದ್ದಾರೆ. ಆಗ ಮಾತಿಗೆ ಮಾತು ಬೆಳೆದು ಮಹದೇವು ತನ್ನ ರೇಜರ್‌ನಿಂದ ಚಿಕ್ಕಮಂಚಯ್ಯನವರ ಮೂಗನ್ನು ಕತ್ತರಿಸಿಹಾಕಿದ್ದಾರೆ.



ಮಂಡ್ಯ ಜಿಲ್ಲೆಯಲ್ಲಿ ನಿರಂತರವಾಗಿ ಮುಂದುವರೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ನಾಗಮಂಗಲ ತಾಲ್ಲೂಕಿನ ಶಾಸಕರ ಸ್ವಗ್ರಾಮ ಕಸುವಿನಹಳ್ಳಿಯಲ್ಲಿ ದಲಿತರಿಗೆ ಬಹಿಷ್ಕಾರ ಹಾಕಿರುವ ಪ್ರಕರಣ ನಡೆದ ಬೆನ್ನಲ್ಲೆ ಈ ಪ್ರಕರಣವೂ ನಡೆದಿದ್ದು ಆತಂಕದ ಛಾಯೆ ಎದುರಾಗಿದೆ.

ಕಿರುಗಾವಲಿನಲ್ಲಿ 300 ಕ್ಕೂ ಹೆಚ್ಚು ದಲಿತ ಕುಟುಂಬಗಳಿವೆ. ಅಷ್ಟೇ ಸಂಖ್ಯೆಯ ಒಕ್ಕಲಿಗರಿರುವ ಈ ಊರಿನಲ್ಲಿ ಮುಸಲ್ಮಾನರೇ ಬಹುಸಂಖ್ಯಾತರು. ಬೆರಳೆಣಿಕೆಯಷ್ಟು ಇತರೆ ಜಾತಿಯ ಕುಟುಂಬಗಳು. ಹೆಚ್ಚಿನ ದಲಿತರು ಬೇರೆ ಕಡೆಗಳಂತೆಯೆ ಇಲ್ಲಿಯೂ ಕೃಷಿ ಕೂಲಿಕಾರರು. ಚಿಕ್ಕಮಂಚಯ್ಯನೂ ಸಹ ಒಬ್ಬ ಭೂರಹಿತ ಕೂಲಿಕಾರ್ಮಿಕ.

ಕಿರುಗಾವಲಿನಲ್ಲಿ ಈ ಮೂರು ವರ್ಷಗಳಿಂದೀಚೆಗಷ್ಟೆ ದಲಿತರಿಗೆ ಕ್ಷೌರ ಮಾಡುವ ಕೆಲಸ ಪ್ರಾರಂಭವಾಯಿತು. ಅದಕ್ಕೂ ಮುಂಚೆ ಆ ಗ್ರಾಮದಲ್ಲಿ ದಲಿತರಿಗೆ ಕ್ಷೌರ ಮಾಡುತ್ತಿರಲಿಲ್ಲ. ದಲಿತ ಜಾಗೃತಿ ಮತ್ತು ಹಲವಾರು ಪ್ರತಿಭಟನೆಗಳ ನಂತರವಷ್ಟೆ ಈ ಸೌಲಭ್ಯ ದಲಿತರಿಗೆ ದೊರೆಯಿತು. ಆದರೂ ಎಲ್ಲರಿಗೂ ಕ್ಷೌರ ಮಾಡುವಂತೆ ಸರತಿಯಲ್ಲಿ ದಲಿತರಿಗೆ ಅವಕಾಶವಿಲ್ಲ. ಅವರನ್ನು ಕಾಯಿಸುವುದು, ಸತಾಯಿಸುವುದು. [illegible] ಹೀಗೆ ಪರೋಕ್ಷ ನಿರಾಕರಣೆ ನಡೆದೇ ಇದೆ. ದಲಿತ ಯುವಕರಿಗೆ ಈ ಸಮಸ್ಯೆ ಬಹಳವಾಗಿ ಎದುರಾಗದಿದ್ದರೂ ವಯಸ್ಸಾದವರಿಗೆ ತಿರಸ್ಕಾರ ನಡೆದೇ ಇದೆ. ಇಂತಹ ನಿರಾಕರಣೆಯ ಹಿನ್ನೆಲೆಯಲ್ಲಿಯೇ ಮೂಗು ಕತ್ತರಿಸುವ ಪಾಳೇಗಾರಿ ಕೃತ್ಯ ನಡೆದಿದೆ.

ಕ್ಷೌರಿಕರು ದಲಿತರಷ್ಟೆ ಹಿಂದುಳಿದವರಾಗಿದ್ದು ಅವರಲ್ಲಿ ಸವರ್ಣೀಯ ಪ್ರಜ್ಞೆ ಅಷ್ಟಾಗಿ ಇಲ್ಲದಿದ್ದರೂ ಸವರ್ಣೀಯ ಪ್ರಜ್ಞೆ ವಿಪರೀತವಾಗಿರುವ ಸಾಮಾಜಿಕ ಸನ್ನಿವೇಶ ಹಾಗೂ ಒತ್ತಡದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ದಲಿತರಿಗೆ ಕ್ಷೌರ ಮಾಡಿದರೆ ಸವರ್ಣೀಯರು ಕ್ಷೌರಕ್ಕೆ ಬರುವುದಿಲ್ಲ ಎಂಬ ಭಯ, ಮೇಲ್ಜಾತಿಯವರ ಬೆದರಿಕೆ ಕ್ಷೌರಿಕರನ್ನು ಈ ರೀತಿಯ ಕೃತ್ಯಗಳಿಗೆ ಪ್ರೇರೇಪಿಸುತ್ತಿವೆ. ಈ ಅಭಿಪ್ರಾಯವನ್ನು ಸ್ವತಃ ಕ್ಷೌರಿಕರೆ ಹೇಳುತ್ತಾರೆ.

ಮಂಡ್ಯ ಜಿಲ್ಲೆಯಲ್ಲಿ ಈ ರೀತಿಯ ಪ್ರಕರಣಗಳು ಮತ್ತೆ ಮತ್ತೆ ಘಟಿಸುತ್ತಿದ್ದರೂ ಜಿಲ್ಲಾಡಳಿತ ಮತ್ತು ಸರ್ಕಾರ ನಿಷ್ಕ್ರಿಯವಾಗಿವೆ. ಹಿಂದಿನ ಪ್ರಕರಣಗಳಲ್ಲೂ ಸ್ವತಃ ದಲಿತರೇ ಆಗಿರುವ ಸಮಾಜ ಕಲ್ಯಾಣ ಸಚಿವರು ನಿರ್ದಾಕ್ಷಿಣ್ಯ ಕ್ರಮದ ಬದಲು ರಾಜಿ ಸೂತ್ರದ ಮಾತುಗಳನ್ನಾಡಿದ್ದರು. ಮಳವಳ್ಳಿಯ ಶಾಸಕರಾದ ನರೇಂದ್ರ ಸ್ವಾಮಿಯವರದೂ ಅದೇ ರಾಗ. ತಾಲ್ಲೂಕು ಆಡಳಿತವಂತೂ ಈ ವಿಚಾರಗಳಲ್ಲಿ ತನಗೆ ಜವಾಬ್ದಾರಿಯೇ ಇಲ್ಲವೆಂಬಂತೆ ವರ್ತಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಚಿಕ್ಕಮಂಚಯ್ಯನೂ ಸೇರಿದಂತೆ ದೌರ್ಜನ್ಯಕ್ಕೊಳಗಾದ ಎಲ್ಲರಿಗೂ ಪರಿಹಾರಕ್ಕಾಗಿ ಮತ್ತು ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಟವನ್ನು ತೀವ್ರಗೊಳಿಸಬೇಕಿದೆ. ಇಂತಹ ಪ್ರಕರಣಗಳು ಮರುಕಳಿಸದಂತೆ ನಿಗಾ ವಹಿಸಬೇಕಾದ ಜವಾಬ್ದಾರಿಯನ್ನು ಜಿಲ್ಲಾಡಳಿತ ಅಗತ್ಯವಾಗಿ ವಹಿಸುವಂತೆ ಒತ್ತಡ ತರಬೇಕಿದೆ. ▲

ಈ ವಾರ....

ಪುಟ 3 ರಿಂದ

ವಿಶೇಷವಾಗಿ ಇಂತಹ ಕಾರ್ಯಗಳಲ್ಲಿ ಅಡ್ಡಗೋಡೆಗಳನ್ನೊಡೆದು ಮುಂದಡಿ ಇಟ್ಟ ಆ ವಿಧವಾ ಮಹಿಳೆಯರು ಖಂಡಿತಕ್ಕೂ ಅಭಿನಂದನಾರ್ಹರು.

ಇದೇ ಹೊತ್ತಿನಲ್ಲಿ ಈ ಕಾರ್ಯದ ಸಕಾರಾತ್ಮಕ ಅಂಶಗಳನ್ನು ಗುರುತಿಸುವಾಗಲೇ ಪೂಜಾರಿಯವರನ್ನು ಆಧುನಿಕ ರಾಜಾರಾಮಮೋಹನ ರಾಯರೆಂದೆಲ್ಲಾ ಬಣ್ಣಿಸಿ ವಿಜೃಂಭಿಸುವುದು ಸರಿಯಲ್ಲ.

ಈ ಕಾರ್ಯಕ್ರಮಕ್ಕೆ ಮಹಿಳೆಯರಿಂದ ದೊರೆತ ಪ್ರತಿಕ್ರಿಯೆಯು ಅತ್ಯಂತ ಗಮನಾರ್ಹವಾಗಿದೆ. 1500 ಜನರನ್ನು ನಿರೀಕ್ಷಿಸಿದ್ದರೆ, 2300 ಮಹಿಳೆಯರು ಬಂದಿದ್ದಾರೆ. ಚಂಡಿಕಾ ಹೋಮ, ರಥ ಎಳೆಯುವುದರಲ್ಲಿ ಭಾಗವಹಿಸಿ ವಿಧವಾ ಮಹಿಳೆಯರಿಗಿದ್ದ ನಿಷೇಧದ ಅನಿಷ್ಟ ಸಂಪ್ರದಾಯಗಳನ್ನು ಮುರಿದಿದ್ದಾರೆ. ಇವೆಲ್ಲಾ ಅಂದು ಬಾಗವಹಿಸಿದವರಲ್ಲಿ ಮಾತ್ರವಲ್ಲದೇ ಸಮಾಜದ ಲಕ್ಷಾಂತರ ಮಹಿಳೆಯರಲ್ಲಿಯೂ ಉತ್ಸಾಹ ತಂದಿದೆ. ಇದರ ಜೊತೆ ಪುರೋಗಾಮಿಯಾಗಿ ಚಿಂತಿಸುವ ಪುರುಷರದ್ದೂ ಧ್ವನಿಇದೆ. ಆದ್ದರಿಂದ ಈ ಉತ್ಸಾಹವು ವಿಸ್ತರಣೆಗೊಳ್ಳುವಂತೆ ಒಂದು ಆಂದೋಲನವಾಗಿ ರೂಪುಗೊಳ್ಳಬೇಕಿದೆ. ಸಾಮಾಜಿಕ, ಧಾರ್ಮಿಕ ವರ್ಗದೊಳಗು ದೃಷ್ಟಿಕೋನ ಬದಲಾಗಲೇಬೇಕಾಗಿದೆ.

ಆದ್ದರಿಂದ ಈ ದಿಕ್ಕಿನಲ್ಲಿ ಚಿಂತನೆ - ಕಾರ್ಯಕ್ರಮ ರೂಪಿತವಾಗಬೇಕು.

ಕರಾವಳಿ ಕೋಮುವಾದಿಗಳ, ಮೂಲಭೂತವಾದಿಗಳ ಧಾಳಿಗಳಿಂದ ನಿತ್ಯವೂ ಸುದ್ದಿಯಲ್ಲಿದ್ದು ಅದೇ ಕರಾವಳಿಯನ್ನೆಲ್ಲ ಆವರಿಸಿಬಿಟ್ಟಿದೆಯೆಂದು ಭಾಸವಾಗುವುದರ ನಡುವೆ ಅಲ್ಲಿನ ಸ್ಥಿತಿಯ ಇನ್ನೊಂದು ಆಶಾದಾಯಕ ಮುಖವು ಅನಾವರಣಗೊಂಡಿದೆ. ಅದೇ ಹೊತ್ತಿನಲ್ಲಿ ಕುಂಜಾರುಗಿರಿ ದೇವಸ್ಥಾನದಲ್ಲಿ ಅನ್ಯಜಾತಿ ಎಂಬ ಕಾರಣಕ್ಕೆ ಸರ್ಕಾರಿ ಮಹಿಳಾ ಅಧಿಕಾರಿಯೊಬ್ಬರನ್ನು ಪಂಕ್ತಿಯಿಂದ ಹೊರಹಾಕಿದ ಖಂಡನೀಯ ಕೃತ್ಯ ನಡೆದಿದೆ. ವರ್ಣಾಶ್ರಮ ಧರ್ಮವನ್ನು ಸಂರಕ್ಷಿಸಿಕೊಳ್ಳುವ ಪುರೋಹಿತಶಾಹಿ ವರ್ತನೆಗಳು ಒಂದೆಡೆ. ಅಂತಹವುಗಳನ್ನು ಧಿಕ್ಕರಿಸುವ ಮನಸ್ಸು [illegible]


ಭೂಮಿ ಹಕ್ಕಿನಿಂದ ವಂಚಿತರಾಗಿರುವ ರೈತ-ಕೂಲಿಕಾರರು ಭೂಮಿಗಾಗಿ ಚಳುವಳಿಗೆ ಇಳಿದಿದ್ದಾರೆ. ಈ ಹೋರಾಟವನ್ನು ಸಂಘಟಿಸುವಲ್ಲಿ ತೊಡಗ್ರಿವ ಸಂಗಾತಿ ಅಚ್ಚೊಳ್ಳಿ ವಿವರಗಳನ್ನು, ಸಮಸ್ಯೆಯ ಸ್ವರೂಪ ಹಾಗೂ ಹೋರಾಟವನ್ನ ವಿವರಿಸಿದ್ದಾರೆ

ಅರಣ್ಯಭೂಮಿ ಹಕ್ಕಿಗಾಗಿ ಹೋರಾಡಲು ಸಂಘಟಿತವಾಗುತ್ತಿರುವ ಬಡ ರೈತ-ಕೂಲಿಕಾರರು

ಕರಿಯಪ್ಪ ಅಚ್ಚೊಳ್ಳಿ

ಎಡಪಕ್ಷಗಳ ಮತ್ತು ಎಡ ರೈತ ಹಾಗೂ ಕೃಷಿಕೂಲಿಕಾರರ ಸಂಘಟನೆಗ ಪರಿಣಾಮವಾಗಿ ಕೇಂದ್ರ ಸರ್ಕಾರವು 2006ರಲ್ಲಿ "ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ಹಕ್ಕುಗಳನ್ನುಮಾನ್ಯ ಮಾಡುವ ಕಾಯ್ದೆಯನ್ನು ಸಂಸತ್ತಿನಲ್ಲಿ ಅಂಗೀಕರಿಸಿತು. 2007 ರಲ್ಲಿ ಅದು ಬಾರತದ ಬಜೆಟ್‌ನಲ್ಲಿ ಪ್ರಕಟವಾಯಿತು. ಕಾಯ್ದೆಗೆ ಸಂಬಂಧಪಟ್ಟ ನಿಯಮಗಳನ್ನು 2008 ರಲ್ಲಿ ರಚಿಸಲಾಯಿತ್ತು. ಆದರೆ ಕರ್ನಾಟಕದಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲು ಸರ್ಕಾರ ಇದುವರೆಗೂ ಯಾವುದೇ ಸರಿಯಾದ ಕ್ರಮಗಳನ್ನು ಕೈಗೊಂಡಿಲ್ಲ. ಮೈಸೂರು, ಶಿವಮೊಗ್ಗ, ಕೊಡಗು, ಉತ್ತರ ಕನ್ನಡ ಮುಂತಾದ ಕೆಲವೇ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಆದಿವಾಸಿ ಬುಡಕಟ್ಟು ಜನರಿಂದ ಹಾಗೂ ಇತರ ಅರಣ್ಯ ವಾಸಿಗಳಿಂದ , ಕಾಯ್ದೆಯಲ್ಲಿ ಸೂಚಿಸಿರುವಂತೆ ವೈಯುಕ್ತಿಕ ಅರ್ಜಿಗಳನ್ನು ಸ್ವೀಕರಿಸುವ ಮತ್ತು ಅವುಗಳನ್ನು ಪರಿಶಿಲಿಸುವ ಕಾರ್ಯ ಆರಂಭವಾಗಿದೆ. ಉಳಿದ ಜಿಲ್ಲೆಗಳಲ್ಲಿ ಈ ಪ್ರಕ್ರಿಯೇ ಆರಂಭವಾಗಲೇ ಇಲ್ಲ ಸಂಬಂಧಪಟ್ಟ ಶಾಸಕರು, ಉಸ್ತುವಾರಿ ಮಂತ್ರಿಗಳು ಯಾರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅನೇಕ ವರ್ಷಗಳಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಜೀವನ ನಿರ್ವಹಿಸುತ್ತಿರುವ ನೂರಾರು, ಸಾವಿರಾರು ಬಡ ಕುಟುಂಬಗಳ ಬಗ್ಗೆ ಕನಿಷ್ಠ ಕಾಳಜಿಯನ್ನು ತೋರಿಸುತ್ತಿಲ್ಲ. ಹೀಗಾಗಿ ಅರಣ್ಯ ಇಲಾಖೆಯವರು, ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ಬಡವರ ಮೇಲೆ ದೌರ್ಜನ್ಯ ದಬ್ಬಾಳಿಕೆ ನಡೆಸುತ್ತಿದ್ದಾರೆ. ಕಾಯ್ದೆ ಅಡಿಯಲ್ಲಿ ಸಲ್ಲಿಸಬೇಕಾದ ಅರ್ಜಿ ನಮೂನೆಗಳನ್ನು ಮುದ್ರಿಸಿ ಒದಗಿಸಬೇಕಾದ ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಇಲಾಖೆಯಾಗಲಿ ಈ ವಿಷಯಕ್ಕೆ ಸಂಬಂಧಪಟ್ಟು ಗಾಢ ನಿದ್ದೆಯಲ್ಲಿದ್ದಂತಿವೆ.

ಆಂದ್ರಪ್ರದೇಶದ ಗಡಿಯಲ್ಲಿರುವ ರಾಯಚೂರು ತಾಲ್ಲೂಕಿನ ಉಂಡ್ರಾಲ್ ದೊಡ್ಡಿ, ಬಾಯಿದೊಡ್ಡಿ, ಬಾಪೂರು, ಬಾಪೂರು ತಾಂಡಾ, ಸಿಂಗನೋಡಿ, ಸಿಂಗನೋಡಿ ತಾಂಡಾ, ಮಂಡಲಗೇರಿ, ವಡ್ಲಂ ದೊಡ್ಡಿ, ಅರಸೀಕೇರಾ, ಅರಸೀಕೇರಾ ತಾಂಡಾ, ಚಂದ್ರ ಬಂಡಾ, ಅಯಜಾಪುರ, ರಾಜಲಬಂಡಾ, ಮಾಸದೊಡ್ಡಿ, ಕುರುಬದೊಡ್ಡಿ, ಗೊನವಾರ, ಮಿಟ್ಟಿ ಮಲ್ಕಾಪುರ, ಬಿಜನಗೇರಾ, ಜಂಬದಿನ್ನಿ, ಯರಗೇರಾ, ಕುಂಚಾಪುರ, ಮುರ್ಕದೊಡ್ಡಿ ಪುಚ್ಚಲದಿನ್ನಿ, ದೇವನಪಲ್ಲಿ, ತುರುಕನದೋಣಿ, ಯದ್ಲಾಪುರ, ಇಬ್ರಾಹಿಂ ದೊಡ್ಡಿ, ಯಾಪಲದಿನ್ನಿ, ಮೊದಲಾದ ಗ್ರಾಮಗಳ ಬಡ ರೈತರು ಮತ್ತು ಭೂಮಿ ಇಲ್ಲದ ಕೃಷಿಕೂಲಿಕಾರರು ಮೂರು ನಾಲ್ಕು ತಲೆಮಾರುಗಳಿಂದ ತಮ್ಮ ಗ್ರಾಮಗಳ ಆಸುಪಾಸಿನಲ್ಲಿದ್ದ ಮರಗಳೇ ಇಲ್ಲದ ಅರಣ್ಯ



ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಇವರೆಲ್ಲಾ ಬುಡಕಟ್ಟು (ಎಸ್.ಟಿ) ಹಾಗೂ ಅನುಸೂಚಿತ ಜಾತಿ (ಎಸ್.ಸಿ) ಅಲ್ಲದೆ ಇತರೆ ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದಾರೆ. ತಮ್ಮ ಜೀವನ ನಿರ್ವಹಣೆಗೆ ಅವರು ಈ ಅರಣ್ಯ ಭೂಮಿಯನ್ನೆ ಅವಲಂಭಿಸಿರುತ್ತಾರೆ. ಇವರಲ್ಲಿ ಅನೇಕ ಸಾಗುವಳಿದಾರರ ಹೆಸರುಗಳು ಪಹಣಿ ಪತ್ರಿಕೆಗಳ ಕಬ್ಜಾದಾರರ ಕಾಲಂನಲ್ಲಿ ನಮೂದಾಗಿವೆ. ಇನ್ನೂ ಕೆಲವರಿಗೆ ಅವರ ಹಿರಿಯರ ಕಾಲದಲ್ಲಿ ಭೂಮಿ ವಿತರಣೆ ಆಗಿದ್ದು ಮ್ಯುಟೇಶನ್ ದಾಖಲೆಗಳು ಸಹ ಇವೆ. ಆದರೆ ಅರಣ್ಯ ಇಲಾಖೆಯವರು ಈ ಯಾವ ದಾಖಲೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಾಗುವಳಿದಾರ ಬಡವರನ್ನು ಒಕ್ಕಲೆಬ್ಬಿಸುವ, ಅವರು ಬೆಳೆದ ಪೈರನ್ನು ನಾಶಮಾಡುವ, ಅಸಹಾಯಕರಾದ ಅವರಿಂದ ಲಂಚ ವಸೂಲಿ ಮಾಡುವ ಮೂಲಕ ನಿರಂತರ ಕಿರುಕುಳ ನೀಡುತ್ತಿದ್ದಾರೆ, ಅರಣ್ಯ ಅಧಿಕಾರಿಗಳು 1980 ರ ಅರಣ್ಯ ಸಂರಕ್ಷಣಾ ಕಾಯ್ದೆ ಮತ್ತು ಅರ್ವೋಚ್ಛ ನ್ಯಾಯಲಯದ ಆದೇಶ ಹಾಗೂ ಅದನ್ನು ಜಾರಿಮಾಡಿ ಅರಣ್ಯಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲು ಅಂದಿನ ಪ್ರಧಾನಿ ಎ.ಬಿ. ವಾಜಪೇಯಿ ನೀಡಿದ ಆದೇಶವನ್ನು ಉಲ್ಲೇಖಿಸುತ್ತಾರೆ. ಆದರೆ 2006 ರಲ್ಲಿ ಸಂಸತ್ ಪಾಸ್ ಮಾಡಿರುವ ಹೊಸ ಅರಣ್ಯ ಕಾಯ್ದೆ ಬಗ್ಗೆ ಪ್ರಸ್ತಾಪವನ್ನೇ ಮಾಡುವುದಿಲ್ಲ.

ಸಂಘಟಿತ ಹೋರಾಟ ಆರಂಭ:-

ಇತ್ತೀಚೆಗೆ ರಾಯಚೂರು ತಾಲ್ಲೂಕಿನ ಗ್ರಾಮಗಳ ಅರಣ್ಯ ಭೂಮಿ ಸಾಗುವಳಿದಾರರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ಅಡಿಯಲ್ಲಿ ಸೇರಿಕೊಂಡು ಅರಣ್ಯಭೂಮಿ ಹಕ್ಕಿಗಾಗಿ ಹೋರಾಡಲು ದೃಢ ಸಂಕಲ್ಪ ಮಾಡಿದ್ದಾರೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದಸ್ವಾಮಿ ಅವರು ಸ್ಥಳೀಯ ಮುಖಂಡರಾದ ಸಂಗಾತಿ ಕರಿಯಪ್ಪ ಅಚ್ಚೊಳ್ಳಿ ಅವರೊಂದಿಗೆ ಈ ಕೆಲವು ಗ್ರಾಮಗಳಿಗೆ ತೆರಳಿ ಹಂತ ಹಂತವಾಗಿ ಹೋರಾಟ ಮಾಡಿ ಭೂಮಿಯ ಹಕ್ಕನ್ನು ಪಡೆಯಬಹುದೆಂದು ಅವರಿಗೆ ಮನವರಿಕೆ ಮಾಡಿದ್ದಾರೆ. ಉಂಡ್ರಾಲ್‌ದೊಡ್ಡಿಯ ಮುದ್ದಪ್ಪ ಹಾಗೂ ಶಿವಮುತ್ತಪ್ಪ, ಸಿಂಗನೋಡಿಯ ರಾಮಯ್ಯ ಹಾಗೂ ಯಲ್ಲಪ್ಪ, ಅಯಜಾಪುರದ ಭೀಮಣ್ಣ, ರಾಜಲಬಂಡಿಯ ಮುನಿಯಪ್ಪ, ಬಾಯಿದೊಡ್ಡಿಯ ಗೋವಿಂದ ಕುಂಬಾರ, ಬಾಪೂರಿನ ಗೋಕರಪ್ಪ, ಬಾಪೂರ್ ತಾಂಡಾದ ವೆಂಕಟೇಶ್ ಅರಸೀಕೇರಾ ತಾಂಡಾದ ಶ್ರೀಮತಿ ಮಾಣಿಕ್ಯಮ್ಮ ಮೊದಲಾದವರೊಂದಿಗೆ ಚರ್ಚಿಸಿ 27-06-2011 ರಂದು ರಾಯಚೂರು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಅರಣ್ಯಧಿಕಾರಿಗಳಿಗೆ ಮನವಿ ಸಲ್ಲಿಸುವ ಕಾರ್ಯಕ್ರಮವನ್ನು ರೂಪಿಸಲಾಯಿತ್ತು.

ತೀರ್ಮಾನದಂತೆ, ಜೂನ್ 27 ರಂದು ಸುಮಾರು 500 ಜನ ಅರಣ್ಯ ಭೂಮಿ ಸಾಗುವಳಿದಾರರು ರಾಯಚೂರು ನಗರದ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾ ಅರಣ್ಯ ಅಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಪ್ರತ್ಯೇಕವಾದ ಮನವಿಗಳನ್ನು ಸಲ್ಲಿಸಿದರು. ಅರಣ್ಯಭೂಮಿ ಸಾಗುವಳಿದಾರರ ಮೇಲೆ ಅರಣ್ಯ ಇಲಾಖೆಯವರು ದೌರ್ಜನ್ಯ ಎಸಗುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು. 2006 ರ ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ತಮಗೆ ಹಕ್ಕು ಪತ್ರಗಳನ್ನು ನೀಡಬೇಕೆಂದು ಮನವಿಗಳಲ್ಲಿ ಒತ್ತಾಯಿಸಲಾಗಿತ್ತು. ಅರಣ್ಯಭೂಮಿ ಸಾಗುವಳಿದಾರರ ಮೇಲೆ ಅರಣ್ಯ ಇಲಾಖೆಯ ಸಿಬ್ಬಂಧಿಯವರು ದೌರ್ಜನ್ಯ ಮಾಡದಂತೆ ಕ್ರಮವಹಿಸಲಾಗುವುದೆಂದು ಹಾಗೂ ಅರಣ್ಯ ಭೂಮಿ ಸಾಗುವಳಿದಾರರ ಬೇಡಿಕೆಗಳನ್ನು ಪರಿಶೀಲಿಸಲಾಗುವುದೆಂದು ಜಿಲ್ಲಾಧಿಕಾರಿ ವಿ. ಅನ್ಬುಕುಮಾರ್ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಿಪಿಐ(ಎಂ) ನ ಮಾಜಿ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ ಭಾಗವಹಿಸಿ ಮಾತನಾಡಿದರು. ಅರಣ್ಯ ಭೂಮಿ ಸಾಗುವಳಿದಾರರ ಹೋರಾಟ ನಡೆಸಿ ಜೈಲುವಾಸದ ಅನುಭವ ಹೊಂದಿದ್ದ ಸವದತ್ತಿಯ ಎಲ್. ಎಸ್. ನಾಯಕ್ ಅವರು ಲಂಬಾಣಿ ಭಾಷೆಯಲ್ಲಿ ಮಾಡಿದ ಬಾಷಣದಿಂದಾಗಿ ಭಾಗವಹಿಸಿದ್ದ ಜನರಿಗೆ ಭೂಮಿಗಾಗಿ ನಡೆಸಬೇಕಾದ ಹೋರಾಟದ ವಿವಿಧ ಆಯಾಮಗಳು ಮನವರಿಕೆಯಾದವು. ಈ ಸಂದರ್ಭದಲ್ಲಿ ಸಂಗಾತಿ ನಿತ್ಯಾನಂದಸ್ವಾಮಿ ಸಹ ಹಾಜರಿದ್ದು ಮಾತನಾಡಿದರು.

ಉಸ್ತುವಾರಿ ಮಂತ್ರಿ ಶ್ರೀರಾಮುಲುಗೆ ಘೆರಾವೊ

ಜಿಲ್ಲಾಧಿಕಾರಿಗಳು ಕೊಟ್ಟ ಭರವಸೆ ಜಾರಿಗೆ ಬರಲಿಲ್ಲ. ಅರಣ್ಯ ಅಧಿಕಾರಿಗಳ/ ಸಿಬ್ಬಂಧಿಗಳ ಕಿರುಕುಳ ನಿಲ್ಲಲಿಲ್ಲ. ಯರಗೇರಾ ಗ್ರಾಮದಲ್ಲಿ ಅರಣ್ಯ ಭೂಮಿಯಲ್ಲಿ ಕೃಷಿ ಕೆಲಸದಲ್ಲಿ ನಿರತರಾದವರ ಮೇಲೆ ಅರಣ್ಯ ಇಲಾಖೆಯಾ ಸಿಬ್ಬಂಧಿಗಳು ಹಲ್ಲೆ ಮಾಡಿದರು. ಉಂಡ್ರಾಲ್‌ದೊಡ್ಡಿಯ ದಲಿತ ಮಹಿಳೆಯೊಬ್ಬಳು ಸಾಗುವಳಿಮಾಡುತ್ತಿದ್ದ ಭೂಮಿಯಲ್ಲಿ ಕಳೆ ತೆಗೆಯುವ ಕೆಲಸಮಾಡುತ್ತಿದಾಗ ಅರಣ್ಯ ಇಲಾಖೆಯ ಸಿಬ್ಬಂಧಿಯವರು ಬಂದು, ಅವಾಚ್ಯ ಶಬ್ದಗಳಿಂದ ಬೈದು ಅವಳ ಕೈಯಲ್ಲಿದ್ದ ಸಲಿಕೆಯನ್ನು ಕಸಿದುಕೊಂಡು ಹೋದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಯಚೂರು ತಾಲ್ಲೂಕ ಘಟಕ ಈ ದೌರ್ಜನ್ಯದ ಘಟನೆ ವಿರುದ್ಧ ಪ್ರತಿಭಟಿಸಿತು. ಜುಲೈ 11 ರಂದು ಸದರಿ ಗ್ರಾಮಗಳಿಂದ 300 ಕ್ಕೂ ಹೆಚ್ಚು ಜನ ಪುರುಷರು ಹಾಗೂ ಮಹಿಳೆಯರು ನಗರಕ್ಕೆ ಆಗಮಿಸಿ ಸಂಘದ ಕಛೇರಿಯಿಂದ ನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು. ಅರಣ್ಯ ಇಲಾಖೆಯವರು ಇದೇ ರೀತಿ ದೌರ್ಜನ್ಯ ಮುಂದುವರಿಸಿದರೆ ಆಗಸ್ಟ್ ತಿಂಗಳಲ್ಲಿ ಜಿಲ್ಲಾಧಿಕಾರಿ ಕಛೇರಿಯ ಎದುರು ಅನಿರ್ದಿಷ್ಟ ಸಾಮೂಹಿಕ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಸಲಾಯಿತು. ಕರಿಯಪ್ಪ ಅಚ್ಚೊಳ್ಳಿ, ಕೆ.ಜಿ. ವೀರೇಶ್, ಡಿ.ಎಸ್. ಶರಣಬಸವ, ಭೀಮಣ್ಣ, ಖಾಜಾಹುಸೇನ್, ಹನುಮಂತು ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಈ ನಡುವೆ ಅಂದು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದ ಶ್ರೀರಾಮುಲು ಜುಲೈ 20 ರಂದು ಚಿಕ್ಕಮಂಚಾಲ ಮತ್ತು ತಲಮಾರಿ ಗ್ರಾಮಗಳ ನೆರೆ ಸಂತ್ರಸ್ತರಿಗಾಗಿ ನಿರ್ಮಿಸಲಾದ ಮನೆಗಳನ್ನು ವಿತರಿಸಲು ಆಗಮಿಸಲಿದ್ದಾರೆ ಎಂಬ ಸುದ್ದಿತಿಳಿದ ಸಂಘದ ಕಾರ್ಯಕರ್ತರು ಮಂತ್ರಿಯನ್ನು ದಾರಿಯಲ್ಲಿ ಅಡ್ಡಗಟ್ಟಿ ಮನವಿ ಸಲ್ಲಿಸಲು ನಿರ್ಧರಿಸಿದರು. ಅಂದು ಬೆಳ್ಳಿಗೆ 9 ಗಂಟೆ ಒಳಗಾಗಿ ಸುಮಾರು ಒಂದು ಸಾವಿರ ಜನ ಅರಣ್ಯ ಭೂಮಿ ಸಾಗುವಳಿದಾರರು ನಿಗದಿತ ಸ್ಥಳದಲ್ಲಿ ಬಂದು ಸೇರಿಕೊಂಡಿದ್ದರು. ಸ್ಥಳೀಯ ಜನತಾದಳ(ಎಸ್) ಕಾರ್ಯಕರ್ತರು ಸಹ ಆಗಮಿಸಿದ್ದರು. ಮಂತ್ರಿಗಳ ಕಾರು ಬರುತ್ತಿದಂತೆ ಜನರೆಲ್ಲರೂ ರಸ್ತೆಗೆ ಅಡ್ಡವಾಗಿ ನಿಂತು ಸರ್ಕಾರದ ವಿರುದ್ಧ, ಅರಣ್ಯ ಇಲಾಖೆಯ ವಿರುದ್ಧ ಘೋಷಣೆ ಕೂಗಿದರು. ಜನರ ಸಂಖ್ಯೆಯನ್ನು ಗಮನಿಸಿದ ಪೊಲೀಸ್ ಅಧಿಕಾರಿಗಳು ಪ್ರತಿಭಟನಾಕಾರರೊಂದಿಗೆ ಸಹಕರಿಸಿದರು. ಮಂತ್ರಿ ಶ್ರೀರಾಮುಲು ಕಾರಿನಿಂದ ಇಳಿದು ಬಂದು ಮನವಿಯನ್ನು ಸ್ವೀಕರಿಸಿ, ಪ್ರತಿಭಟನಾಕಾರ ಅಹವಾಲುಗಳನ್ನು ಕೇಳಿದರು. ಸ್ಥಳದಲ್ಲೇ ಇದ್ದ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಬಡವರಿಗೆ ಅರಣ್ಯ

ಪುಟ 14 ಕ್ಕೆ

ಯುಪಿಎ-2 ಸರಕಾರದ ಜನ-ವಿರೋಧಿ ಸ್ವರೂಪವನ್ನು ಬಯಲು ಮಾಡುವ ಅದರ ವಿವಿಧ ಅಂಗಗಳ ಹೇಳಿಕೆಗಳು, ಕ್ರಿಯೆಗಳು, ಅದೇ ವೇಳೆಗೆ ಅದನನ್ನು ಮರೆಮಾಚುವ ಪ್ರಯತ್ನಗಳು ಕಳೆದೆರಡು ವಾರಗಳಲ್ಲಿ ಇನ್ನಷ್ಟು ಕಂಡು ಬಂದವು. ಈ ನಡುವೆ ತೆಲಂಗಾಣ ಚಳುವಳಿ ಒಂದು ತಿಂಗಳು ದಾಟಿದರೂ ತಾನೇ ಸೃಷ್ಟಿಸಿಕೊಂಡ ಇಕ್ಕಟ್ಟಿನಿಂದ ಹೊರಬರುವ ದಾರಿ ಅದಕ್ಕೆ ಕಾಣದಾಗಿದೆ. ಭೋಪಾಲ್ ಅನಿಲ ದುರಂತ ಪೀಡಿತರ ಅಕ್ಟೋಬರ್ 11 ರ 'ಭೋಪಾಲ್ ಬಂದ್' ಅವರಿಗೆ ನ್ಯಾಯ ಒದಗಿಸುವ ವಚನವನ್ನು ಮರೆತಿರುವುದನ್ನು, ಇನ್ನು ಕೂಡ ಈ ದುರಂತದಿಂದಾದ ಆರೋಗ್ಯ ನಷ್ಟದ ಪ್ರಮಾಣವನ್ನು ಲೆಕ್ಕ ಹಾಕದಿರುವುದನ್ನು, ಆಮೂಲಕ ಜನಗಳಿಗೆ ನೇರವಾಗಿ ಸಂಬಂಧಿಸಿದ ಪ್ರಶ್ನೆಗಳಲ್ಲಿ ಯುಪಿಎ-2 ಸರಕಾರದ ನಿಷ್ಕ್ರಿಯತೆಯನ್ನು ಮತ್ತೊಮ್ಮೆ ನೆನಪಿಸಿದೆ. ಕಲ್ಲಿದ್ದಲು ಕಾರ್ಮಿಕರ ಅಖಿಲ ಭಾರತ ಐಕ್ಯ ಮುಷ್ಕರ ವಿದೇಶಿಯರೂ ಸೇರಿದಂತೆ ಹೂಡಿಕೆದಾರರಿಗೆ ಲಾಭದ 39% ಕೊಟ್ಟರೆ, ಕಾರ್ಮಿಕರಿಗೆ ಕೇವಲ 13% ಕೊಡುವ ನಿಲುವಿನ ಹಿಂದಿರುವ ನವ-ಉದಾರವಾದಿ ಪಕ್ಷಪಾತವನ್ನು ಮತ್ತೊಮ್ಮೆ ಎತ್ತಿ ತೋರಿದೆ.


ಯುಪಿಎ-2 ಕಾನೂನು ಮಂತ್ರಿಗಳ ಈ 'ಕಳವಳ' !

"ವ್ಯಾಪಾರಸ್ಥರು ಕಂಬಿ ಎಣಿಸುವಂತೆ ಮಾಡಿದರೆ ದೇಶದಲ್ಲಿ ಹೂಡಿಕೆ ಕುಂಠಿತಗೊಳ್ಳುತ್ತದೆ"-ಇದು ಕೇಂದ್ರ ಕಾನೂನು ಮಂತ್ರಿಗಳ 'ಕಳವಳ'! ಅವರ ಈ ಹೇಳಿಕೆ ನಿಜವಾಗಿದ್ದರೆ, ಅದು ನಿಜಕ್ಕೂ ಕಳವಳಕಾರಿ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಹೇಳಿದೆ.

ಸುಪ್ರಿಂ ಕೋರ್ಟ್ ನ್ಯಾಯಾಧೀಶರುಗಳು ಈ ವ್ಯಾಪಾರಸ್ಥರನ್ನು ಕಂಬಿಗಳ ಹಿಂದಿಡಲು ಆಸಕ್ತರಾಗಿದ್ದಾರೆ ಎಂಬ ಭಾವನೆ ಈ ಹೇಳಿಕೆಯಿಂದ ಮೂಡುತ್ತದೆ ಎಂದು 2ಜಿ ಆಪಾದಿತರಾದ ಯುನಿಟೆಕ್ ಕಂಪನಿಯ ಮೆನೇಜಿಂಗ್ ಡೈರೆಕ್ಟರ್ ಮತ್ತು ಸ್ವಾನ್ ಟೆಲಿಕಾಮ್ಸ್‌ನ ಡೈರೆಕ್ಟರ್‌ಗಳ ಜಾಮೀನು ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರಿಂ ಕೋರ್ಟ್ ಪೀಠದ ನ್ಯಾಯಮೂರ್ತಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಇದರೊಂದಿಗೇ ಈ ಹಗರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಂಗ ಬಂಧನದಲ್ಲಿರುವ ಡಿಎಂಕೆ ಮುಖಂಡರಾದ ಕನ್ನಿಮೋಳಿಯವರ ಜಾಮೀನು ಅರ್ಜಿಯನ್ನು ಸಿಬಿಐ ವಿರೋಧಿಸುವುದಿಲ್ಲ ಎಂಬ ಸುದ್ದಿಯೂ ಮಾಧ್ಯಮಗಳಲ್ಲಿ ಹರಡಿತ್ತು. ಈ ಬಗ್ಗೆ ಸರ್ಕಾರದ ವಕೀಲರನ್ನು ಪ್ರಶ್ನಿಸಿದ ನ್ಯಾಯಮೂರ್ತಿಗಳು ಮಂತ್ರಿಗಳ ಹೇಳಿಕೆಯನ್ನು ಬೆಂಬಲಿಸುತ್ತೀರಾ, ಆಪಾದಿತರ ಜಾಮೀನು ಅರ್ಜಿಗಳ ಬಗ್ಗೆ ನಿಲುವು ಬದಲಿಸಿದ್ದೀರಾ ಎಂದು ಕೇಳಿದಾಗ, ಜಾಮೀನು ಅರ್ಜಿಯನ್ನು ವಿರೋಧಿಸಲು ತಮಗೆ ತಿಳಿಸಲಾಗಿದೆ ಎಂದು ಸರ್ಕಾರೀ ವಕೀಲರು. ಅದೇನೇ ಇರಲಿ, ಸರಕಾರದ ನಿಲುವು ಬದಲಾದರೂ ಅದು ನ್ಯಾಯಾಲಯದ ಕಲಾಪಗಳನ್ನು ತಟ್ಟುವುದಿಲ್ಲ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯ ಪಟ್ಟರು.

ಸರ್ಕಾರೀ ವಕೀಲರು ಏನೇ ಹೇಳಲಿ, ಮಾಜಿ ದೂರಸಂಪರ್ಕ ಮಂತ್ರಿಗಳ ಹೇಳಿಕೆಗಳಂತೆ ಹಾಲೀ ಕಾನೂನು ಮಂತ್ರಿಗಳ ಹೇಳಿಕೆಯೂ 'ಪ್ರಾಮಾಣಿಕ ನವ-ಉದಾರವಾದಿ ಕಳವಳ' ಎಂಬುದರಲ್ಲಿ ಸಂದೇಹವಿಲ್ಲ. ತಾನು ಈ ಹೇಳಿಕೆ ನೀಡಿದ್ದು 2ಜಿ ಹಗರಣಕ್ಕೆ ಸಂಬಂಧಪಟ್ಟಂತೆ ಅಲ್ಲ ಎಂದು ಕಾನೂನು ಮಂತ್ರಿಗಳು ಸಮಜಾಯಿಷಿ ಕೊಡಲು ಪ್ರಯತ್ನಿಸಿದರೂ, 'ಸಾಮಾನ್ಯವಾಗಿ ಜಾಮೀನು ಕೊಡಬೇಕು, ಜೈಲಿಗೆ ಕಳಿಸುವುದು ಅಪವಾದವಾಗಬೇಕು' ಎಂದು ಸುಪ್ರಿಂ ಕೋರ್ಟ್ ಹೇಳಿದೆಯಲ್ಲಾ, ಮಾವೋವಾದಿಗಳ ಬಗ್ಗೆ ಸಹಾನುಭೂತಿಯಿರುವ ಬಿನಾಯಕ್ ಸೆನ್ ಅವರು ನಿರಪರಾಧಿಗಳು ಎಂದು ಹೇಳದಿದ್ದರೂ ಅವರನ್ನು ಜೈಲಿನಲ್ಲಿಡುವ ಅಗತ್ಯ ಇಲ್ಲ ಎಂದು ಹೇಳಿಲ್ಲವೇ ಎಂದು ತಮ್ಮ ಬಂಡವಾಳಶಾಹಿ-ಪರ 'ಕಳವಳ'ವನ್ನು ಪುನರುಚ್ಚರಿಸಿದ್ದಾರೆ. ಅಷ್ಟೇ ಅಲ್ಲ, ಬದಲಾದ ಸನ್ನಿವೇಶವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು, ಅದರಂತೆ ವರ್ತಿಸಬೇಕು ಎನ್ನುತ್ತ ಆರ್ಥಿಕ ವಿಷಯಗಳಲ್ಲಿ ನ್ಯಾಯಾಂಗ ಹಾಗೆ ಮಾಡುತ್ತಿಲ್ಲ ಎಂದು ಪರೋಕ್ಷವಾಗಿ ಸೂಚಿಸಿದರು.

ಕೃಪೆ : ದಿ ಹಿಂದು



ಕಾರ್ಮಿಕ ವರ್ಗದ ಅನುಭವಕ್ಕೆ ಬಂದಿರುವಂತೆ ನ್ಯಾಯಾಂಗ ಜನಗಳ ಸಂಕಟಗಳನ್ನು ಹೆಚ್ಚಿಸಿರುವ ನವ-ಉದಾರವಾದಿ ಧೋರಣೆಗಳನ್ನೇನೂ ವಿರೋಧಿಸಿಲ್ಲ. ಆದರೆ ನವ-ಉದಾರವಾದಿಗಳು ತಮ್ಮ ನೀತಿಗಳ ಜಾರಿಯಲ್ಲಿ ತಾವೇ ಮಾಡಿದ ಕಾನೂನುಗಳ ಅವಹೇಳನ ಮಾಡಿದರೆ ಬೇರೇನು ಮಾಡಲು ಸಾಧ್ಯ?

★

ದಿನಕ್ಕೆ 32ರೂ. ಬಡತನ ರೇಖೆ ಅಷ್ಟೇನೂ ಹಾಸ್ಯಾಸ್ಪದ ಅಲ್ಲವಂತೆ!

ಅದು ಹಾಸ್ಯಾಸ್ಪದವೇನೂ ಅಲ್ಲ ಎಂದವರು ನವ-ಉದಾರವಾದಿ ದಾರಿಯಲ್ಲಿ ಯುಪಿಎ-2 ಪ್ರಧಾನಿಗಳ ಪ್ರಮುಖ ಸಹಯೋಗಿಯಾಗಿರುವ



ವೇದರಾಜ ಎನ್.ಕೆ.

ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರು. ಸುಪ್ರಿಂ ಕೋರ್ಟಿನೆದುರು 32ರೂ./26ರೂ. ಬಡತನದ ರೇಖೆಯ ಅಫಿಡವಿಟ್ ಸಲ್ಲಿಸಿ ದೇಶದೆಲ್ಲೆಡೆಯಿಂದ ಛೀಮಾರಿ ಹಾಕಿಸಿಕೊಂಡಿರುವ ಯೋಜನಾ ಆಯೋಗದ ಉಪಾಧ್ಯಕ್ಷರು ಮತ್ತು ಯುಪಿಎ-2 ಸರಕಾರದ ಪರವಾಗಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಈ ಬಡತನದ ರೇಖೆ ಬಿಪಿಎಲ್ ಸೌಲಭ್ಯಗಳನ್ನು ನಿರಾಕರಿಸುವ ಮಾನದಂಡವಾಗುವುದಿಲ್ಲ, ಆದರೂ ಅದು ಮುಂದುವರೆಯುತ್ತದೆ ಎಂದು ಸಮಜಾಯಿಷಿ ನೀಡಿದ್ದರು. ಹಾಗಿದ್ದರೆ ಇಂತಹ ಹಾಸ್ಯಾಸ್ಪದ ಬಡತನದ ರೇಖೆಯ ನಿರೂಪಣೆಯಾದರೂ ಏತಕ್ಕೆ ಎಂಬ ಪ್ರಶ್ನೆ ಬಂದಿತ್ತು.

ಈಗ "ಬಡತನವನ್ನು ನಿರೂಪಿಸಲು ಐದು ಮಂದಿಯ ಒಂದು ಕುಟುಂಬಕ್ಕೆ ರೂ.4824 ತಿಂಗಳ ಆದಾಯ ಸಮಾಧಾನಕರವಲ್ಲದಿದ್ದರೂ ಭಾರತೀಯ ಪರಿಸ್ಥಿತಿಗಳಲ್ಲಿ ಎಲ್ಲರೂ ಹೇಳುವಷ್ಟು ಹಾಸ್ಯಾಸ್ಪದವೇನೂ ಅಲ್ಲ" ಎಂದು ಯೋಜನಾ ಆಯೋಗದ ಉಪಾಧ್ಯಕ್ಷರು 'ಆಹಾರದ ಹಕ್ಕು ಆಂದೋಲನ' ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆಯಲ್ಲಿ ಯೋಜನಾ ಆಯೋಗದ ಪರ ವಕಾಲತ್ತು ನಡೆಸಲಿರುವ ಭಾರತದ ಅಟಾರ್ನಿ ಜನರಲ್ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. ಬಿಪಿಎಲ್ ಸೌಲಭ್ಯಗಳಿಗೆ ಬಡತನದ ರೇಖೆ ಮಾನದಂಡವಾಗುವುದಿಲ್ಲ ಎಂಬ ಹೇಳಿಕೆ ಮಾರುಕಟ್ಟೆ-ಪ್ರೇರಿತವಾದ ನವ-ಉದಾರವಾದೀ ನಿಲುವು ಮತ್ತು ಸದ್ಯದ ರಾಜಕೀಯ ವಾಸ್ತವತೆಯ ನಡುವಿನ ಒಂದು ರಾಜಿ ಸಂಧಾನವಷ್ಟೇ, ಯುಪಿಎ-2 ಸರಕಾರದ 'ಆಮ್-ಆದ್ಮಿ' ಸೋಗನ್ನು ಉಳಿಸಿಕೊಳ್ಳುವ ಪ್ರಯತ್ನವಷ್ಟೇ ಎಂಬ ವಿಶ್ಲೇಷಣೆಯನ್ನು ಇದು ಬಲಪಡಿಸಿದೆ.

ಯುಪಿಎ-2 ಸರಕಾರದ ವಿವಿಧ ಅಂಗಗಳು ನಾಚಿಕೆಯಿಲ್ಲದೆ ಸರಕಾರದ ಜನ-ವಿರೋಧಿ ನೀತಿಗಳ ಬಗ್ಗೆ ಜನಗಳಲ್ಲಿ ಗೊಂದಲ ಹುಟ್ಟಿಸಲು ಪ್ರಯತ್ನಿಸುತ್ತಿರುವುದು ಅದರ ಕರುಣಾಜನಕ ಸ್ಥಿತಿಯನ್ನು ತೋರಿಸುತ್ತದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಟೀಕಿಸಿದೆ. ಹತ್ತು ಹಲವು ಹಗರಣಗಳು ಮತ್ತು ಭೂಮಾಫಿಯಾಗಳು ಹಾಗೂ ಖಾಸಗೀ ಕಂಪನಿಗಳೊಂದಿಗೆ ಮೋಸದ ವ್ಯವಹಾರಗಳ ಮೂಲಕ ನೈಸರ್ಗಿಕ ಸಂಪತ್ತನ್ನು ಲೂಟಿ ಹೊಡೆಯಲು ಅನುಕೂಲ ಕಲ್ಪಿಸಿಕೊಟ್ಟಿದೆ ಎಂಬ ಕುಖ್ಯಾತಿ ಗಳಿಸಿರುವ ಯುಪಿಎ-2 ಆಹಾರ ಭದ್ರತೆಯ ಕಾನೂನಿನ ಹೆಸರಿನಲ್ಲಿ ಭಾರತೀಯ ಜನತೆಗೆ ಆಹಾರದ ಹಕ್ಕನ್ನು ನಿರಾಕರಿಸಿ ಇನ್ನೊಂದು ಕಪ್ಪು ಚುಕ್ಕೆಯನ್ನು ಹೊಂದಲು ಮುಂದಾಗಬಾರದು ಎಂದು ಅದು ಎಚ್ಚರಿಸಿದೆ. ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೆ ತಂದಾಗ ಮಾತ್ರ ಇಂತಹ ಮೋಸಗಳನ್ನು ನಿಲ್ಲಿಸಲು ಸಾಧ್ಯ.

★

ಹೆಣ್ಣು ಭ್ರೂಣಗಳ 'ದತ್ತು' !

ಭಾರತದ ಯೋಜನಾ ಆಯೋಗ ಇನ್ನೊಂದು ವಿಲಕ್ಷಣ ಪ್ರಸ್ತಾವವನ್ನು ಮುಂದಿಟ್ಟಿದೆ, ಅದಕ್ಕೆ ಯುಪಿಎ-2 ಸರಕಾರದ ಆರೋಗ್ಯ, ಮಾನವ ಸಂಪನ್ಮೂಲ, ಪಂಚಾಯತೀ ರಾಜ್ಯ ಮತ್ತು ಸುದ್ದಿ ಮತ್ತು ಪ್ರಸಾರ ಇಲಾಖೆಗಳ ಒಟ್ಟಾರೆ ಒಪ್ಪಿಗೆಯೂ ಇದೆಯಂತೆ. ಲಿಂಗ ಅನುಪಾತ ಆತಂಕಕಾರಿಯಾಗಿ ಇಳಿಯುತ್ತಿರುವ ಸನ್ನಿವೇಶದಲ್ಲಿ ಭ್ರೂಣಗಳ ಲಿಂಗ ಪತ್ತೆಯ ನಿಷೇಧವನ್ನು ಸಂಪೂರ್ಣವಾಗಿ ಜಾರಿಗೆ ತರುವಲ್ಲಿ ಸರಕಾರ ವಿಫಲವಾಗಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಾದರೂ ಆ ನಿಷೇಧವನ್ನು ಸಡಿಲಗೊಳಿಸಿ, (ಬೇಡವೆನಿಸಿದ) ಹೆಣ್ಣು ಭ್ರೂಣಗಳನ್ನು ಸರಕಾರ 'ದತ್ತು' ತೆಗೆದುಕೊಂಡು ಹೆಣ್ಣು ಮಗುವಿನ ಸುರಕ್ಷಿತ ಹೆರಿಗೆಯಾಗುವಂತೆ ಸಂಬಂಧಪಟ್ಟ ಕುಟುಂಬಗಳಿಗೆ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಉತ್ತೇಜಕಗಳನ್ನು ಒದಗಿಸಬೇಕು ಎಂಬುದು ಈ ಪ್ರಸ್ತಾವದ ಸಾರಾಂಶ.

ಇದು ಪ್ರತಿಗಾಮಿ ಪ್ರಸ್ತಾವ, ಈ ಮೂಲಕ ಹೆಣ್ಣು ಮಗು ಬೇಡ ಎನ್ನುವುದು ಒಂದು 'ಆಯ್ಕೆಯ ಸ್ವಾತಂತ್ರ್ಯ'ದ ಪ್ರಶ್ನೆ ಎಂಬ ತರ್ಕಕ್ಕೆ ಮತ್ತೆ ಮಾನ್ಯತೆ ನೀಡಲು ಯೋಜನಾ ಆಯೋಗ ಮುಂದಾಗಿದೆ, ಇದು ಸುಪ್ರಿಂ ಕೋರ್ಟ್ ಈಗಾಗಲೇ ತಿರಸ್ಕರಿಸಿರುವ ತರ್ಕ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ. ಮಹಿಳಾ ಸಂಘಟನೆಗಳು ಮತ್ತು ಆರೋಗ್ಯ ಹಕ್ಕುಗಳ ಸಂಘಟನೆಗಳ ದೀರ್ಘ ಹೋರಾಟಗಳ ನಂತರ ಲಿಂಗ ಆಯ್ಕೆಯನ್ನು, ಅದಕ್ಕಾಗಿ ನಡೆಸುವ ಲಿಂಗಪತ್ತೆ ಪರೀಕ್ಷೆಗಳನ್ನು ನಿಷೇಧಿಸುವ ಕಾನೂನು ಬರಲು ಸಾಧ್ಯವಾಗಿದೆ. ಇದನ್ನು ಸುಪ್ರಿಂ ಕೋರ್ಟ್ ಎತ್ತಿ ಹಿಡಿದಿದೆ. ಲಿಂಗ ಪತ್ತೆ ಪರೀಕ್ಷೆಗಳು ಮತ್ತು ಲಿಂಗ ಆಯ್ಕೆಯ ಇತರ ವಿಧಾನಗಳಿಂದ ಭಾರೀ ಹಣ ಮಾಡುವ ಅವಕಾಶಗಳನ್ನು ಕಲ್ಪಿಸಿಕೊಂಡಿದ್ದ ವೈದ್ಯಕೀಯ ವಲಯದ ಕೆಲವು ವಿಭಾಗಗಳ ಭಾರೀ ವಿರೋಧವನ್ನು ಎದುರಿಸಿ ಈ ಕಾನೂನು ತರಲು ದೊಡ್ಡ ಹೋರಾಟಗಳನ್ನೇ ಮಾಡಬೇಕಾಗಿ ಬಂದಿತ್ತು.

ಈ ಕಾನೂನಿನ ಜಾರಿಯಲ್ಲಿ ವಿಫಲತೆಗಳಿರುವುದು 2001 ಮತ್ತು 2011ರ ಜನಗಣತಿ ಮಾಹಿತಿಗಳಿಂದ ಸಾಬೀತಾಗುತ್ತದೆ.

ಪುಟ 15 ಕ್ಕೆ

....ಬಡವರಿಗೆ ಸಾವ ಕೊಡಬೇಡೊ

ಪುಟ 9ರಿಂದ

ಬದಲು ಅವರ ಸ್ಥಿತಿಯನ್ನು ಅಣಕಿಸುವ ಈ ಮಾತುಗಳಿಗೆ ಏನಾದರೂ ಅರ್ಥವಿದೆಯೇ? ಇವರನ್ನು ಮನುಷ್ಯರೆನ್ನಬೇಕೇ?

ಊರಿಗೆ ಕನಿಷ್ಟ ರಸ್ತೆಯಿಲ್ಲ.ಕುಡಿಯುವ ನೀರಿಲ್ಲ.ಅಂಗನವಾಡಿ ಕೇಂದ್ರಗಳಿಗೆ ಕನಿಷ್ಟ ಸೌಲಭ್ಯಗಳಿಲ್ಲ. ಉದ್ಯೋಗ ಖಾತ್ರಿ ಯೋಜನೆ ಕಾಯ್ದೆಯಡಿಯಲ್ಲಿ ಕೆಲಸದ ವಾಸನೆಯೂ ಕಂಡುಬರಲಿಲ್ಲ. ಊರಿನ ನಿರುದ್ಯೋಗಿ ಯುವಕರನ್ನು ಈ ಕುರಿತು ಮಾತನಾಡಿಸಿದರೆ ಅಯ್ಯೋ ಅದನ್ನೆಲ್ಲ ಯಾರು ಕೇಳಬೇಕು, ಎಲ್ಲ ರಾಜಕಾರಿಣಿಗಳು ತಿಂದು ಹಾಕುತ್ತಾರೆ ಎಂದು ತಮ್ಮ ಸಿಟ್ಟು ಕಾರುತ್ತಾರೆ.

ಪೌಷ್ಟಿಕತೆಯ ಹೆಸರಿನಲ್ಲಿ ಕೊಡುತ್ತಿರುವ ಆಹಾರಕ್ಕೆ ರುಚಿಯೂ ಇಲ್ಲ ಸ್ವಾದವೂ ಇಲ್ಲ. ಹಿಂದೆ ಕೊಡುತ್ತಿದ್ದ ಹೆಸರುಕಾಳಿಗೆ ಬದಲಾಗಿ ಕುರ್ಕುರೇ ಎಂಬ ಮಣ್ಣಿನ ಉಂಡೆಯಂತಹ ವಸ್ತುವೊಂದನ್ನು ಕೊಡಲಾಗುತ್ತಿದೆ. ಒಂದು ಮಗುವಿಗೆ 4 ರೂಪಾಯಿ ವೆಚ್ಚ! ಇದರಲ್ಲಿ ಎಂತಹ ಪೋಷಕಾಂಶವಿದ್ದೀತು. ಸರ್ಕಾರ ಈ ಆಹಾರವನ್ನು ವಿತರಿಸಲು ತೀರ್ಮಾನ ಮಾಡಿದಾಗಲೇ ಅಂಗನವಾಡಿ ನೌಕರರ ಸಂಘಟನೆ ವಿರೋಧಿಸಿತ್ತು. ಕಿವುಡು ಸರ್ಕಾರ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಯಾಕೆಂದರೆ ಕುರ್ಕುರೆ ತಯಾರಿಸುವ ಕಂಪನಿಗೆ ಪೌಷ್ಟಿಕತೆಯ ಅಗತ್ಯವಿದೆಯಲ್ಲ.!

ಒಂದು ಊರಿನ ಪಕ್ಕದಲ್ಲಿ ಇತ್ತೀಚೆಗೆ ನಾಲೆಯೊಂದು ನಿರ್ಮಾಣವಾಗಿದೆ. ಅದರಿಂದ ನೇರವಾಗಿ ಕುಡಿಯುವ ನೀರಿನ ಪೈಪುಗಳನ್ನು ಹಳ್ಳಿಗೆ ಅಳವಡಿಸಲಾಗಿದೆ. ಆ ಬಗ್ಗೆ ಖುಷಿ ಪಡುವ ಹಳ್ಳಿಗರು ಸಣ್ಣ ಧ್ವನಿಯಲ್ಲಿ ಹೇಳುತ್ತಿರುವುದು ಕೆಲವು ದಿನ ಶವಗಳೂ ತೇಲಿ ಬರುತ್ತವೆ. ಆದರೆ ಏನು ಮಾಡುವುದು? ಇದು ನಮ್ಮ ರಾಜ್ಯ ಸರ್ಕಾರ ಹೆಗ್ಗಳಿಸಿಕೊಳ್ಳುತ್ತಿರುವ ಅಭಿವೃದ್ದಿಯ ಸ್ಪಷ್ಟ ಮಾದರಿ.

ರಾಜ್ಯದ ಒಂದು ತಾಲೂಕಿನ ಮಾದರಿ ಇದು. ಆದರೆ ರಾಯಚೂರು ಸುತ್ತಮುತ್ತ ಇಂತಹ ಸ್ಥಿತಿ ಸಾಮಾನ್ಯವೆಂದು ಅಲ್ಲಿಯ ಪ್ರಜ್ಞಾವಂತ ಜನ ಹೇಳುತ್ತಿದ್ದಾರೆ. ಸರ್ಕಾರದ ದಿವ್ಯ ನಿರ್ಲಕ್ಷ್ಕಕ್ಕೆ ಜನ ದಿಕ್ಕಾರ ಹೇಳುವುದೊಂದೇ ದಾರಿ. ಈ ಲೇಖನವನ್ನು ಸಿದ್ಧಪಡಿಸುತ್ತಿರುವಾಗ ಅದೇ ತಾಲೂಕಿನ ಜಾಲಹಳ್ಳಿ ಸರ್ಕಲ್‌ನಲ್ಲಿ ಮತ್ತೊಂದು ಮಗು ಸಾವನ್ನಪ್ಪಿದೆ. ಇದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು ಗೊತ್ತೇ? ಸ್ಥಳೀಯ ಅಂಗನವಾಡಿ ಸೂಪರ್‌ವೈಸರ್ ಮತ್ತು ಕಾರ್ಯಕರ್ತೆಯರ ಮೇಲೆ ಶಿಸ್ತು ಕ್ರಮ. ಸಮಸ್ಯೆಯ ಮೂಲ ಇರುವುದನ್ನು ಮರೆಮಾಚಿ ಜನರ ಕಣ್ಣಿಗೆ ಮಣ್ಣೆರಚುವ ತಂತ್ರವಿದು. ಜನ ಇದನ್ನು ಪ್ರತಿಭಟಿಸಲೇಬೇಕು.





ಡಬ್ಲ್ಯೂಟಿಯು ಕರೆಯಂತೆ ಜಾಗತಿಕ ಕಾರ್ಯಾಚರಣೆ ದಿನವನ್ನು ಅಕ್ಟೋಬರ್ 3 ರಂದು ಕಾರವಾರದಲ್ಲಿ ಯಶಸ್ವಿಗೊಳಿಸಲಾಯಿತು. ಸಿಐಟಿಯು ನೇತೃತ್ವದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮುಖಂಡರಾದ ಶಾಂತಾರಾಮ ನಾಯಕ, ಯಮುನಾ ಗಾಂವಕರ, ಶ್ಯಾಮನಾಥ ನಾಯ್ಕ, ಮೋಹಿನಿ ನಮ್ಸೇಕರ, ಜಯಶ್ರೀ ಗೌಡ ಮುಂತಾದವರು ಹಾಜರಿದ್ದರು.

ಅರಣ್ಯ ಭೂಮಿ ಹಕ್ಕಿಗಾಗಿ ......

ಪುಟ 12 ರಿಂದ

ಇಲಾಖೇಯವರು ಯಾವುದೇ ತೊಂದರೆ ಮಾಡದಂತೆ ನೋಡಿಕೊಳ್ಳಲು ಆದೇಶ ಮಾಡಿದರು. ಬಡ ಅರಣ್ಯ ಭೂಮಿ ಸಾಗುವಳಿದಾರರಲ್ಲಿ ಈ ಪ್ರತಿಭಟನೆಯಿಂದಾಗಿ ಹೆಚ್ಚಿನ ಉತ್ಸಾಹ ಮೂಡಿ ಬರುವಂತಾಯಿತು. ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದ ಸ್ವಾಮಿ, ಹಾಗೂ ಜಿಲ್ಲಾ ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿಬಿ ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ

ಈ ನಡುವೆ ಹಳ್ಳಿ ಹಳ್ಳಿಗಳಲ್ಲಿ ಸಭೆಗಳನ್ನು ನಡೆಸಿ, ಆಗಸ್ಟ್ 25 ರಿಂದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ಆಶ್ರಯದಲ್ಲಿ ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ನಡೆಯಲಿರುವ ಅನಿರ್ಧಿಷ್ಟ ಸಾಮೂಹಿಕ ಧರಣಿಯಲಿ ರಾಯಚೂರು ತಾಲ್ಲೂಕಿನ ಅರಣ್ಯ ಭೂಮಿ ಸಾಗುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸು ವಂತೆ ಸಿದ್ದತೆಗಳನ್ನು ನಡೆಸಲಾಯಿತು. ಅಂದು ಎರಡೂ ಸಂಘಗಳ ಜಿಲ್ಲಾ ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿ, ಮಲ್ಲಯ್ಯ ಜಾಲಹಳ್ಳಿ, ಕೆ.ಜಿ.ವೀರೇಶ್, ತಿಪ್ಪಯ್ಯ ನಾಯಕ್, ನಾರಾಯಣ ಕಿಲ್ಲೇದ್, ಹನುಮನಗೌಡರ ನೇತೃತ್ವದಲ್ಲಿ ಆರಂಭವಾದ ಸಾಮೂಹಿಕ ಧರಣಿಯಲ್ಲಿ 300 ಕ್ಕೂ ಹೆಚ್ಚು ಜನ ರಾಯಚೂರು, ದೇವದುರ್ಗ, ಸಿಂಧನೂರು ಮತ್ತು ಲಿಂಗಸೂರು ತಾಲ್ಲೂಕುಗಳಿಂದ ಬಂದು ಭಾಗವಹಿಸಿದ್ದರು. ಸಂಗಾತಿ ನಿತ್ಯಾನಂದ ಸ್ವಾಮಿಯವರು ಧರಣಿಯನ್ನು ಉದ್ಘಾಟಿಸಿ ಮಾತನಾಡಿದರು. ಸಂಜೆಗೆ ಜಿಲ್ಲಾಧಿಕಾರಿ ಆಗಮಿಸಿದರು. ಅರಣ್ಯ ಭೂಮಿ ಸಾಗುವಳಿದಾರರ ಸಮಸ್ಯೆಗಳ ಬಗ್ಗೆ ಚರ್ಚಿಸಲು 2-9-11ರಂದು ಸಭೆಯನ್ನು ನಿಗದಿಪಡಿಸುದಾಗಿ ಭರವಸೆ ನೀಡಿದ ಅವರು ಧರಣಿಯನ್ನು ಹಿಂತೆಗೆದುಕೊಳ್ಳಲು ಮನವಿ ಮಾಡಿದರು. ಜಿಲ್ಲಾಧಿಕಾರಿ ನೀಡಿದ ಲಿಖಿತ ಭರವಸೆಯನ್ನು ಒಪ್ಪಿಕೊಂಡು ಧರಣಿ ಸತ್ಯಾಗ್ರಹವನ್ನು ಒಂದೇ ದಿನಕ್ಕೆ ಮುಕ್ತಾಯ ಗೊಳಿಸಲಾಯಿತು.

2-9-11. ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನಿಗದಿತ ಸಭೆ ನಡೆಯಿತು. ಜಿಲ್ಲಾಧಿಕಾರಿಗಳು ಉಪಸ್ಥಿತರಿದ್ದು ಸಭೆಯನ್ನು ನಡೆಸಿದರು. ಸಭೆಯಲ್ಲಿ ರಾಯಚೂರು ಉಪವಿಭಾಗಾಧಿಕಾರಿ, ಎಲ್ಲಾ ತಾಲ್ಲೂಕು ತಹಶಿಲ್ದಾರರು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಅರಣ್ಯ ಅಧಿಕಾರಿ ಮತ್ತು ಎಲ್ಲ ಅರಣ್ಯ ವಲಯ ಅಧಿಕಾರಿಗಳು ಹಾಜರಿದ್ದರು. ಕೃಷಿ ಕೂಲಿಕಾರರ ಹಾಗೂ ರೈತರ ಪರವಾಗಿ ನಿತ್ಯಾನಂದಸ್ವಾಮಿ, ಕರಿಯಪ್ಪ ಅಚ್ಚೊಳ್ಳಿ, ತಿಪ್ಪಯ್ಯ ನಾಯಕ್, ಮಲ್ಲಯ್ಯ ಜಾಲಹಳ್ಳಿ, ಕೆ.ಜಿ.ವೀರೇಶ್ ಮತ್ತು ರೈತ ಕೂಲಿಕಾರರ ಪ್ರತಿನಿಧಿಗಳು ಹಾಜರಿದ್ದರು.

ಸಭೆಯಲ್ಲಿ ಅರಣ್ಯ ಸಾಗುವಳಿದಾರರ ದೂರುಗಳನ್ನು ಕೇಳಿದ ಜಿಲ್ಲಾಧಿಕಾರಿಗಳು, ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಿರುವವರ ಮೇಲೆ ಕೈ ಮಾಡುವುದು ಸೇರಿದಂತೆ ಕಾನೂನನ್ನು ಕೈಗೆತ್ತಿಕೊಳ್ಳುವ ಯಾವುದೇ ಕೆಲಸವನ್ನು ಮಾಡಕೂಡದೆಂದು ಹೇಳಿದರು. ಸಂಬಂಧಪಟ್ಟ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಿ ಅರಣ್ಯ ಸಾಗುವಳಿದಾರರ ಬಳಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಎಲ್ಲಾ ತಹಶಿಲ್ದಾರರಿಗೆ ತಿಳಿಸಿದರು. ಇಂತಹ ಪರಿಶೀಲನಾ ಸಮಯದಲ್ಲಿ ಅರಣ್ಯ ಇಲಾಖೆಯವರು ತಮ್ಮ ಬಳಿ ಇರುವ ದಾಖಲೆಗಳೊಂದಿಗೆ ಹಾಜರಿರುವಂತೆ ಸೂಚಿಸಿದರು.

ಶ್ರೀಮಂತರು ಒತ್ತುವರಿ ಮಾಡಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ತಮ್ಮದೇನೂ ವಿರೋಧವಿಲ್ಲ ಎಂದು ಕೂಲಿಕಾರರ ಮುಖಂಡರು ಸ್ಪಷ್ಟ ಪಡಿಸಿದರು. ತಮ್ಮದು ಒತ್ತುವರಿ ಅಲ್ಲ, ಭೂಮಿ ಇಲ್ಲದವರು ಮಾಡಿಕೊಂಡಿರುವ ಅನಧಿಕೃತ ಸಾಗುವಳಿ, ಹೊಸ ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ತಮಗೆ ಭೂಮಿಯ ಹಕ್ಕು ಪತ್ರ ನೀಡಬೇಕೆಂದು ರೈತ- ಕೂಲಿಕಾರರು ಆಗ್ರಹಿಸಿದರು. ಆದರೆ ಸಭೆಯಲ್ಲಿ ಹಾಜರಿದ್ದ ಸಮಾಜ ಕಲ್ಯಾಣ ಅಧಿಕಾರಿ ಮಾತನಾಡಿ 2006 ರ ಅರಣ್ಯ ಹಕ್ಕುಗಳ ಕಾಯ್ದೆ ಅರಣ್ಯದಲ್ಲೇ ವಾಸ ಇರುವ ಬುಡಕಟ್ಟುಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಹೇಳಿದರು. ಇವರ ಈ ವಾದವನ್ನು ವಿರೋಧಿಸಿ ಮಾತನಾಡಿದ ನಿತ್ಯಾನಂದಸ್ವಾಮಿ ಅವರ ಜೀವನ ನಿರ್ವಹಣೆಗಾಗಿ ಅರಣ್ಯ ಭೂಮಿಯನ್ನೇ ಅವಲಂಬಿಸಿರುವ ಬೇಡ, ನಾಯಕ, ವಾಲ್ಮೀಕಿ ಮೊದಲಾದ ಅನುಸೂಚಿತ ಬುಡಕಟ್ಟುಗಳಾಗಲಿ, ಲೋಬಾರ್ ಮೊದಲಾದ ಅನುಸೂಚಿತ ಜಾತಿಗಳಾಗಲಿ, "ಇತರ ಪಾರಂಪರಿಕ ಅರಣ್ಯವಾಸಿ" ಗಳೆಂದು ಪರಿಗಣಿಸಬೇಕಾಗುತ್ತದೆ, ಎಂದರಲ್ಲದೇ ಇಂತಹ ವಿವಾದಗಳನ್ನು ಕೋರ್ಟಿನಲ್ಲಿ ಬಗೆಹರಿಸಬೇಕಾಗಿದ್ದು ಕಾಯ್ದೆ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಲು ನಿರಾಕರಿಸಬಾರದು ಎಂದು, ಕಾನೂನಿಗೆ ಸಂಬಂಧಪಟ್ಟು ಈ ವಿವಾದವನ್ನು ಅರಣ್ಯ ಭೂಮಿ ಸಾಗುವಳಿ ಪ್ರಶ್ನೆ ಇರುವುದರಿಂದ ಅವರನ್ನು ಸಂಘಟಿಸಿ, ಅರಣ್ಯಭೂಮಿ ಹಕ್ಕಿಗಾಗಿ ರಾಜ್ಯವ್ಯಾಪ್ತಿ ಹೋರಾಟವೊಂದನ್ನು ರೂಪಿಸಲು ಸಾಧ್ಯವಾಗಬೇಕು. ಕಾನೂನಿನಲ್ಲಿರುವ ತೊಡಕುಗಳನ್ನು ನಿವಾರಣೆ ಮಾಡಿಕೊಳ್ಳಲು ಕಾಯ್ದೆ ತಿದ್ದುಪಡಿಗಾಗಿ ಒತ್ತಾಯಿಸಲು ಕೇಂದ್ರ ಸರ್ಕಾರದ ಗಮನ ಸೆಳೆಯುವಂತಹ ಹೋರಾಟ ಅತ್ಯಗತ್ಯವಾಗಿದೆ.

*

ಕಡಲತಡಿ....

ಟ 6 ರಿಂದ


ಮತ್ತಿತರ ಸಂಘಟನೆಗಳ ಕಾರ್ಯಕರ್ತರು ರಭವನದಿಂದ ಜಿಲ್ಲಾಧಿಕಾರಿ ಚೇರಿವರೆಗೆ ಮೆರವಣಿಗೆ ಡೆಸಿದವು. ಬಳಿಕ ್ರದರ್ಶನಕಾರರನ್ನುದ್ದೇಶಿಸಿ .ಮಾಧವ. ಬಿ.ಎಂ.ಮಾಧವ, ಚ್.ಆರ್.ರಾಘವೇಂದ್ರ ರಾವ್ ುತ್ತು ಶೇಷಗಿರಿ ರಾವ್ ುರಾತ ನಾಡಿ ಬ್ಲ್ಯೂಎಫ್‌ಟಿಯೂನ ೇಡಿಕೆಗಳ ಮಹತ್ವವನ್ನು ಸ್ತಾಪಿಸಿದರು. ವಸಂತ ಆಚಾರಿ ್ವಾಗತಿಸಿ, ಸುನೀಲ್ ಕುಮಾರ್ ಬಜಾಲ್ ಂದಿಸಿದರು.

ಉಡುಪಿಯಲ್ಲಿ ನಡೆದ ವಿಶ್ವ ಕಾರ್ಯಾಚರಣೆ ನಾಚರಣೆಯಲ್ಲಿ ಸಿಐಟಿಯು ಮುಖಂಡ .ವಿಶ್ವನಾಥ ರೈ ಮಾತನಾಡಿದರು. ಕಾರ್ಮಿಕ ುಖಂಡರಾದ ಕೆ.ಶಂಕರ್, ದೋಗು ುವರ್ಣ, ವೆಂಕಟೇಶ್ ಕೋಣಿ, ರಮೇಶ್ ುಂಡನ್, ಮಹಾಬಲ ವಡೇರಹೋಬಳಿ, ುಷ್ಪಾ ಮಲ್ಲಾರ್, ಬಿಲ್ಕೀಸ್ ಬಾನು, ಶಶಿಧರ ೊಲ್ಲ, ವಿದ್ಯಾರಾಜ್ ಮತ್ತಿತರರು ಾಗವಹಿಸಿದ್ದರು. ಇದಕ್ಕೂ ಮೊದಲು ಉಡುಪಿ ಾಲೂಕು ಕಚೇರಿ ಬಳಿಯಿಂದ ಸರ್ವಿಸ್ ಬಸ್ ್ಲ್ಯಾಣದವರೆಗೆ ಕಾರ್ಮಿಕರ ಮೆರವಣಿಗೆ ಡೆದಿದ್ದು, ಬಳಿಕ ಕ್ಲಾಕ್ ಟವರ್ ಬಳಿ ಪ್ರದರ್ಶನ ಡೆಸಲಾಯ್ತು.

ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ಬೆಳ್ತಂಗಡಿಯಲ್ಲಿ ಸಿಪಿಎಂ ಧರಣಿ

ವೇಶನ ರಹಿತರಿಗೆ ನಿವೇಶನ, ಅಕ್ರಮ ಕ್ರಮೀಕರಣ, ಪಡಿತರ ವ್ಯವಸ್ಥೆಯ ರ್ವತ್ರೀಕರಣ, ತಡೆಯಿಲ್ಲದೆ ವಿದ್ಯುತ್ ಪೂರೈಕೆ, ದ್ಯೋಗ ಖಾತ್ರಿ ಯೋಜನೆ ಸಮರ್ಪಕ ನುಷ್ಠಾನ – ಇವೇ ಮೊದಲಾದ ಬೇಡಿಕೆಗಳ ೀಡೇರಿಕೆಗಾಗಿ ಬೆಳ್ತಂಗಡಿ ತಾಲೂಕು ಿಐ(ಎಂ) ನೇತೃತ್ವದಲ್ಲಿ ಪಕ್ಷದ ತಾಲೂಕು ಮ್ಮೇಳನದ ಅಂಗವಾಗಿ ಅಕ್ಟೋಬರ್ 3 ರಂದು ಳ್ತಂಗಡಿ ತಾಲೂಕು ಕಚೇರಿ ಎದುರು ೂರಾರು ಮಂದಿ ನಾಗರಿಕರು ಪ್ರತಿಭಟನಾ ರಣಿ ಏರ್ಪಡಿಸಿದರು.

ಧರಣಿಯನ್ನುದ್ದೇಶಿಸಿ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್, ಸಿಪಿಎಂ ದ.ಕ.ಜಿಲ್ಲಾ ಸಮಿತಿ ಸದಸ್ಯ ಬಿ.ಎಂ.ಭಟ್ ಮಾತನಾಡಿದರು. ಬಳಿಕ



ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಸಿಪಿಎಂ ತಾಲೂಕು ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್, ಜಯರಾಮ ಮಯ್ಯ, ಶೇಖರ್ ಎಲ್, ಸುಕನ್ಯಾ, ಶ್ಯಾಮರಾಜ್ ಮುಂತಾದವರು ಧರಣಿಯ ನೇತೃತ್ವ ವಹಿಸಿದ್ದರು.

★

ಅಲ್ಲಲ್ಲಿ ನಿವೇಶನ ರಹಿತರ ಹೋರಾಟಗಳು

ಸ್ವಂತ ನಿವೇಶನ ಇಲ್ಲದವರಿಗೆ ನಿವೇಶನ ಸರ್ಕಾರ ನೀಡಬೇಕೆಂದು, ಸರ್ಕಾರೀ ಜಾಗದಲ್ಲಿ ವಾಸವಿರುವವರಿಗೆ ಹಕ್ಕು ಪತ್ರ ನೀಡಬೇಕೆಂದು ಹಾಗೂ ಅಕ್ರಮ–ಸಕ್ರಮೀಕರಣಕ್ಕಾಗಿ ಒತ್ತಾಯಿಸಿ ಅಲ್ಲಲ್ಲಿ ನಿವೇಶನ ರಹಿತರ ಪ್ರತಿಭಟನೆಗಳು ನಡೆದವು. ಉಳ್ಳಾಲ ವಲಯದಲ್ಲಿ ಡಿವೈಎಫ್ಐ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ಜಂಟಿಯಾಗಿ ಪ್ರತಿಭಟನೆಗಳನ್ನು ಸಂಯೋಜಿಸಿದ್ದರೆ ಇತರ ವಲಯಗಳಲ್ಲಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರಚಿಸಲಾದ ಭೂಮಿ ಹೋರಾಟ ಸಮಿತಿಗಳು ಪ್ರತಿಭಟನೆಗಳನ್ನು ಏರ್ಪಡಿಸಿತ್ತು.

ಅಂಬ್ಲಮೊಗರು: ಅಂಬ್ಲಮೊಗರಿನಲ್ಲಿ ಎರಡೂ ಸಂಘಟನೆಗಳು ಜಂಟಿ ಮೆರವಣಿಗೆ ನಡೆಸಿ, ಗ್ರಾಮ ಪಂಚಾಯತ್ ಮುಂದೆ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು. ಉಳ್ಳಾಲ ವಲಯ ಡಿವೈಎಫ್ಐ ಕಾರ್ಯದರ್ಶಿ ಅಶೋಕ್ ಶೆಟ್ಟಿ, ಡಿವೈಎಫ್ಐನ ಇಬ್ರಾಹಿಂ ಮದಕ, ಜಯಂತ ಮದಕ, ಉಳ್ಳಾಲ ವಲಯ ಸಿಐಟಿಯು ಮುಖಂಡ ಜಯಂತ ನಾಯ್ಕ್, ಸಲೀಂ, ಇಬ್ರಾಹಿಂ, ಪ್ರಕಾಶ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಳ್ಳಾಲ: ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಹೋರಾಟ ಸಮಿತಿಯ ವತಿಯಿಂದ ಅಕ್ಟೋಬರ್ 3 ರಂದು ಮಾಸ್ತಿಕಟ್ಟೆ ಎಂಬಲ್ಲಿಂದ ಮೆರವಣಿಗೆ ಹೊರಟು ಪುರಸಭಾ ಕಚೇರಿವರೆಗೆ ಸಾಗಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು. ಡಿವೈಎಫ್ಐ ಉಳ್ಳಾಲ ವಲಯ ಅಧ್ಯಕ್ಷ ಮಹಾಬಲ ದೆಪ್ಪೆಲಿಮಾರ್, ಕಾರ್ಯದರ್ಶಿ ಅಶೋಕ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಬಂಟ್ವಾಳ: ಬಂಟ್ವಾಳ ಪುರಸಭಾ ವ್ಯಾಪ್ತಿಯಲ್ಲಿ ಹೋರಾಟ ಸಮಿತಿಯ ವತಿಯಿಂದ ಅಕ್ಟೋಬರ್ 4 ರಂದು ಬಿ.ಸಿ.ರೋಡಿನಿಂದ ಬಂಟ್ವಾಳ ಪುರಸಭಾ ಕಚೇರಿ ವರೆಗೆ ನಿವೇಶನ ರಹಿತರ ಮೆರವಣಿಗೆ ಸಾಗಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಬಂಟ್ವಾಳ ತಾಲೂಕು ರೈತ ಸಂಘದ ಅಧ್ಯಕ್ಷ ರಾಮಣ್ಣ ವಿಟ್ಲ, ಕಾರ್ಯದರ್ಶಿ ನಾರಾಯಣ ಬಡಕಬ್ಬೈಲು ಮಾತನಾಡಿದರು. ರೈತ ಕಾರ್ಮಿಕ ಮುಖಂಡರಾದ ವಾಸು ಗಟ್ಟಿ, ಸಂಜೀವ ಬಂಗೇರ, ಶೀನ ಬಂಗೇರ ಉಪಸ್ಥಿತರಿದ್ದರು.

❄



ಯುಪಿಎ ದರ್ಬಾರ್ ....

ಪುಟ 13 ರಿಂದ

ಆದರೆ ಇದಕ್ಕೆ ಕಾರಣ ಸರಕಾರೀ ಯಂತ್ರ ಮತ್ತು ವೈದ್ಯ ವೃತ್ತಿಯ ಈ ವಿಭಾಗದ ಶಾಮೀಲು. ಈ ದುಷ್ಟಕೂಟವನ್ನು ಎದುರಿಸಿ, ಪಟ್ಟಭದ್ರ ಹಿತಾಸಕ್ತಿಗಳನ್ನು ಬಯಲಿಗೆಳೆಯುವ ಬದಲು ಯೋಜನಾ ಆಯೋಗ ಕಾನೂನಿನ ರಕ್ಷಣೆಯನ್ನೇ ಬುಡಮೇಲು ಮಾಡುವ ಪ್ರಸ್ತಾವವನ್ನಿಟ್ಟಿದೆ ಎಂದು ಜನವಾದಿ ಮಹಿಳಾ ಸಂಘಟನೆ ಟೀಕಿಸಿದೆ. ಇದು ಅನಾಥ ಹೆಣ್ಣು ಮಕ್ಕಳ ಸಂಖ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಬಹುದಷ್ಟೇ. ಅನಾಥಾಲಯಗಳಲ್ಲಿ ಹೆಣ್ಣು ಮಕ್ಕಳ ದುಸ್ಥಿತಿಯ ಹಲವಾರು ವರದಿಗಳು ನಮ್ಮ ಕಣ್ಣ ಮುಂದಿವೆ. ಈಗ ಬೇಕಾಗಿರುವುದು ಹೆಣ್ಣು ಭ್ರೂಣಗಳ 'ದತ್ತಿ'ಗೆ ಉತ್ತೇಜಕಗಳಲ್ಲ, ಹೆಣ್ಣು ಮಕ್ಕಳ ಜನನಕ್ಕೆ ಉತ್ತೇಜನೆ ಕೊಡುವ, ಲಿಂಗ ತಾರತಮ್ಯವನ್ನು ನಿರ್ಮೂಲ ಮಾಡುವ ಆರ್ಥಿಕ, ಮತ್ತು ಸಾಮಾಜಿಕ ಕ್ರಮಗಳು ಎಂದಿರುವ ಸಂಘಟನೆ ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಯೋಜನಾ ಆಯೋಗ ಮತ್ತು ಮೇಲೆ ಹೇಳಿದ ಸರಕಾರೀ ಇಲಾಖೆಗಳಿಗೆ ಇದರ ವಿರುದ್ಧ ಅರ್ಜಿ ಸಲ್ಲಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದೆ.

★

ರಸಗೊಬ್ಬರ ದುಷ್ಟಕೂಟದಲ್ಲಿ ಯುಪಿಎ ಸರಕಾರವೂ ಶಾಮೀಲು

"ರಸಗೊಬ್ಬರಗಳಿಗೆ 45% ರೈತರು ಗರಿಷ್ಟ ಚಿಲ್ಲರೆ ಬೆಲೆ(ಎಂಆರ್‌ಪಿ)ಗಿಂತ ಹೆಚ್ಚು ಹಣ ತೆರುತ್ತಾರೆ, 60% ದಷ್ಟು ರೈತರಿಗೆ ಅಗತ್ಯ ರಸಗೊಬ್ಬರ ಬೇಕಾದ ಸಮಯದಲ್ಲಿ ಸಿಗುತ್ತಿಲ್ಲ. ಸೀಜನ್ನುಗಳಲ್ಲಿ ವರ್ತಕರು ಕೃತಕ ಅಭಾವಗಳನ್ನು ಸೃಷ್ಟಿಸಿ ಬೆಲೆಗಳನ್ನು ಎಂಆರ್‌ಪಿ ಗಿಂತ ಮೇಲಕ್ಕೇರಿಸುವ ಸಮಸ್ಯೆ ಇದೆ"– ಇದು ಯಾವುದೇ ರೈತ ಸಂಘಟನೆಯ ಟಿಪ್ಪಣಿ ಅಲ್ಲ. ಭಾರತದ ಮಹಾಲೆಕ್ಕ ಪರಿಶೋಧಕರ ಕಚೇರಿಯ(ಸಿಎಜಿ) ಇತ್ತೀಚಿನ ವರದಿಯಲ್ಲಿನ ಒಂದು ಟಿಪ್ಪಣಿ. ಇಷ್ಟೇ ಅಲ್ಲ, ಯುಪಿಎ–2 ಸರಕಾರದ ರಸಗೊಬ್ಬರ ನೀತಿಯನ್ನೂ ಕೂಡ ಅದು ದೂಷಿಸಿದೆ. ಯೂರಿಯಾದ ಹೊಸ ಬೆಲೆ ನಿರ್ಧಾರಣಾ ಸ್ಕೀಮನ್ನು ಕೂಡ ಅದು ಟೀಕಿಸಿದೆ. ಸರಕಾರದ ಧೋರಣೆ ರಸಗೊಬ್ಬರದ ಆಮದಿಗೆ ಒತ್ತು ನೀಡಿ ಕೃಷಿಯ ಈ ಪ್ರಮುಖ ಅಗತ್ಯದ ಸ್ಥಳೀಯ ಉತ್ಪಾದನೆಯಿಂದ ಗಮನವನ್ನು ಬೇರೆಡೆಗೆ ತಿರುಗಿಸುತ್ತಿದೆ ಎಂಬುದು ಅದರ ಟೀಕೆ.

ಕಳೆದ ತಿಂಗಳು ಯೂರಿಯಾದ ಬೆಲೆಗಳ ಮೇಲಿನ ಹತೋಟಿಯನ್ನು ತೆಗೆದು ಹಾಕಲು ಯುಪಿಎ–2 ಸರಕಾರ ನಿರ್ಧರಿಸಿತು. ಇದಕ್ಕೆ ಮೊದಲೇ ಕಳೆದ ವರ್ಷ 10% ಏರಿದ್ದ ಯೂರಿಯಾದ ಬೆಲೆಗಳು ಈ ವರ್ಷ ಇನ್ನೂ 10% ಏರಿವೆ. ಇದಕ್ಕೆ ಮೊದಲು ಯೂರಿಯೇತರ ಗೊಬ್ಬರಗಳ ಬೆಲೆಗಳ ಮೇಲೆ ಇದ್ದ ಅಲ್ಪ–ಸ್ವಲ್ಪ ಹತೋಟಿಗಳನ್ನೂ ಒಂದು ಅಧಿಸೂಚನೆಯ ಮೂಲಕ ಈ ಸರಕಾರ ತೆಗೆದು ಹಾಕಿತ್ತು.

'ಪೋಷಕಾಂಶ ಆಧಾರಿತ ಸಬ್ಸಿಡಿ' (ಎನ್‌ಬಿಎಸ್) ಎಂಬ ವ್ಯವಸ್ಥೆಯನ್ನು ಆರಂಭಿಸಿರುವ ಯುಪಿಎ–2 ಸರಕಾರ, ಇದು ಸಮತೋಲದ ಗೊಬ್ಬರ ಬಳಕೆಗಾಗಿ ಎಂದಿತ್ತು. ಆದರೆ ವಾಸ್ತವವಾಗಿ ಇದು ರಸಗೊಬ್ಬರಗಳ ಬೆಲೆಗಳ ಮೇಲಿನ ಹತೋಟಿ ತೆಗೆಯಲಿಕ್ಕಾಗಿ ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ ಟೀಕಿಸಿತ್ತು. ಅದೀಗ ನಿಜವಾಗಿದೆ. ಈ ವ್ಯವಸ್ಥೆ ಮತ್ತು ಬೆಲೆಗಳ ಹತೋಟಿ ರದ್ದತಿಯನ್ನು ಪ್ರತಿಭಟಿಸಬೇಕು, ಭ್ರಷ್ಟ ಸರಕಾರ, ಗೊಬ್ಬರ ತಯಾರಕರ ಕೂಟಗಳು, ವರ್ತಕರು ಮತ್ತು ಕಾಳಸಂತೆಕೋರರ ಈ ದುಷ್ಟಕೂಟವನ್ನು ಬಯಲಿಗೆಳೆಯಬೇಕು ಎಂದು ರೈತರಿಗೆ ಅದು ಕರೆ ನೀಡಿದೆ.

✣

ಚಳವಳಿಗಳಿಲ್ಲದ, ಪ್ರತಿಭಟನೆಯಿಲ್ಲದ, ಪರ್ಯಾಯ ಚಿಂತನೆಗಳಿಲ್ಲದ ಸಮಾಜ-ದೇಶ ಯಾವತ್ತೂ ಅಪಾಯಕಾರಿಯೇ. ಇಂಥ ಸಮಾಜ-ದೇಶಗಳು ಏಕಕಾಲಕ್ಕೆ ದುರಹಂಕಾರಿಯೂ, ನೈಜ ಪ್ರಜಾಪ್ರಭುತ್ವ ವಿರೋಧಿಯೂ, ಮನುಷ್ಯತ್ವ ವಿರೋಧಿಯೂ ಆಗಿರುತ್ತದೆ. ಅಮೆರಿಕದಲ್ಲಿ ಆರಂಭವಾಗಿರುವ ಜನಾಂದೋಲನ ಈ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ್ದು. ಈ ಬಗ್ಗೆ ಬೆಳಕು ಚೆಲ್ಲುವ ಲೇಖನವನ್ನು ಹರ್ಷಕುಮಾರ್ ಕುಗ್ವೆ ಬರೆದಿದ್ದಾರೆ. ಇದು ನಿಮಗಿಷ್ಟವಾದೀತು

-'ಸಂಪಾದಕೀಯ'ಬ್ಲಾಗ್‌ನಿಂದ ಆಯ್ದ ಭಾಗ

ಈಗ ಇಲ್ಲಿ ಪ್ರಕಟವಾಗಿರುವುದು 'ಸಂಪಾದಕೀಯ' ಬ್ಲಾಗ್‌ನಲ್ಲಿ ಪ್ರಕಾಶಿತವಾದ ಲೇಖನದ ಮೊದಲ ಭಾಗ. ನಮ್ಮ ಹೆಚ್ಚಿನ ಪತ್ರಿಕೆ-ಟಿ.ವಿ.ಗಳಲ್ಲಿ ಕಾಣದ ಆದರೆ ಬಹಳ ಮಹತ್ವದ ಬೆಳವಣಿಗೆಗಳ ಬಗ್ಗೆ ಓದಿ... ಓದಿಸಿ...

'ವಾಲ್‌ಸ್ಟ್ರೀಟ್' ವಶಪಡಿಸಿಕೊಳ್ಳಿ ಅಮೆರಿಕಾದಲ್ಲಿ ಆಂದೋಲನ

ಹಲವಾರು ದಿನಗಳಿಂದ ನನಗೆ ಒಂದು ಬಯಕೆಯಿತ್ತು. ಅಮೆರಿಕವೇ ಅಮೆರಿಕದ ವಿರುದ್ಧ ಬಂಡೆದ್ದು ನಿಲ್ಲಬೇಕು ಎನ್ನುವ ಬಯಕೆ ಅದು. ಕಳೆದ ಸೆಪ್ಟೆಂಬರ್ 17ರಿಂದ ಅಮೆರಿಕದಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ನೋಡಿ ಕೊಂಚ ಥ್ರಿಲ್ ಆಗುತ್ತಿದೆ. ಜಗತ್ತಿನೆಲ್ಲೆಡೆ ನಡೆಯುತ್ತಿರುವ ಜನಾಂದೋಲನಗಳ ಸಾಲಿನಲ್ಲಿ ಈಗ ಅಮೆರಿಕದ ಜನರೂ ಹೊಸ ಹೆಜ್ಜೆ ಇಟ್ಟಿರುವುದು ನೋಡಿ ಖುಷಿಯಾಗಿದೆ. ಈ ಬಂಡಾಯ ಎಲ್ಲಿಯವರೆಗೆ ನಡೆಯುತ್ತದೆ, ಏನು ಸಾಧಿಸುತ್ತದೆ, ಯಾವುದೂ ಖಾತ್ರಿಯಿಲ್ಲ. ಆದರೆ ಜಗತ್ತಿನ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯೂ ಮುಕ್ತ ಮನಸ್ಸಿನಿಂದ ಬೆಂಬಲಿಸಬೇಕಾದ ಚಳವಳಿ ಇದು ಎಂದು ಮಾತ್ರ ಹೇಳಬಹುದು. ಇದಕ್ಕೆ ಕಾರಣಗಳನ್ನು ಸ್ವಲ್ಪ ವಿವರವಾಗಿ ಗಮನಿಸುವ ಮುನ್ನ ಇಲ್ಲಿ ಏನೇನಾಗುತ್ತಿದೆ ಎಂದು ನೋಡೋಣ.

ನಿಜಕ್ಕೂ ಅಚ್ಚರಿಯ ಹಾಗೂ ಬೇಸರದ ಸಂಗತಿಯೆಂದರೆ ಅಲ್ಲಿ ನಡೆಯುತ್ತಿರುವ ಇಂತಹ ಒಂದು ಅದ್ಭುತ ಬೆಳವಣಿಗೆಗೆ ನಮ್ಮ ಮಾಧ್ಯಮಗಳ ಪ್ರತಿಕ್ರಿಯೆ ಏನೂ ಇಲ್ಲವೆನ್ನುವಷ್ಟರ ಮಟ್ಟಿಗೆ ಸೊನ್ನೆಯಾಗಿರುವುದು. ಇದು ಮಾಧ್ಯಮಗಳ ಜಾಣಮೌನವಾ? ಇದು ಇಲ್ಲಿನ ಮಾಧ್ಯಮಗಳ ಪರಿಸ್ಥಿತಿ ಮಾತ್ರವಲ್ಲ. ಅಮೆರಿಕದ ಮುಖ್ಯವಾಹಿನಿ ಮಾಧ್ಯಮಗಳೂ ಬೇಕೆಂದೇ ಈ ಚಳವಳಿಯ ಕುರಿತು ಉಪೇಕ್ಷೆಯನ್ನೂ ಹಾಗೂ ಅಪಪ್ರಚಾರವನ್ನೂ ನಡೆಸುತ್ತಿವೆ. ಈಜಿಪ್ಟಿನ, ಲಿಬಿಯಾದ, ಅಥವಾ ನಮ್ಮದೇ ಅಣ್ಣಾ ಚಳವಳಿಗಳನ್ನು ಮುಖಪುಟದಲ್ಲಿ ವಾರಗಟ್ಟಲೆ ವರದಿ ಮಾಡಿದ ಪತ್ರಿಕೆಗಳಿಗೆ, ಟೀವಿ ಚಾನಲ್‌ಗಳಿಗೆ ಈಗ ಕನಿಷ್ಟ ಒಂದು ವರದಿಯನ್ನೂ ಮಾಡದಿರುವಂತದ್ದು ಏನಾಗಿದೆ?!

ಈಗ ಅಮೆರಿಕದಲ್ಲಿ ಆರಂಭಗೊಂಡಿರುವ ಚಳವಳಿ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ'ಚಳವಳಿ. ಮೊದಲಿಗೆ ಹತ್ತಾರು ಸಂಖ್ಯೆಯಲ್ಲಿ ಚಳವಳಿಗಾರರು ಆರಂಭಿಸಿದ ಈ ಚಳವಳಿಯಲ್ಲಿ ದಿನಕಳೆದಂತೆ ಸಾವಿರ ಸಾವಿರ ಸಂಖ್ಯೆಯಲ್ಲಿ ಜನರು ಅದರಲ್ಲೂ ಮುಖ್ಯವಾಗಿ ಹೊಸಪೀಳಿಗೆಯ ವಿದ್ಯಾರ್ಥಿಗಳು, ಯುವಕರು, ಕಾರ್ಮಿಕರು ಸೇರಿಕೊಳ್ಳುತ್ತಿದ್ದಾರೆ. ಮಾತ್ರವಲ್ಲ 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳವಳಿಯನ್ನು ಇದುವರೆಗೆ ವಾಷಿಂಗ್ಟನ್ ಡಿಸಿ, ಬೋಸ್ಟನ್, ಚಿಕಾಗೋ, ಫಿಲಡೆಲ್ಫಿಯಾ, ಹೂಸ್ಟನ್, ಪೋರ್ಟ್‌ಲೆಂಟ್,



ಓರೆಗಾಂವ್, ಸಿಯಾಟಲ್, ಹೂಸ್ಟನ್, ಟೆಕ್ಸಾಸ್, ಮುಂತಾದ ಹತ್ತಾರು ಕಡೆಗಳಲ್ಲಿ ಅದೇ ಮಾದರಿಯ ಚಳವಳಿಗಳೂ ಆರಂಭಗೊಳ್ಳುತ್ತಿವೆ. ಮೊದಮೊದಲು ಇದನ್ನು ಬರೀ ಪಡ್ಡೆ ಹುಡುಗರ ಬಂಡಾಯ ಎಂದು ಉಪೇಕ್ಷೆ ಮಾಡಿದ್ದವರಿಗೆ ಈಗ ಆಘಾತವಾಗಿದೆ. ಅಮೆರಿಕದ ಹಲವಾರು ದೊಡ್ಡ ಕಾರ್ಮಿಕ ಸಂಘಟನೆಗಳೂ ನೆನ್ನೆಯಷ್ಟೇ ತಮ್ಮ ಬಹಿರಂಗ ಬೆಂಬಲವನ್ನು ಘೋಷಿಸಿವೆ. ವಾಲ್‌ಸ್ಟ್ರೀಟ್ ಬಳಿ ಇರುವ ಝುಕ್ಕೊಟ್ಟಿ ಪಾರ್ಕ್‌ನಲ್ಲಿ ನೂರಾರು ಕಾರ್ಯಕರ್ತರು ಕಾರ್ಡ್‌ಬೋರ್ಡ್ ಜೋಪಡಿ ಕಟ್ಟಿಕೊಂಡು ಕಳೆದ ಹದಿನೈದು ಇಪ್ಪತ್ತು ದಿನಗಳಂದ ಜಾಂಡಾ ಹೂಡಿದ್ದರೆ ಇವರಿಗೆ ಬೆಂಬಲವಾಗಿ ಅಮೆರಿಕದಾದ್ಯಂತ ಸಾವಿರಾರು ಜನರು ಕೇರಾಫ್ 'ಆಕ್ಯುಪೈ ವಾಲ್‌ಸ್ಟ್ರೀಟ್' ವಿಳಾಸಕ್ಕೆ ತಮ್ಮ ಕೈಲಾಗುವಂತಾದ್ದನ್ನೆಲ್ಲಾ ಸಹಾಯ ಮಾಡುತ್ತಿದ್ದಾರೆ. ಊಟ, ಬಟ್ಟೆ, ಬರೆ, ಮೊಬೈಲ್ ಫೋನ್‌ಗಳಿಗೆ ಬೇಕಾದ ಬ್ಯಾಟರಿಗಳು, ಬ್ಯಾಕಪ್ ಸರಕುಗಳು, ಬಾರಿಸಲು ಡ್ರಮ್‌ಗಳು, ಪೀಪಿಗಳು, ಹೀಗೆ ಏನೇನು ಸಾಧ್ಯವೋ ಎಲ್ಲಾ ಅಂಚೆಯ ಮೂಲಕ ಹರಿದು ಬರುತ್ತವೆ. ಒಟ್ಟಾರೆಯಾಗಿ ನಿಧಾನಕ್ಕೆ ಈ ಬಂಡಾಯ ಒಂದು ಬೃಹತ್ ಜನಾಂದೋಲನವಾಗಿ ಚಳವಳಿಯಾಗುವ ಲಕ್ಷಣಗಳು ಕಾಣಿಸುತ್ತಿದ್ದು, ಕಳೆದ ಒಂದು ದಶಕದಲ್ಲಿ ಅಮೆರಿಕದಲ್ಲಿ ವ್ಯವಸ್ಥೆಯ ವಿರುದ್ಧ ಜನಸಾಮಾನ್ಯರಲ್ಲಿ ಮಡುಗಟ್ಟಿರುವ ಆಕ್ರೋಶವನ್ನು ಗಮನಿಸಿದರೆ ಈ ಸೂಚನೆ ತೋರುತ್ತದೆ.

ಇಲ್ಲಿ ನಡೆಯುತ್ತಿರುವುದು ಭಾರತದಲ್ಲಿ ಅಣ್ಣಾ ಹಜಾರೆ ಕೇವಲ ಕಾಂಗ್ರೆಸ್ ವಿರುದ್ಧ ನಡೆಸಿದಂತೆ ಬರೀ ಒಬಾಮಾ ಸರ್ಕಾರದ ನೀತಿಗಳ ವಿರುದ್ಧ ಮಾತ್ರವಲ್ಲ. ಇಡೀ ಜಗತ್ತಿನ ಹಣಕಾಸು ಮಾರುಕಟ್ಟೆಯನ್ನು ತನ್ನ ಬೆರಳ ತುದಿಯಲ್ಲಿ ಕುಣಿಸುತ್ತಿರುವ 'ವಾಲ್‌ಸ್ಟ್ರೀಟ್'ನ ಹಣಕಾಸು ಸರ್ವಾಧಿಕಾರದ ವಿರುದ್ಧ ನಡೆಯುತ್ತಿರುವ ಚಳವಳಿ ಇದು.

ಈಗ ನಡೆಯುತ್ತಿರುವ ಚಳವಳಿಯ ರೂಪುರೇಷೆಯನ್ನು ಮೊದಲು ನೀಡಿದ್ದು



ಕೆನಡಾದಲ್ಲಿರುವ 'ಅಡ್‌ಬಸ್ಟರ್' ಎಂಬ ಗುಂಪು. ಈ ಗುಂಪಿನ ಸಲಹೆ ಮೇರೆಗೆ ಹೋರಾಟದ ರೂಪುರೇಷೆಯನ್ನು ಸಿದ್ಧಗೊಂಡು ಸೆಪ್ಟೆಂಬರ್ 17ರಂದು ಚಳವಳಿ ಆರಂಭವಾಯಿತು. ಈ ಚಳವಳಿಯವರು ತಮ್ಮ ಹೋರಾಟವನ್ನು ಘೋಷಿಸಿಕೊಂಡಿರುವುದು ಹೀಗೆ- "ಈಜಿಪ್ಟ್, ಗ್ರೀಸ್, ಸ್ಪೇನ್ ಹಾಗೂ ಐಸ್‌ಲ್ಯಾಂಡ್‌ಗಳಲ್ಲಿನ ನಮ್ಮ ಸಹೋದರಂತೆಯೇ ನಾವು ಕ್ರಾಂತಿಕಾರಿ ಅರಬ್ ಬಂಡಾಯವನ್ನು ಅಮೆರಿಕದಲ್ಲಿ ಪ್ರಜಾಪ್ರಭುತ್ವವನ್ನು ಪುನರ್‌ಸ್ಥಾಪಿಸಲು ಬಳಸುತ್ತಿದ್ದೇವೆ. ಇದರಲ್ಲಿ ಭಾಗವಹಿಸುವ ಪ್ರತಿಯೊಬ್ಬರ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ನಾವು ಅಹಿಂಸಾ ಮಾರ್ಗವನ್ನು ಬಳಸುತ್ತಿದ್ದೇವೆ. ...'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಒಂದು ನಾಯಕರಹಿತ ಚಳವಳಿ. ಇದರಲ್ಲಿ ಬೇರೆ ಬೇರೆ ವರ್ಣ, ಲಿಂಗ, ರಾಜಕೀಯ ದೃಷ್ಟಿಕೋನಗಳ ಜನರು ಭಾಗವಹಿಸುತ್ತಿದ್ದಾರೆ. ನಮ್ಮೆಲ್ಲರಲ್ಲಿರುವ ಸಮಾನ ಅಂಶವೆಂದರೆ 1% ಜನರ ದುರಾಸೆ ಹಾಗೂ ಭ್ರಷ್ಟಾಚಾರವನ್ನು 99%ಜನರಾದ ನಾವು ಇನ್ನು ಮುಂದೆ ಸಹಿಸಲು ಸಾಧ್ಯವೇ ಇಲ್ಲ"

ಇಲ್ಲಿ ಮೊಳಗುತ್ತಿರುವ ಘೋಷಣೆಗಳನ್ನೂ ನೋಡಿ- "ನಾವು ಬಹಳ ಮಂದಿ, ಅವರು ಕೆಲವೇ ಮಂದಿ. ನಾವು ಎದ್ದು ನಿಂತರೆ ಅವರೇನು ಮಾಡ್ತಾರೆ?", "ಅವರು ಎಷ್ಟು ಅಂತ ಶ್ರೀಮಂತರಾಗುತ್ತಲೇ ಹೋಗುತ್ತಾರೆ? ಮೊದಲು ವಿದ್ಯಾರ್ಥಿಗಳ ಎಲ್ಲಾ ಸಾಲ ಮನ್ನಾ ಮಾಡಿ", "ಅವರು ಹೇಳ್ತಾರೆ ಕಟ್ ಬ್ಯಾಕ್, ನಾವು ಹೇಳ್ತೀವಿ- ಫೈಟ್ ಬ್ಯಾಕ್ ಸಾಲಪಾವತಿಗೆ ಒಂದೇ ದಾರಿ- ಯುದ್ಧ ನಿಲ್ಲಿಸಿ, ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸಿ". ಹೀಗೆ ಇಂತಹ ಹಲವಾರು ಘೋಷಣೆಗಳನ್ನು ಹಾಕುತ್ತಾ ಹುಮ್ಮಸ್ಸಿನಿಂದ ಪಾಲ್ಗೊಳ್ಳುತ್ತಿರುವ ಕಾರ್ಯಕರ್ತರ ಚಳುವಳಿ ಇಂದಿನ ಸಂದರ್ಭದಲ್ಲಿ ಜಾಗತಿಕ ಮಟ್ಟದ ಪ್ರಾಮುಖ್ಯತೆ ಇದೆ.

ಈ ಚಳವಳಿಯ ಹಲವಾರು ಬೇಡಿಕೆಗಳಲ್ಲಿ ಪ್ರಮುಖವಾದವೆಂದರೆ,

* ಜನರ ಎಲ್ಲಾ ಬಗೆಯ ಸಾಲಗಳನ್ನು ಮನ್ನಾ ಮಾಡಬೇಕು.
* ಸಾಮಾಜಿಕ ಭದ್ರತಾ ಕ್ರಮಗಳನ್ನು ರದ್ದುಗೊಳಿಸದೇ ಹೆಚ್ಚಿಸಬೇಕು.
* ಸರ್ಕಾರದ ಆದಾಯ ಹೆಚ್ಚಿಸಲಿಕ್ಕಾಗಿ ಶೇಕಡಾ 10ಷ್ಟು ಶ್ರೀಮಂತರ ಮೇಲೆ

ಪುಟ 10ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12,18th Cross, S.R.Nagar, BANGALORE - 560 027 Karnataka (State) and Published at BANGALORE No. 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH